ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 5 ಗುರುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 314 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಜೆಟ್ ಬಳಿಕ ಪಿಕ್ಚರ್ ಬಾಕಿ...!

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕ ನುಡಿ



ಬೆಂಗಳೂರು, ಮಾ.4(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂಗಡ ಪತ್ರ ಮಂಡನೆ ನಂತರದ ಬೆಳವಣಿಗೆ ಕಾದು ನೋಡಿ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ನುಡಿದಿದ್ದಾರೆ.

ವೈ.ಜಿ.ಗುಡ್ಡ ಏತ ನೀರಾವರಿ ಶಂಕುಸ್ಥಾಪನೆ ಕಾರ್ಯಕ್ರಮದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಈ ಬಗ್ಗೆ ಹೆಚ್ಚು ಮಾತನಾಡಲು ಹೋಗುವುದಿಲ್ಲ. ವಿದೇಶಕ್ಕೆ ತೆರಳಿದ್ದ ನಮ್ಮ ಪಕ್ಷದ ಶಾಸಕರು ಹಿಂತಿರುಗಿದ್ದಾರೆ. ಅವರು ನೀಡುತ್ತಿರುವ ಹೇಳಿಕೆಗಳನ್ನು ಗಮನಿಸುತ್ತಿದ್ದೇನೆ ಎಂದರು.

ಬಜೆಟ್ ನಿರೀಕ್ಷೆ ಇಟ್ಟುಕೊಂಡು ಕೆಲಸ ಮಾಡುವ ಅಗತ್ಯವಿಲ್ಲ, ನಾವು, ನಮ್ಮದೇ ನೀತಿಗಳನ್ನು ಇಟ್ಟುಕೊಂಡಿದ್ದು ಅದರಂತೆ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿರುತ್ತೇವೆ.

ಪೆನ್ನು–ಪೇಪರು ನಮ್ಮ ಬಳಿ ಇರುವಾಗ, ಬಜೆಟ್ ಅವಲಂಭಿಸಿ ಕೆಲಸ ಮಾಡುವ ಅಗತ್ಯ ಇಲ್ಲ. ರಾಜ್ಯಾದ್ಯಂತ 2,000 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ತೆರೆಯುತ್ತಿದ್ದೇವೆ ಇದನ್ನು ಮುಂಗಡಪತ್ರದಲ್ಲಿ ಘೋಷಿಸಿರಲಿಲ್ಲ. ಪ್ರತಿ ಶಾಲೆಗೆ 15 ಕೋಟಿ ರೂ. ವೆಚ್ಚ ಮಾಡುತ್ತೇವೆ. ಈಗಾಗಲೇ ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 20 ಶಾಲೆಗಳನ್ನು ಆರಂಭಿಸುತ್ತಿದ್ದೇವೆ. ಬಜೆಟ್ ಹೇಳಿದ್ದರಲ್ಲಿ ಕೆಲವನ್ನು ಮಾಡಲು ಆಗುವುದಿಲ್ಲ. ನಮ್ಮ ಬಳಿ ಪೆನ್ನು–ಪೇಪರು ಇರುವಾಗ ಯಾವ ಅನುಮತಿಯೂ ಬೇಡ. ಅಭಿವೃದ್ಧಿ ಮಾಡುತ್ತಿರುತ್ತೇವೆ ಎಂದರು.

ಕೃಷಿ ಪಂಪ್‌ಸೆಟ್‌ಗಳ ವಿದ್ಯುತ್ ದರ ಕಡಿತ

ವಾಣಿಜ್ಯ, ಕೈಗಾರಿಕಾ ವಲಯಕ್ಕೆ ಶಾಕ್




ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಬುಧವಾರ ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ವಲಯಕ್ಕೆ ವಿದ್ಯುತ್ ದರ ಏರಿಕೆ ಶಾಕ್ ನೀಡಿದೆ. ಆದರೆ ರಾಜ್ಯದ ರೈತರಿಗೆ ಗುಡ್ ನ್ಯೂಸ್. ಕೃಷಿ ಪಂಪ್ ಸೆಟ್ ವಿದ್ಯುತ್ ದರವನ್ನು ಇಳಿಕೆ ಮಾಡಿದೆ.

2025–26ನೇ ಸಾಲಿನ ಕೃಷಿ ಪಂಪ್ ಸೆಟ್‌ಗಳ ವಿದ್ಯುತ್ ದರವನ್ನು ರಾಜ್ಯಾದ್ಯಂತ ಪ್ರತಿ ಯೂನಿಟ್‌ಗೆ 8.30 ರೂ.ಗಳಿಂದ 6.57 ರೂಪಾಯಿಗೆ ಇಳಿಕೆ ಮಾಡಲಾಗಿದೆ.

ಕೃಷಿ ಪಂಪ್‌ಸೆಟ್ ವಿದ್ಯುತ್ ದರವನ್ನು ಮೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್‌ಗೆ 7.40 ರೂಪಾಯಿ, ಚೆಸ್ಕಾಂ ವ್ಯಾಪ್ತಿಯಲ್ಲಿ ಪ್ರತಿ ಯೂನಿಟ್ ಗೆ 7.70 ರೂಪಾಯಿ, ಹೆಸ್ಕಾಂ ವ್ಯಾಪ್ತಿಯಲ್ಲಿ 7.73 ರೂಪಾಯಿ, ಜೆಸ್ಕಾಂ ವ್ಯಾಪ್ತಿಯಲ್ಲಿ 7.79 ರೂಪಾಯಿಗೆ ಕಡಿಮೆ ಮಾಡಲಾಗಿದೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಹೆಚ್ಚಿನ ಜಿಲ್ಲೆಗಳಿವೆ. ಜೊತೆಗೆ ಹೆಚ್ಚಿನ ಕೃಷಿ ಪಂಪ್ ಸೆಟ್ ಗಳೂ ಕೂಡ ಇವೆ. ಹೀಗಾಗಿ ಬೆಸ್ಕಾಂ ■6ನೇ ಪುಟಕ್ಕೆ

ಬರ ಬಿಸಿಲು ಹುಷಾರ್...!?



■ ರಾಜ್ಯ ಸರ್ಕಾರಕ್ಕೆ ಕೇಂದ್ರದ ಎಚ್ಚರಿಕೆ ■ ಕುಡಿಯುವ ನೀರಿನ ಕೊರತೆಗೆ ಅಗತ್ಯ ಕ್ರಮ ಕೈಗೊಳ್ಳಿ ■ ತಾಪಮಾನ ಹೆಚ್ಚಳದ ಪರಿಣಾಮ ಎದುರಿಸಲು ಸಜ್ಜಾಗಿ

ಬೆಂಗಳೂರು, ಮಾ.4(ಕೆಎಂಶಿ)– ಬಿಸಿಲಿನ ತಾಪದಿಂದ ಕರ್ನಾಟಕದಲ್ಲಿ ಬರ ಪರಿಸ್ಥಿತಿ ಎದುರಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಭೂವಿಜ್ಞಾನ ಸಚಿವಾಲಯದ ಹವಾಮಾನ ಇಲಾಖೆ (ಐಎಂಡಿ) ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ.

ಕಳೆದ ಮೂರು ವಾರಗಳ ಹಿಂದೆಯೇ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಪತ್ರ ಬರೆದಿದೆ.

ಕೇಂದ್ರ ಪತ್ರ ಬರೆದು ಎಚ್ಚರಿಕೆ ನೀಡಿದ್ದರೂ ರಾಜ್ಯ ಸರ್ಕಾರ ಇದುವರೆಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕಂದಾಯ ಸಚಿವ ಕೃಷ್ಣಬೈರೇಗೌಡ ಈ ಸಂಬಂಧ ಸಭೆಯನ್ನೂ ನಡೆಸಿಲ್ಲ.

ಕಳೆದ ಎರಡು ವರ್ಷಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತದೆ. ಅತಿವೃಷ್ಟಿಗೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಿ ಎಂಬುದಾಗಿ ಕೇಂದ್ರ ಸರ್ಕಾರ ನೀಡಿದ್ದ ಮುನ್ಸೂಚನೆಗೆ ಕರ್ನಾಟಕ ಸರ್ಕಾರ ಎಚ್ಚೆತ್ತು ಕ್ರಮ ಕೈಗೊಂಡಿತ್ತು.

ಮಾರ್ಚ್‌ನಿಂದಲೇ ಕರ್ನಾಟಕದಲ್ಲಿ ಒಣಹವೆ ಹೆಚ್ಚಾಗಿ ಪರಿಸರ ಸಮತೋಲನ ತಪ್ಪುತ್ತದೆ ಎಂದು ಅಂಕಿ–ಅಂಶಗಳ ಸಹಿತ ಮಾಹಿತಿ ನೀಡಿದ್ದರೂ ರಾಜ್ಯ ವಿಪತ್ತು ನಿರ್ವಹಣಾ ಸಂಸ್ಥೆ ಯಾವುದೇ ಕ್ರಮ ಕೈಗೊಂಡಿಲ್ಲ. ಕರಾವಳಿ ಮತ್ತು ಉತ್ತರ ಒಳನಾಡಿನ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನ ಹೆಚ್ಚಾಗುವುದರ ಜೊತೆಗೆ ಇಡೀ ಕರ್ನಾಟಕದಲ್ಲಿ ಈ ಬಾರಿ ಕಳೆದ ವರ್ಷಗಳಿಗಿಂತ ಎರಡು ಪಟ್ಟು ಬಿಸಿಲಿನ ತಾಪಮಾನ ಹೆಚ್ಚಾಗಲಿದೆ.

ಕಳೆದ 2024ರಲ್ಲಿ ರಾಜ್ಯದ 223 ತಾಲೂಕುಗಳು ಬರಪೀಡಿತಕ್ಕೆ ಸಿಲುಕಿದ್ದವು. ಪ್ರಸಕ್ತ ವರ್ಷದ ಮಾಹಿತಿ ನೋಡಿದರೆ, ಪ್ರಸ್ತುತ ಹವಾಮಾನವು ಮತ್ತಷ್ಟು ತೇವಾಂಶ ಕೊರತೆ ಸೂಚಿಸುತ್ತದೆ.

ಮಾರ್ಚ್‌ನಿಂದ ಮೇ 26ರವರೆಗೆ ದೇಶಾದ್ಯಂತ ವಿಶೇಷವಾಗಿ ದಕ್ಷಿಣ ಒಳನಾಡಿನ ಕೆಲವು ಬಾಗಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ ದಾಖಲಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಎಲ್–ನೀನೋ ಪರಿಣಾಮದಿಂದಾಗಿ ಮುಂದಿನ ತಿಂಗಳುಗಳಲ್ಲಿ ದೀರ್ಘಕಾಲದ ಒಣ ಹವಾಮಾನ ಮತ್ತು ನೀರಿನ ತೀವ್ರ ಕೊರತೆ ಎದುರಾಗಬಹುದೆಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದೆ.

ಹವಾಮಾನ ಮುನ್ಸೂಚನೆ ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಪೂರೈಕೆಗೆ ಆದ್ಯತೆ ನೀಡುವಂತೆ ಹೇಳಿದೆ. ಬೇಸಿಗೆ ಬೆಳೆಗಳಿಗೆ ನೀರಿನ ಕೊರತೆ ಎದುರಾಗಬಹುದು ಜಾಗ್ರತೆ ವಹಿಸಿ, ರಾಜ್ಯದ ಜಲಾಶಯ ಮತ್ತು ಕೆರೆ–ಕಟ್ಟೆಗಳಲ್ಲಿ ಇರುವ ನೀರನ್ನು ಕುಡಿಯುವ ನೀರಿಗೆ ಮೊದಲ ಆದ್ಯತೆ ಕಲ್ಪಿಸಲು ಕ್ರಮ ಕೈಗೊಳ್ಳಿ. ಬರ ■6ನೇ ಪುಟಕ್ಕೆ

ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ನಿತೀಶ್‌ಕುಮಾರ್ ರಾಜೀನಾಮೆ?



ಪಾಟ್ನಾ: ಜೆಡಿಯು ನಾಯಕ ಮತ್ತು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಸಂಸತ್ತಿನ ಮೇಲ್ಮನೆಗೆ (ರಾಜ್ಯಸಭೆ) ನಾಮಪತ್ರ ಸಲ್ಲಿಸಲಿದ್ದಾರೆ ಎಂದು ವರದಿಯಾಗಿದೆ. ಇದರ ನಂತರ, ಬಿಜೆಪಿ ಮುಖ್ಯಮಂತ್ರಿ ಸ್ಥಾನವನ್ನು ವಹಿಸಿಕೊಳ್ಳಲಿದೆ. ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಅವರನ್ನು ಉಪಮುಖ್ಯಮಂತ್ರಿಯಾಗಿ ನೇಮಿಸಲು ಒಪ್ಪಂದ ಮಾಡಿಕೊಳ್ಳಲಾಗಿದೆ. ಎನ್‌ಡಿಎ ಮೈತ್ರಿಕೂಟ ಅಧಿಕಾರಕ್ಕೆ ಮರಳಿದ ಕೆಲವೇ ತಿಂಗಳುಗಳ ನಂತರ ಈ ಪ್ರಮುಖ ಬದಲಾವಣೆ ನಡೆಯುತ್ತಿದೆ.

ರಾಜ್ಯಸಭೆಗೆ ನಿತೀಶ್ ಕುಮಾರ್ ಪ್ರವೇಶದೊಂದಿಗೆ ರಾಜ್ಯ ರಾಜಕೀಯವನ್ನು ತೊರೆಯುತ್ತಾರೆ ಎಂದು ನಂಬಲಾಗಿದೆ. ಆದಾಗ್ಯೂ, ನಿತೀಶ್ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಲು ಮತ್ತು ರಾಜ್ಯಸಭೆಗೆ ಹೋಗಲು ಕಾರಣಗಳು ಇನ್ನೂ ಸ್ಪಷ್ಟವಾಗಿಲ್ಲ. ನಿತೀಶ್ ಕುಮಾರ್ ಈ ಹಿಂದೆ ಕೇಂದ್ರದಲ್ಲಿ ಕೃಷಿ ಸಚಿವರಾಗಿ ಮತ್ತು ರೈಲ್ವೆ ಸಚಿವರಾಗಿ ಸೇವೆ ಸಲ್ಲಿಸಿದ್ದಾರೆ. 2015ರಿಂದ ಬಿಹಾರದ ಮುಖ್ಯಮಂತ್ರಿಯಾಗಿರುವ ನಿತೀಶ್, ರಾಜ್ಯದ ಅತ್ಯಂತ ದೀರ್ಘಾವಧಿಯ ಮುಖ್ಯಮಂತ್ರಿಯಾಗಿದ್ದಾರೆ. 2025ರ ಚುನಾವಣೆಯ ನಂತರ, ಎನ್‌ಡಿಎ ಮಿತ್ರ ಪಕ್ಷವು ಮುಖ್ಯಮಂತ್ರಿ ಹುದ್ದೆಯನ್ನು ಗೆದ್ದಿತು. ಆದರೆ ನಿತೀಶ್ ಕುಮಾರ್ ಹಲವಾರು ಪ್ರಮುಖ ಖಾತೆಗಳನ್ನು ಬಿಜೆಪಿಗೆ ಬಿಟ್ಟು ಕೊಡಬೇಕಾಯಿತು. ■6ನೇ ಪುಟಕ್ಕೆ

ಹುಕ್ಕಾ ಬಾರ್ ಮೇಲೆ ಸಿಸಿಬಿ ಪೊಲೀಸರ ದಾಳಿ; ಪಾಟ್‌ಗಳು, 27 ಬಗೆಯ ಕಚ್ಚಾ ಸಾಮಗ್ರಿ ವಶಕ್ಕೆ

● ಇಬ್ಬರ ವಿರುದ್ಧ ಪ್ರಕರಣ ದಾಖಲು ● ಕೆಫೆ ಬೈಟ್ ಹೆಸರಲ್ಲಿ ವಿವಿ ಪುರಂನಲ್ಲಿ ನಡೆಯುತ್ತಿದ್ದ ಹುಕ್ಕಾ ಬಾರ್

ಮೈಸೂರು, ಮಾ.4(ಪಿಎಂ)– ಹುಕ್ಕಾ ಬಾರ್ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಹುಕ್ಕಾ ಸೇವನೆ ಸಾಮಗ್ರಿಗಳಾದ ಪಾಟ್‌ಗಳು, ಹುಕ್ಕಾ ಸಿದ್ಧಪಡಿಸಲು ಬಳಸುವ 27 ಕಚ್ಚಾ ವಸ್ತುಗಳನ್ನು ವಶಪಡಿಸಿಕೊಂಡು, ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಮೈಸೂರಿನ ವಿವಿ ಪುರಂನ ಮಾತೃ ಮಂಡಳಿ ಸರ್ಕಲ್ ಬಳಿಯ ನಂ. 2733 ಬಿಲ್ಡಿಂಗ್‌ನ 2ನೇ ಅಂತಸ್ತಿನಲ್ಲಿದ್ದ ಕೆಫೆ ಬೈಟ್ ಹುಕ್ಕಾ ಬಾರ್ ಮೇಲೆ ಬುಧವಾರ ಸಿಸಿಬಿ ಪೊಲೀಸರು ದಾಳಿ ನಡೆಸಿದ್ದರು. ಈ ಸಂಬಂಧ ಹುಕ್ಕಾ ಬಾರ್ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಪಡುವಾರಹಳ್ಳಿಯ ಎಸ್.ಸಂಜಯ್ (25) ಹಾಗೂ ಹುಕ್ಕಾ ಬಾರ್ ಮಾಲೀಕ ■6ನೇ ಪುಟಕ್ಕೆ



ಹುಕ್ಕಾ ಬಾರ್ ಮೇಲೆ ದಾಳಿ ನಡೆಸಿ ವಶಪಡಿಸಿಕೊಂಡ ಸಾಮಗ್ರಿಗಳು.

ಇರಾನ್‌ನ ಸರ್ವೋಚ್ಚ ನಾಯಕನಾಗಿ ಆಯ್ಕೆಯಾದ ಖಮೇನಿ ಪುತ್ರ ಮೊಜ್ತಬಾ ಮೇಲೆ ಇಸ್ರೇಲ್ ಭೀಕರ ದಾಳಿ!

ಸರ್ವೋಚ್ಚ ನಾಯಕನಾದವನ ಹತ್ಯೆಯೇ ನಮ್ಮ ಗುರಿ: ಶಪಥ



ಟೆಹ್ರಾನ್: ಅಮೆರಿಕ ಮತ್ತು ಇಸ್ರೇಲ್ ಜಂಟಿ ದಾಳಿಯಲ್ಲಿ ಇರಾನ್ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಹತ್ಯೆಯಾಗುತ್ತಿದ್ದಂತೆ ಮಧ್ಯಂತರ ಸರ್ವೋಚ್ಚ ನಾಯಕನನ್ನು ನೇಮಿಸಲಾಗಿತ್ತು. ಆದರೆ ಇಸ್ರೇಲ್ ದಾಳಿ ಮಾಡಿ ಮಧ್ಯಂತರ ಸರ್ವೋಚ್ಚ ನಾಯಕನನ್ನು ಹತ್ಯೆ ಮಾಡಿತ್ತು. ಆನಂತರ ಸರ್ವೋಚ್ಚ ನಾಯಕನ ಆಯ್ಕೆ ಮಾಡುವುದೇ ಇರಾನ್‌ಗೆ ತಲೆ ನೋವಾಗಿ ಪರಿಣಮಿಸಿತ್ತು. ಆದರೆ ಇಂದು ಹಿರಿಯ ಧಾರ್ಮಿಕ ಮುಖಂಡ ಮತ್ತು ಐಆರ್‌ಜಿಸಿ ಅಲಿ ಖಮೇನಿ ಪುತ್ರ ಮೊಜ್ತಬಾ ಖಮೇನಿಯನ್ನು ಆಯ್ಕೆ ಮಾಡಿದ್ದರು.

ಇನ್ನು ಮೊಜ್ತಬಾ ಖಮೇನಿ ಆಯ್ಕೆಯಾಗುತ್ತಿದಂತೆ ಇಸ್ರೇಲ್ ಮೊಜ್ತಬಾ ಖಮೇನಿ ಇದ್ದ ಕಟ್ಟಡದ ಮೇಲೆ ವಾಯು ದಾಳಿ ನಡೆಸಿದೆ. ಆದರೆ ಈ ದಾಳಿಯಲ್ಲಿ ಮೊಜ್ತಬಾ ಖಮೇನಿ ಬದುಕುಳಿದಿದ್ದಾರೆ ಎಂದು ಇರಾನ್ ಹೇಳುತ್ತಿದೆ. ಆದರೆ ಇರಾನ್ ಸರ್ವೋಚ್ಚ ನಾಯಕ ಯಾರೇ ಆಗಲಿ ಅವರನ್ನು ಹತ್ಯೆ ಮಾಡುವುದಾಗಿ ಇಸ್ರೇಲ್ ಬೆದರಿಕೆ ಹಾಕಿದೆ. ಇರಾನ್‌ನಲ್ಲಿ ಸರ್ವೋಚ್ಚ ನಾಯಕನ ಆಯ್ಕೆಯ ನಂತರ, ಇಸ್ರೇಲ್‌ನ ■6ನೇ ಪುಟಕ್ಕೆ

10 ದಿನಕ್ಕಷ್ಟೇ ಮಿಸೈಲ್‌ಗಳ ಸ್ಟಾಕ್: ಪೆಂಟಗಾನ್ ಎಚ್ಚರಿಕೆ

ಇರಾನ್ ಯುದ್ಧದಲ್ಲಿ ಅಮೆರಿಕಕ್ಕೆ ಹಿನ್ನಡೆ ಸಾಧ್ಯತೆ?



ವಾಷಿಂಗ್ಟನ್: ಇರಾನ್ ಮೇಲೆ ಯುದ್ಧ ಸಾರಿರುವ ಅಮೆರಿಕಕ್ಕೆ ಭಾರಿ ಹಿನ್ನಡೆಯುಂಟಾಗಿದ್ದು, ಯುದ್ಧ ಸಾಮಗ್ರಿಗಳ ಗಂಭೀರ ಕೊರತೆ ಎದುರಾಗಿದೆ ಎಂದು ಅಲ್ ಜಜೀರಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಇರಾನ್–ಇಸ್ರೇಲ್ ಮತ್ತು ಅಮೆರಿಕ ಸಂಘರ್ಷದಲ್ಲಿ ನಿರ್ಣಾಯಕ ಪಾತ್ರವಹಿಸಿರುವ ಅಮೆರಿಕಕ್ಕೆ ಹಾಲಿ ಯುದ್ಧದಲ್ಲಿ ಗಂಭೀರ ಹಿನ್ನಡೆಯಾಗುವ ಕುರಿತು ಪೆಂಟಗಾನ್ ಎಚ್ಚರಿಕೆ ನೀಡಿದ್ದು, ಮುಂದಿನ 10 ದಿನಗಳವರೆಗೆ ಸಾಕಾಗುವಷ್ಟು ಮಾತ್ರ ಮಿಸೈಲ್‌ಗಳ ದಾಸ್ತಾನಿದೆ ಎಂದು ಹೇಳಿದೆ ಎಂದು ಅಲ್ ಜಜೀರಾ ವರದಿ ಮಾಡಿದೆ. ಇತ್ತೀಚೆಗೆ ನಡೆದ ಮಹತ್ವದ ಸಭೆಯಲ್ಲಿ ಯುದ್ಧಸಾಮಗ್ರಿ ದಾಸ್ತಾನುಗಳನ್ನು ಮರು ಪೂರಣಗೊಳಿಸಲು ಹೆಚ್ಚಿನ ವೆಚ್ಚಗಳನ್ನು ಎದುರಿಸುವಂತಹ ಹಲವಾರು ಅಪಾಯಗಳನ್ನು ಒಳಗೊಂಡಿರಬಹುದು ಎಂದು ಪೆಂಟಗನ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ತಿಳಿಸಿದೆ ಎನ್ನಲಾಗಿದೆ.

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷವು ಇಂದು ನಾಲ್ಕನೇ ದಿನಕ್ಕೆ ಕಾಲಿರಿಸಿದ್ದು, ಪೆಂಟಗನ್‌ನಿಂದ ಸೋರಿಕೆಯಾದ ಮಾಹಿತಿಯ ಪ್ರಕಾರ, ಅಮೆರಿಕವು ಇಸ್ಲಾಮಿಕ್ ಗಣರಾಜ್ಯದ ಮೇಲೆ ಇನ್ನೂ 10 ದಿನಗಳವರೆಗೆ ದಾಳಿ ಮಾಡುವುದನ್ನು ಮುಂದುವರಿಸಿದರೆ, ನಿರ್ಣಾಯಕ ಕ್ಷಿಪಣಿಗಳ ದಾಸ್ತಾನು ಕಡಿಮೆಯಾಗಬಹುದು ಎಂದು ಹೇಳಿದೆ. ಆದಾಗ್ಯೂ, ಮಂಗಳವಾರ, ಟ್ರಂಪ್ ಟ್ರುತ್ ಸೋಶಿಯಲ್ ಪೋಸ್ಟ್‌ನಲ್ಲಿ ಹಾಲಿ ಇರುವ ಸ್ಟಾಕ್‌ಗಳು ಅಮೆರಿಕ ಯುದ್ಧಗಳನ್ನು ■6ನೇ ಪುಟಕ್ಕೆ

ಇರಾನ್ ಯುದ್ಧ ನೌಕೆ ಮೇಲೆ ಅಮೆರಿಕ ದಾಳಿ: 87 ಮಂದಿ ಸಾವು



ಕೊಲಂಬೊ, ಮಾ.4– ಶ್ರೀಲಂಕಾ ಕರಾವಳಿಯಲ್ಲಿ ಬುಧವಾರ ಅಮೆರಿಕದ ಜಲಾಂತರ್ಗಾಮಿ ನೌಕೆಯೊಂದು ಇರಾನ್ ಯುದ್ಧ ನೌಕೆ ಮೇಲೆ ದಾಳಿ ನಡೆಸಿದ ಪರಿಣಾಮ 87 ನಾವಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇರಾನ್ ಮೇಲೆ ಅಮೆರಿಕ–ಇಸ್ರೇಲ್ ನಡೆಸಿದ ಜಂಟಿ ದಾಳಿಯಿಂದ ಆರಂಭವಾದ ಯುದ್ಧವು ಮಧ್ಯಪ್ರಾಚ್ಯದಾದ್ಯಂತ ಯುದ್ಧ ಹರಡುತ್ತಿರುವ ಸಮಯದಲ್ಲೇ ಈ ದುರಂತ ಸಂಭವಿಸಿದೆ.

ಐಆರ್‌ಐಎಸ್ ದೇನಾ ಎಂಬ ಯುದ್ಧನೌಕೆ ಕೆಲವೇ ವಾರಗಳ ಹಿಂದೆ ಭಾರತದಲ್ಲಿ ನಡೆದ ನೌಕಾ ಸಮರಾಭ್ಯಾಸದಲ್ಲಿ ಭಾಗವಹಿಸಿ ಇರಾನ್‌ಗೆ ಮರಳುತ್ತಿತ್ತು. ಯುದ್ಧನೌಕೆಯನ್ನು ಹೊಡೆದುರುಳಿಸಿದ್ದು ತಾನೇ ಎಂದು ಈಗಾಗಲೇ ಅಮೆರಿಕ ದೃಢಪಡಿಸಿದೆ. ಅಂತರರಾಷ್ಟ್ರೀಯ ನೀರಿನಲ್ಲಿ ಸುರಕ್ಷಿತವಾಗಿದೆ ಎಂದು ಭಾವಿಸಿದ ಇರಾನ್ ಯುದ್ಧ ನೌಕೆಯನ್ನು ಅಮೆರಿಕದ ಜಲಾಂತರ್ಗಾಮಿ ನೌಕೆ ■6ನೇ ಪುಟಕ್ಕೆ

ಖಾಸಗಿ ಶಾಲಾ ಶುಲ್ಕ: ಶೇ.12ರವರೆಗೆ ಹೆಚ್ಚಳ?


ಬೆಂಗಳೂರು: ರಾಜ್ಯದ ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು 2026–27ನೇ ಶೈಕ್ಷಣಿಕ ಸಾಲಿನಿಂದ ಶಾಲಾ ಶುಲ್ಕವನ್ನು ಶೇ 8ರಿಂದ ಶೇ 12ರವರೆಗೆ ಹೆಚ್ಚಿಸಲು ನಿರ್ಧರಿಸಿವೆ.

ಸಾಮಾನ್ಯವಾಗಿ ಪ್ರತಿವರ್ಷ ಶೇ 2ರಿಂದ ಶೇ4ರವರೆಗೆ ಮಾತ್ರ ಹೆಚ್ಚಳ ಮಾಡಲಾಗುತ್ತಿತ್ತು ಮಕ್ಕಳ ದಾಖಲಾತಿ ಕುಸಿತ, ಸಿಬ್ಬಂದಿ ವೇತನ ಹೆಚ್ಚಳ, ನೀರು, ವಿದ್ಯುತ್ ಶುಲ್ಕ, ವೃತ್ತಿಪರ ತೆರಿಗೆ, ಪಿಎಫ್, ಇಎಸ್‌ಐ ಭರಿಸುವುದು ಹಾಗೂ ಹೊಸ ಶಾಲೆಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಆದಾಯ ಕುಂಠಿತವಾಗಿರುವುದರಿಂದ ವೆಚ್ಚ ಭರಿಸಲು ಶುಲ್ಕ ಹೆಚ್ಚಳದ ಮೊರೆ ಹೋಗಿವೆ.

ವಿದ್ಯಾರ್ಥಿಗಳಿಂದ ಕಡಿಮೆ ಶುಲ್ಕ ಪಡೆಯುವ ಸುಮಾರು 17,000ಕ್ಕೂ ಹೆಚ್ಚು ಖಾಸಗಿ ಶಾಲೆಗಳಿದ್ದು, 4,000 ಶಾಲೆಗಳು ಬೆಂಗಳೂರಿನಲ್ಲಿ ಇವೆ. ಬಹುತೇಕ ಶಾಲೆಗಳು ತಿಂಗಳಿಗೆ 500ರಿಂದ 3,000ರವರೆಗೆ ಶುಲ್ಕ ನಿಗದಿ ಮಾಡಿವೆ. ಕೆಲವು ಶಾಲೆಗಳು ವರ್ಷಕ್ಕೆ 25,000–30,000 ಶುಲ್ಕ ಪಡೆಯುತ್ತಿವೆ. ಶೇ 10ರಷ್ಟು ಹೆಚ್ಚಳ ಮಾಡಿದರೆ ಪೋಷಕರು 2,500ರಷ್ಟು ಹೆಚ್ಚು ಭರಿಸಬೇಕಾಗುತ್ತದೆ ಎಂದು ಪೋಷಕರು ದೂರಿದ್ದಾರೆ.

ಕೆಪಿಎಸ್‌ಸಿ ವಿರುದ್ಧ ಅಕ್ರಮ ಆರೋಪ; ವರದಿ ಕೇಳಿದ ಮುಖ್ಯ ಕಾರ್ಯದರ್ಶಿ!

ಬೆಂಗಳೂರು: ಕೆಪಿಎಸ್‌ಸಿ ವಿರುದ್ಧ ಮತ್ತೆ ಅಕ್ರಮದ ಆರೋಪಗಳು ಕೇಳಿಬಂದಿದೆ. ಕೆಎಎಸ್ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಬಳಿಕ ಹಲವು ಅಭ್ಯರ್ಥಿಗಳು ಗಂಭೀರ ಅನುಮಾನ ವ್ಯಕ್ತಪಡಿಸಿದ್ದಾರೆ. ಕೆಲವರು ಪರೀಕ್ಷೆ ಸರಿಯಾಗಿ ಬರೆದಿದ್ದರೂ ಆಯ್ಕೆ ಆಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಇಂತಹ ಅಭ್ಯರ್ಥಿಗಳು ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ದೊಡ್ಡ ಮಟ್ಟದ ಕ್ಯಾಂಪೇನ್ ಕೂಡ ಶುರುಮಾಡಿದ್ದಾರೆ. Xನಲ್ಲಿ ಫಲಿತಾಂಶದ ಪ್ರತಿಯೊಂದ ಪೋಸ್ಟ್ ಹಂಚಿಕೊಂಡು ಆಕ್ರೋಶ ಹೊರಹಾಕುತ್ತಿದ್ದಾರೆ. ಈ ಬೆನ್ನಲ್ಲೇ ಕೆಪಿಎಸ್‌ಸಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ವಿಚಾರದ ಕುರಿತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಪಿಎಸ್‌ಸಿ ಕಾರ್ಯದರ್ಶಿಗಳಿಂದ ವರದಿ ಕೇಳಿದ್ದಾರೆ.



ಶಾಲಿನಿ ರಜನೀಶ್

ಎಚ್ಚೆತ್ತ ಸಿಎಸ್: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ನೇಮಕಾತಿಗೆ ಪರೀಕ್ಷೆಗಳನ್ನು ನಡೆಸುವ ಸಂಸ್ಥೆ ಕೆಪಿಎಸ್‌ಸಿಯಲ್ಲಿ ಮತ್ತೆ ಅಕ್ರಮ ನಡೆದಿದೆ ಎಂಬ ಗಂಭೀರ ಆರೋಪ ಕೇಳಿ ಬಂದಿದ್ದು, ಇದರ ವಿರುದ್ಧ ಅಭ್ಯರ್ಥಿಗಳು ಆಕ್ರೋಶ ವ್ಯಕ್ತಪಡಿಸು ತ್ತಿದ್ದಾರೆ. ಕೆಪಿಎಸ್‌ಸಿ ವಿರುದ್ಧ ಗಂಭೀರ ಆರೋಪ ಕೇಳಿ ಬಂದ ಹಿನ್ನೆಲೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ವರದಿ ನೀಡುವಂತೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಸೂಚನೆ ನೀಡಿದ್ದಾರೆ.

ಸಿಎಂ–ಪಿಎಂಗೆ ಹ್ಯಾಶ್ ಟ್ಯಾಗ್ ಪೋಸ್ಟ್: ಕೆಪಿಎಸ್‌ಸಿ ವಿರುದ್ಧ ಅಕ್ರಮದ ಬಗ್ಗೆ ಅಭ್ಯರ್ಥಿಗಳು ಈಗ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಮಟ್ಟದ ಕ್ಯಾಂಪೇನ್ ಆರಂಭಿಸಿದ್ದಾರೆ. ಕೆಲವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಟ್ಯಾಗ್ ಮಾಡಿ ಮಧ್ಯ ಪ್ರವೇಶಿಸಲು ಮನವಿ ಮಾಡಿದ್ದಾರೆ. ಇನ್ನೂ ಕೆಲವರು ಸಿಎಂ ಸಿದ್ದರಾಮಯ್ಯ ಅವರನ್ನು ಟ್ಯಾಗ್ ಮಾಡಿ ನ್ಯಾಯ ಒದಗಿಸಬೇಕೆಂದು ಕೋರಿದ್ದಾರೆ.

ಅಕ್ರಮ ಆರೋಪ: ಒಂದೇ ಕೊಠಡಿಯಲ್ಲಿ ಮೈನ್ಸ್ ಬರೆದಿದ್ದ 11 ಮಂದಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆಯಾಗಿದ್ದು, ಸೀರಿಯಲ್ ನಂಬರ್ ಕ್ರಮಬದ್ಧವಾಗಿ ಆಯ್ಕೆಯಾಗಿದ್ದು ಹೇಗೆ ಎಂದು ಪ್ರಶ್ನಿಸಿದ್ದಾರೆ. ಅಲ್ಲದೇ ಒಂದೇ ಕುಟುಂಬದ ಇಬ್ಬರಿಂದ ಮೂವರು ಆಯ್ಕೆಯಾಗಿರುವ ಆರೋಪ ಕೂಡ ಕೇಳಿ ಬಂದಿದೆ. ಪ್ರಭಾವಿಗಳ ಮಕ್ಕಳಿಗೆ ಸೀಟ್ ಕೊಡಿಸಲು ಕುತಂತ್ರ ನಡೆದಿದೆ ಎಂಬ ದೂರಿದೆ. ಪ್ರಾಮಾಣಿಕವಾಗಿ ಓದಿದವರಿಗೆ ಕೆಲಸ ಸಿಗಬೇಕು, ಈ ಬಗ್ಗೆ ಸಮಿತಿ ರಚಿಸಿ ತನಿಖೆ ಮಾಡಿ ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ. ಒಂದು ವೇಳೆ ಸರ್ಕಾರದ ಕೈಯಲ್ಲಿ ಆಗಲಿಲ್ಲ ಎಂದರೆ ಸಿಬಿಐಗೆ ವಹಿಸಲು ಒತ್ತಾಯಿಸಿದ್ದಾರೆ.

ಕೆಎಎಸ್ ಪರೀಕ್ಷೆಯಲ್ಲಿ ಮತ್ತೊಂದು ಎಡವಟ್ಟು: ಕೆಪಿಎಸ್‌ಸಿ ನಡೆಸಿದ ಪರೀಕ್ಷೆಯಲ್ಲಿ ಅಕ್ರಮ ಆರೋಪ ಬೆನ್ನಲ್ಲೇ ಕೆಪಿಎಸ್‌ಸಿಯ ಮತ್ತೊಂದು ಎಡವಟ್ಟು ಅನಾವರಣಗೊಂಡಿದೆ. ಕೆಎಎಸ್ ಮೇನ್ಸ್ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಯ ಸೀಲ್ ಓಪನ್ ಆಗಿರುವ ಆರೋಪ ಕೇಳಿಬಂದಿದೆ. ಕಳೆದ ವರ್ಷ ಮೇನಲ್ಲಿ ನಡೆದ ಮೇನ್ಸ್ ಪರೀಕ್ಷೆಯಲ್ಲಿ ಸೀಲ್ ಓಪನ್ ಆಗಿತ್ತು. ಈ ಬಗ್ಗೆ ಅಭ್ಯರ್ಥಿಗಳು ಮೇಲ್ವಿಚಾರಕರಿಗೆ ಪ್ರಶ್ನೆ ಮಾಡಿದ್ದರು. ಈ ಮಧ್ಯೆ ಪ್ರಶ್ನೆ ಪತ್ರಿಕೆಯ ಸೀಲ್ ಓಪನ್ ಆಗಿದ್ದು ನಿಜ ಎಂದು ಮೇಲ್ವಿಚಾರಕರು ಒಪ್ಪಿಕೊಂಡಿದ್ದರು.

ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ



ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ಅವರು ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಯಾವುದೇ ಅಕ್ರಮ ಆಗಿಲ್ಲ, ಪರೀಕ್ಷೆ ಪಾರದರ್ಶಕವಾಗಿ ನಡೆದಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಮಾಧ್ಯಮದ ಜೊತೆ ಮಾತನಾಡಿದ ಅವರು, ಒಂದೇ ಕೊಠಡಿಯಲ್ಲಿ 11 ಜನ ಪಾಸ್ ಆಗಿರುವ ಪ್ರಕರಣ ಇದೆ. ಮೇಲ್ನೋಟಕ್ಕೆ ಅಲ್ಲೂ ಕೂಡ ಯಾವುದೇ ಅಕ್ರಮ ಆಗಿಲ್ಲ, ಪ್ರಾಮಾಣಿಕವಾಗಿ ಎಕ್ಸಾಂ ನಡೆದಿದೆ. ಈಗಾಗಲೇ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲನೆ ಮಾಡಲಾಗಿದೆ. ಅನುಮಾನಾಸ್ಪದ ರೀತಿ ಕಂಡು ಬಂದಿಲ್ಲ. ಆದರೂ ಈ ಕುರಿತು ಇನ್ನೊಮ್ಮೆ ಪರಿಶೀಲನೆ ಮಾಡಲಾಗುವುದು ಎಂದು ತಿಳಿಸಿದರು.

ಒಂದೇ ಕುಟುಂಬದವರು ಆಯ್ಕೆ ಆಗಿಲ್ಲ: ಮುಂದುವರಿದು ಮಾತನಾಡಿದ ಅವರು, ಒಂದೇ ಕುಟುಂಬದವರು ಯಾರು ಆಯ್ಕೆ ಆಗಿಲ್ಲ, ಆರೋಪ ಮಾಡುವವರು ದಾಖಲಾತಿ ಕೊಟ್ಟರೆ ತನಿಖೆ ಮಾಡಿಸುತ್ತೇವೆ. 24 ಜನರಲ್ಲಿ 11 ಜನ ಪಾಸ್ ಆಗಬಾರದು ಅಂತ ಏನು ಇಲ್ಲ. ಈಗಾಗಲೇ ಸರ್ಕಾರಕ್ಕೆ ವರದಿ ಕೊಡಲಾಗಿದೆ ಎಂದು ಹೇಳಿದರು. ಸಂದರ್ಶನದಲ್ಲಿ ಆಯ್ಕೆ ಆಗಿರುವವರು ಭಯಪಡುವ ಅಗತ್ಯ ಇಲ್ಲ. ಪ್ರಕ್ರಿಯೆ ಮುಂದುವರೆಸುತ್ತೇವೆ. ಎಕ್ಸಾಂ ಮತ್ತು ಮೌಲ್ಯ ಮಾಪನವೂ ಪಾರದರ್ಶಕವಾಗಿದೆ. ಯಾರ ಬಳಿ ದಾಖಲಾತಿ ಇದ್ದರೆ ತನಿಖೆ ಮಾಡಿಸಲು ನಾವು ಸಿದ್ಧರಿದ್ದೇವೆ ಎಂದು ಜ್ಯೋತಿ ಸ್ಪಷ್ಟನೆ ನೀಡಿದ್ದಾರೆ.

ಇಂಧನ ಉಳಿತಾಯ ಮಾಸಿಕ ಆಚರಣೆ

ಐದು ವಿಭಾಗ, 10 ಘಟಕಗಳಿಗೆ ನಗದು ಪುರಸ್ಕಾರ, ಪ್ರಶಂಸನಾ ಪತ್ರ

ಮೈಸೂರು, ಮಾ.4(ಎಸ್‌ಪಿಎನ್)– 2025–26ನೇ ಸಾಲಿನ ಇಂಧನ ಉಳಿತಾಯ ಮಾಸಿಕ ಆಚರಣೆಯಲ್ಲಿ ಉತ್ತಮ ಸಾಧನೆ ಮಾಡಿರುವ ಐದು ವಿಭಾಗ ಹಾಗೂ 10 ಘಟಕಗಳಿಗೆ ನಗದು ಪುರಸ್ಕಾರ ಹಾಗೂ ಪ್ರಶಂಸನಾ ಪತ್ರಗಳನ್ನು ವಿತರಿಸಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಸೂಚನೆ ನೀಡಿದೆ.

ಪ್ರತಿ ವರ್ಷದಂತೆ ಪ್ರಸಕ್ತ 2025–26ನೇ ಸಾಲಿನಲ್ಲಿಯೂ 2026ರ ಜ.1ರಿಂದ ಜ.15 ರವರೆಗೆ ನಿಗಮದ ವಿಭಾಗ, ಘಟಕಗಳ ಸಂಚಿತ ಇಂಧನ ಕೆಎಂಪಿಎಲ್‌ನ ಸಾಧನೆಯನ್ನು ಗುರುತಿಸಿ, ಪುನಃ ಜ.16ರಿಂದ ಫೆ.15ರವರೆಗೆ ಇಂಧನ ಉಳಿತಾಯ ಮಾಸಾಚರಣೆ ಮಾಡಲಾಗಿದೆ.

2,40,353 ಲೀಟರ್ ಉಳಿತಾಯ: ಪ್ರಸಕ್ತ ಸಾಲಿನಲ್ಲಿ ನಿಗಮದ ಇಂಧನ ಕೆಎಂಪಿಎಲ್ ಅನುಸಂಚಿತ 4.74ರಿಂದ 4.79ಗೆ ವೃದ್ಧಿಸುವ ಮೂಲಕ 0.057ರಷ್ಟು ಉತ್ತಮಪಡಿಸಿ, ಮಾಸಿಕ ಅವಧಿಯಲ್ಲಿ ಮಿತವ್ಯಯದ ಬಳಕೆಯಿಂದ 2,40,353 ಲೀಟರ್‌ಗಳಷ್ಟು ಇಂಧನ ಉಳಿತಾಯವಾಗಿದೆ. ಜ.16ರಿಂದ ಫೆ.15ರವರೆಗೆ ಪ್ರತಿದಿನ ಸರಾಸರಿ ಬೆಲೆ ರೂ.87.62ರಂತೆ ಒಟ್ಟು 2,10,59,719ಗಳಷ್ಟು ನಿವ್ವಳ ಉಳಿತಾಯ ಮಾಡಿರುವುದು ಪ್ರಶಂಸನೀಯ ಸಂಗತಿಯಾಗಿದೆ.

ನಾಲ್ಕು ನಿಗಮದ ವಿಭಾಗ ಮತ್ತು ಘಟಕಗಳು ಗರಿಷ್ಠ ಇಂಧನ ಕೆಎಂಪಿಎಲ್ ಸಾಧನೆಯನ್ನು ಮಾಡಿರುವುದರಿಂದ, ಇವರ ಕಾರ್ಯದಕ್ಷತೆಯನ್ನು ಗುರುತಿಸಿ, ಪ್ರೋತ್ಸಾಹಿಸುವ ಸಲುವಾಗಿ ವ್ಯವಸ್ಥಾಪಕ ನಿರ್ದೇಶಕರ ಮಾಸಿಕ ಆಚರಣೆಯಲ್ಲಿ ಅತೀ ಹೆಚ್ಚು ಇಂಧನ ಕೆಎಂಪಿಎಲ್ ಸಾಧನೆ ಮಾಡುವಲ್ಲಿ ಶ್ರಮಿಸಿದ ಪುತ್ತೂರು, ಶಿವಮೊಗ್ಗ, ಚಿಕ್ಕಮಗಳೂರು, ಮಂಗಳೂರು ಮತ್ತು ಚಿತ್ರದುರ್ಗ ವಿಭಾಗಗಳಿಗೆ ತಲಾ ರೂ. 10 ಸಾವಿರ ರೂ. ಹಾಗೂ ಪುತ್ತೂರು ವಿಭಾಗದ ಬಿಸಿ ರೋಡ್, ಧರ್ಮಸ್ಥಳ ಹಾಗೂ ಶಿವಮೊಗ್ಗ ವಿಭಾಗದ ಹೊನ್ನಾಳಿ ಘಟಕಗಳಿಗೆ 20 ಸಾವಿರ ರೂ. ಮತ್ತು ಶಿವಮೊಗ್ಗ ವಿಭಾಗದ ಶಿಕಾರಿಪುರ ಚಿಕ್ಕಮಗಳೂರು ವಿಭಾಗದ ಅರಸೀಕೆರೆ, ರಾಮನಗರ ವಿಭಾಗದ ಆನೇಕಲ್, ಮಂಡ್ಯ ವಿಭಾಗದ ನಾಗಮಂಗಲ ಘಟಕಗಳಿಗೆ ತಲಾ 10 ಸಾವಿರ ರೂ.ಗಳಂತೆ 5 ವಿಭಾಗ ಹಾಗೂ 10 ಘಟಕಗಳಿಗೆ ನಗದು ಪುರಸ್ಕಾರ ಹಾಗೂ ಪ್ರಶಂಸನಾ ಪತ್ರಗಳನ್ನು ವಿತರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಎಸ್‌ಆರ್‌ಟಿಸಿ ಎಂಡಿ ಸೂಚಿಸಿದ್ದಾರೆ.

ವಿಕಾಸ ಪಥದಡಿ ವಿಶೇಷಚೇತನರು, ಮಹಿಳೆಯರಿಗೆ ಜೀವನೋಪಾಯ ಕಲ್ಪಿಸುವ ಸಲುವಾಗಿ ತರಬೇತಿ

● ಸೌರ ಬೆಂಬಲಿತ ಕಾರ್ಯಾಗಾರ; ಜೀವನೋಪಾಯ ಪರಿಹಾರ ಪ್ರದರ್ಶನ ● ತರಬೇತಿ ಬಳಿಕ ಬ್ಯಾಂಕಿನಿಂದ ಸಾಲ ಸೌಲಭ್ಯ ವ್ಯವಸ್ಥೆ



ಮೈಸೂರು ನಗರಪಾಲಿಕೆ ಕಚೇರಿ ಸಭಾಂಗಣದಲ್ಲಿ 'ವಿಕಾಸ ಪಥದಲ್ಲಿ ವಿಶೇಷಚೇತನರ ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರ ಮತ್ತು ಜೀವನೋಪಾಯ ಪರಿಹಾರ ಪ್ರದರ್ಶನ' ಮತ್ತು 'ಸ್ವಚ್ಛತಾ ರೋಡ್ ಶೋ' ಪೋಸ್ಟರ್ ಅನ್ನು ಪಾಲಿಕೆ ಆಡಳಿತಾಧಿಕಾರಿಗಳೂ ಆದ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಬಿಡುಗಡೆ ಮಾಡಿದರು.

ಮೈಸೂರು,ಮಾ.4(ಎಂಕೆ)–ಮಹಿಳೆಯರು ಮತ್ತು ವಿಶೇಷಚೇತನರ ಆರ್ಥಿಕ ಸ್ವಾವಲಂಬನೆಗಾಗಿ ಮೈಸೂರು ನಗರಪಾಲಿಕೆ ಹಾಗೂ ಸೆಲ್ಕೋ ಫೌಂಡೇಶನ್ ವತಿಯಿಂದ 'ವಿಕಾಸ ಪಥದಲ್ಲಿ ವಿಶೇಷಚೇತನರ ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರ ಮತ್ತು ಜೀವನೋಪಾಯ ಪರಿಹಾರ ಪ್ರದರ್ಶನ' ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಮಹಾನಗರಪಾಲಿಕೆ ಆಡಳಿತಾಧಿಕಾರಿಗಳೂ ಆದ ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ತಿಳಿಸಿದರು.

ಮೈಸೂರು ನಗರ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಸ್ವಚ್ಛತಾ ರೋಡ್ ಶೋ ಮತ್ತು ಕಾರ್ಯಾಗಾರದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ನಗರಪಾಲಿಕೆಯಲ್ಲಿ ಶೇ.5ರಷ್ಟು ಅನುದಾನವನ್ನು ವಿಶೇಷಚೇತನರಿಗಾಗಿ ಅದರಲ್ಲಿ ಅವರಿಗೆ ಜೀವನೋಪಾಯ ಕಲ್ಪಿಸುವ ರೀತಿಯಲ್ಲಿ ತರಬೇತಿ ನೀಡಬೇಕು. ಈ ನಿಟ್ಟಿನಲ್ಲಿ ಮಾ.6 ರಂದು ಬೆಳಗ್ಗೆ 9.30 ರಿಂದ ಸಂಜೆ 5 ಗಂಟೆಯವರೆಗೂ 'ವಿಕಾಸ ಪಥದಲ್ಲಿ ವಿಶೇಷಚೇತನರ ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರ ಮತ್ತು ಜೀವನೋಪಾಯ ಪರಿಹಾರ ಪ್ರದರ್ಶನ' ನಡೆಯಲಿದೆ ಎಂದರು.

ಕಾರ್ಯಾಗಾರದಲ್ಲಿ ಸೋಲಾರ್ ಆಧಾರಿತ ವ್ಯವಸಾಯ ಯಂತ್ರಗಳು, ಪಶು ಸಂಗೋಪನಾ ಯಂತ್ರಗಳು, ಕಿರು ಉದ್ಯಮ ಯಂತ್ರ ಹಾಗೂ ಉತ್ಪನ್ನ ಯಂತ್ರಗಳನ್ನು ಬಳಸಿ ಉದ್ಯೋಗಿಗಳಾಗಿ ಸ್ವಾವಲಂಬಿ ಜೀವನ ಸಾಗಿಸಲು ಅಗತ್ಯವಿರುವ ಕೌಶಲ್ಯ ತರಬೇತಿ ನೀಡಲಾಗುವುದು. ತರಬೇತಿ ನಂತರ ಬ್ಯಾಂಕಿನಿಂದ ಸಾಲ ಹಾಗೂ ಸಹಾಯಧನ ಒದಗಿಸಲಾಗುವುದು. ಹಾಗಾಗಿ ಮಹಿಳೆಯರು ಹಾಗೂ ವಿಕಲಚೇತನರು ಹೆಚ್ಚಾಗಿ ಕೌಶಲ್ಯಾಧರಿತ ತರಬೇತಿ ಪಡೆಯಲು ಮುಂದಾಗಬೇಕು ಎಂದು ಹೇಳಿದರು.

ಸ್ವಚ್ಛತಾ ರೋಡ್ ಶೋ: 'ಸ್ವಚ್ಛ ಮೈಸೂರು ನನ್ನಿಂದ ಆರಂಭ' ಶೀರ್ಷಿಕೆಯಡಿ ಮಾ.8ರಂದು ಮೈಸೂರು ಅರಮನೆ ಆವರಣದಿಂದ ಮೈಸೂರು ವಿವಿ ಓವೆಲ್ ಮೈದಾನದವರಗೆ 'ಸ್ವಚ್ಛತಾ ರೋಡ್ ಶೋ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸ್ವಚ್ಛತಾ ರೋಡ್ ಶೋ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳನ್ನು ಆಹ್ವಾನಿಸಲಿದ್ದು, ಸ್ವಚ್ಛತೆ ಹಾಗೂ ಪರಿಸರದ ಬಗ್ಗೆ ಕಾಳಜಿ ಹೊಂದಿರುವ ಸಂಘ–ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕೋರಿದರು.

ಮೈಸೂರು ಮಹಾನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಮಾ.8ರಂದು ಮಹಿಳಾ ದಿನಾಚರಣೆಯೂ ಇರುವುದರಿಂದ ಸ್ವಚ್ಛತಾ ರೋಡ್ ಶೋ ಆಕರ್ಷಣೆ ಹೆಚ್ಚಿಸಲು ವಿಂಟೇಜ್ ಕಾರ್, ಬೈಕ್ ಮತ್ತು ಸೈಕಲ್ ರ್‍ಯಾಲಿ, ಮೌಂಟೆಡ್ ಪೊಲೀಸ್ ತಂಡ ಮತ್ತು ಟಾಂಗಾ ತಂಡಗಳು ಭಾಗವಹಿಸುವ ರೀತಿ ಕಾರ್ಯಕ್ರಮ ರೂಪಿಸಲಾಗುತ್ತಿದೆ ಎಂದರು ತಿಳಿಸಿದರು.

ಸ್ವಚ್ಛತಾ ರೋಡ್ ಶೋ ಕೊನೆಗೊಳ್ಳುವ ಓವಲ್ ಮೈದಾನದಲ್ಲಿ ಕಟ್ಟಡ ನಿರ್ಮಾಣ ತ್ಯಾಜ್ಯ ವಸ್ತುಗಳಿಂದ ಉಪಯುಕ್ತ ವಸ್ತುಗಳ ತಯಾರಿಕೆ, ಇ–ವೇಸ್ಟ್, ಪ್ಲಾಸ್ಟಿಕ್, ಬಯೋ ಮೆಡಿಕಲ್ ವೇಸ್ಟ್‌ಗಳ ನಿರ್ವಹಣೆ ಕುರಿತು ಪ್ರಾತ್ಯಕ್ಷಿಕೆ ಆಯೋಜಿಸಲಿದ್ದು, ಸಾರ್ವಜನಿಕರಿಗೆ ಸ್ವಚ್ಛ ಮೈಸೂರು ನಿರ್ಮಾಣದ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಮೈಸೂರು ನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ ವೀಣಾ, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜೆಎಸ್‌ಎಸ್ ಸಂಸ್ಥೆಯ ಶ್ರೀಹರಿ, ಕ್ಲೀನ್ ಫೌಂಡೇಶನ್ ನಿರ್ದೇಶಕರಾದ ಲೀಲಾ ವೆಂಕಟೇಶ್, ಸೆಲ್ಕೋ ಫೌಂಡೇಶನ್‌ನ ಪ್ರಕಾಶ್ ಮೇಟಿ, ಪರಿಸರ ವಿಜ್ಞಾನ ಸಂಶೋಧಕ ಹೆಚ್.ಗೋಪಿ ಕಿರಣ್, ಕ್ರೆಡೈಯ್‌ನ ಡಿ.ರಾಮ್ ಶ್ರೀಧರ್ ಮತ್ತಿತರರು ಉಪಸ್ಥಿತರಿದ್ದರು.

ಅಭಿನಂದನೆ...



ಮೈಸೂರು ನಗರ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ, ಚಾಮರಾಜ ಕ್ಷೇತ್ರದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷೆ ಸುಶೀಲ ಮರೀಗೌಡ, ಸಮಿತಿಯ ಸದಸ್ಯರಾದ ಸುರೇಶ್, ಆನಂದ್, ವೆಂಕಟೇಶ್, ಚಂದ್ರಕಲಾ, ಮತ್ತು ರಾಜು ಉಪ್ಪಾರ್ ಇನ್ನಿತರರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮತ್ತು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಮಾಜಿ ಕಾರ್ಪೋರೇಟರ್ ನಾಗಭೂಷಣ್ ಅವರನ್ನು ಅಭಿನಂದಿಸಿದರು. ಈ ವೇಳೆ ಸಮಿತಿ ಸದಸ್ಯ ವಿಕಾಸ್‌ಸಿಂಹ ಉಪಸ್ಥಿತರಿದ್ದರು.


ಕ್ರೀಡಾಂಗಣ ನಿರ್ಮಾಣಕ್ಕೆ ಕೆಎಸ್‌ಐಸಿ ಜಾಗ ಹಸ್ತಾಂತರ ಕೈಬಿಡದಿದ್ದರೆ ಹೋರಾಟ

ಎಐಟಿಯುಸಿ ಎಚ್ಚರಿಕೆ

ಮೈಸೂರು, ಮಾ.4(ಜಿಎ)–ಟಿ.ನರಸೀಪುರದ ಕೆಎಸ್‌ಐಸಿ ಘಟಕದ ಭೂಮಿಯನ್ನು ಯುವಜನ ಮತ್ತು ಕ್ರೀಡಾ ಇಲಾಖೆ ಕ್ರೀಡಾಂಗಣ ನಿರ್ಮಿಸಲು ಹಸ್ತಾಂತರ ಮಾಡುವುದನ್ನು ಕೂಡಲೇ ಕೈಬಿಡಬೇಕು. ಇಲ್ಲದಿದ್ದಲ್ಲಿ ಹೋರಾಟ ನಡೆಸಬೇಕಾಗುತ್ತದೆ ಎಂದು ಎಐಟಿಯುಸಿ ಜಿಲ್ಲಾ ಸಮಿತಿ ಎನ್.ಕೆ.ದೇವದಾಸ್ ಎಚ್ಚರಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಘಟಕ ಪೂರೈಸುವ ರೇಷ್ಮೆ ನೂಲುಗಳಿಂದಲೇ ಮೈಸೂರು ಹಾಗೂ ಚೆನ್ನಪಟ್ಟಣ ಘಟಕಗಳು ನಡೆಯುತ್ತಿವೆ. ಹೀಗಾಗಿ ಇದನ್ನು ವಿಸ್ತರಿಸುವ ಬದಲು ಇಲ್ಲಿನ ಜಾಗ ಕ್ರೀಡಾಂಗಣಕ್ಕೆ ನೀಡುವುದು ಸರಿಯಲ್ಲ. ಕೆಎಸ್‌ಐಸಿ ರಾಜ್ಯ ಸರ್ಕಾರದ ಲಾಭದಾಯಕ ಉದ್ದಿಮೆಗಳಲ್ಲಿ ಒಂದಾಗಿದ್ದು, ಕಳೆದ ವರ್ಷ ಸುಮಾರು 300 ಕೋಟಿ ವಹಿವಾಟು ನಡೆಸಿ, ನೂರು ಕೋಟಿಗೂ ಅಧಿಕ ಲಾಭ ಗಳಿಸಿದೆ. ಇಲ್ಲಿನ ರೇಷ್ಮೆ ಸೀರೆಗೆ ಬರುವ ಬೇಡಿಕೆ ಈಡೇರಿಸಲು ಸಹಾ ಸಾಧ್ಯವಾಗುತ್ತಿಲ್ಲ. ಹೀಗಾಗಿರುವಾಗ ಲಾಭದ ಹಣದಿಂದ ವಿಸ್ತರಿಸುವ ಬದಲು ಮುಚ್ಚುವ ಪಿತೂರಿ ಅಂಗವಾಗಿ ಇದರ ಜಾಗ ನೀಡುವುದು ಸರಿಯಲ್ಲ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ಜಿ. ಸೋಮರಾಜೇ ಅರಸ್, ರಾಮು ಉಪಸ್ಥಿತರಿದ್ದರು.

ಸಾಮಾಜಿಕ, ಆರ್ಥಿಕ ಸಮತೋಲನಕ್ಕೆ ಆದಾಯ ತೆರಿಗೆ ಪಾವತಿ ಅತ್ಯಗತ್ಯ



ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಮೈಸೂರು,ಮಾ.4– ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಆದಾಯ ತೆರಿಗೆ ಮರು ಪಾವತಿ ವಿಷಯ ಕುರಿತು ಕಾರ್ಯಾಗಾರವನ್ನು ಏರ್ಪಡಿಸಲಾಗಿತ್ತು.

ಕಾರ್ಯಾಗಾರದಲ್ಲಿ ನಿವೃತ್ತ ಪ್ರಾಧ್ಯಾಪಕರು ಮತ್ತು ಮಾನಸ ವಿದ್ಯಾಸಂಸ್ಥೆಯ ವಿಶೇಷಾಧಿಕಾರಿ ಡಾ.ಆರ್.ನಾಗಭೂಷಣ್, ಆಶಯ ಭಾಷಣದಲ್ಲಿ ಸರ್ಕಾರ ಮತ್ತು ತೆರಿಗೆ ಪಾವತಿದಾರರ ನಡುವಿನ ಸಂಬಂಧವನ್ನು ಆದಾಯ ತೆರಿಗೆಯು ತಿಳಿಸಿಕೊಡುತ್ತದೆ ಮತ್ತು ಪ್ರಸ್ತುತ ಸುಮಾರು 7.5% ಜನರು ಮಾತ್ರ ಆದಾಯ ತೆರಿಗೆ ಪಾವತಿದಾರರಿದ್ದು ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತದ ಅಭಿವೃದ್ಧಿಗೆ ಆದಾಯ ತೆರಿಗೆಯ ಕೊಡುಗೆ ಮುಂದುವರಿದ ರಾಷ್ಟ್ರಗಳಿಗೆ ಹೋಲಿಸಿದರೆ ತುಂಬಾ ಕಡಿಮೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಸಹಾಯಕ ಪ್ರಾಧ್ಯಾಪಕ ಡಾ.ಪುಟ್ಟಸ್ವಾಮಿ, ಅಧಿವೇಶನ–1ರಲ್ಲಿ ತೆರಿಗೆಯ ಮೌಲ್ಯಮಾಪನ ಮಾಡುವ ಬಗೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಸಾಮಾಜಿಕ, ಆರ್ಥಿಕ ಸಮತೋಲನಕ್ಕೆ ತೆರಿಗೆ ಪಾವತಿ ಮತ್ತು ಮರುಪಾವತಿಯು ಅತ್ಯಂತ ಅಗತ್ಯವಾದುದೆಂದು ವಿದ್ಯಾರ್ಥಿಗಳಿಗೆ ತಿಳಿಸಿದರು. ಬಂಡವಾಳ ಕ್ರೋಢೀಕರಣ, ಷೇರು, ಸ್ಥಿರಠೇವಣಿ ಮುಂತಾದವುಗಳ ಮೇಲೆ ತೆರಿಗೆ ಪಾವತಿ ಯನ್ನು ಕುರಿತು ಮಾಹಿತಿ ನೀಡಿದರು.

ಅಧಿವೇಶನ–2ರಲ್ಲಿ ತೆರಿಗೆಯು ಅಂಗೀಕಾರವಾಗುವ ಬಗೆ ಮತ್ತು ತೆರಿಗೆ ಪಾವತಿ ಲೆಕ್ಕಾಚಾರ ಮಾಡುವ ವಿಧಾನಗಳನ್ನು ಪ್ರಾಯೋಗಿಕವಾಗಿ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು ಹಾಗೂ ತೆರಿಗೆಯ ನಿಯಮಗಳು, ಬಳಕೆಯ ಅಗತ್ಯತೆಗಳು, ತೆರಿಗೆ ಪಾವತಿಸುವ ಸಮಯ, ಹಣದ ಮೊತ್ತ ಮುಂತಾದವುಗಳನ್ನು ಇ–ಫೈಲಿಂಗ್‌ನಲ್ಲಿ ಮಾಡುವ ಕ್ರಿಯೆಯನ್ನು ವಿದ್ಯಾರ್ಥಿಗಳಿಗೆ ವಿವರಿಸಿದರು.

ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ ಕಾರ್ಯಾಗಾರವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಡಾ.ಬಿ.ಆರ್. ಜಯಕುಮಾರಿ ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ಪ್ರಸ್ತುತದ ಆರ್ಥಿಕ ವಿದ್ಯಮಾನಗಳಿಗೆ ವಿದ್ಯಾರ್ಥಿಗಳು ತಮ್ಮನ್ನು ತೆರೆದುಕೊಳ್ಳಲು ಇಂತಹ ಪ್ರಾಯೋಗಿಕ ಕಾರ್ಯಾಗಾರಗಳು ಅಗತ್ಯವಿದ್ದು, ವಿದ್ಯಾರ್ಥಿಗಳು ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದು ಶುಭ ಹಾರೈಸಿದರು.

ಕಾರ್ಯಾಗಾರದಲ್ಲಿ ಸಹಾಯಕ ಪ್ರಾಧ್ಯಾಪಕ ಸಿದ್ದಪ್ಪ ಆರ್. ಸ್ವಾಗತಿಸಿದರು. ಕಾಲೇಜಿನ ಶೈಕ್ಷಣಿಕ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್.ಆರ್.ರಮೇಶ್, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಶ್ರೀಮತಿ ವೆಂಕಟಲಕ್ಷ್ಮಿ ಎಂ.ಎನ್. ಚಲುವೇಗೌಡ, ಬಿಸಿಎ ವಿಭಾಗದ ಮುಖ್ಯಸ್ಥರಾದ ರಾಧೇಶ್ ಇನ್ನಿತರರು ಹಾಜರಿದ್ದರು.

ಕೆ.ಆರ್.ಆಸ್ಪತ್ರೆ ಪಿಜಿ ವೈದ್ಯ ಆತ್ಮಹತ್ಯೆ



ಡಾ.ಸಲೀಂ

ಮೈಸೂರು,ಮಾ.4(ಎಂಕೆ)–ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಕೆ.ಆರ್.ಆಸ್ಪತ್ರೆಯ ಸ್ನಾತಕೋತ್ತರ(ಪಿಜಿ) ವೈದ್ಯರೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಸುಭಾಷ್ ನಗರದಲ್ಲಿ ಬುಧವಾರ ನಡೆದಿದೆ.

ಡಾ.ಸೈಯದ್ ಅಹಮದ್ ಸಲೀಂ(49) ಆತ್ಮಹತ್ಯೆ ಮಾಡಿಕೊಂಡ ವೈದ್ಯರು. ಮೂಲತಃ ಕೊಪ್ಪಳ ಜಿಲ್ಲೆಯವರಾಗಿದ್ದ ಇವರು, ಮೈಸೂರಿನ ಸುಭಾಷ್‌ನಗರದಲ್ಲಿ ಪತ್ನಿಯೊಂದಿಗೆ ನೆಲೆಸಿದ್ದು ಕೆ.ಆರ್.ಆಸ್ಪತ್ರೆಯಲ್ಲಿ ಸ್ನಾತಕೋತ್ತರ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ರಂಜಾನ್ ಉಪವಾಸದ ಹಿನ್ನಲೆಯಲ್ಲಿ ಬುಧವಾರ ಮುಂಜಾನೆ 4.30ಕ್ಕೆ ಉಪಹಾರ ಮುಗಿಸಿದ ಡಾ.ಸೈಯದ್, ಬೆಳಗ್ಗೆ 7.30ರ ಸುಮಾರಿಗೆ ತಮ್ಮ ಕೋಣೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಮದುವೆಯಾಗಿ 19 ವರ್ಷಗಳಾದರೂ ಮಕ್ಕಳಾಗದ ಕಾರಣ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಅವರು, 6 ತಿಂಗಳ ಹಿಂದೆ ಯಷ್ಟೇ ಮಗುವೊಂದನ್ನು ದತ್ತು ಪಡೆದಿದ್ದರು. ಆತಹತ್ಯೆ ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ನರಸಿಂಹರಾಜ ಪೊಲೀಸ್ ಠಾಣೆ ಪ್ರಭಾರಿ ಇನ್ಸ್‌ಪೆಕ್ಟರ್ ಕುಮಾರ್ ಮತ್ತು ಸಿಬ್ಬಂದಿ, ಮಹಜರು ನಡೆಸಿದರು.

ನಂತರ ಡಾ.ಸೈಯದ್ ಅವರ ದೇಹ ವನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿ ಮತ್ತು ಆರ್‌ಐ) ಶವಾಗಾರಕ್ಕೆ ಸ್ಥಳಾಂತರಿಸಿ, ಮರಣೋತ್ತರ ಪರೀಕ್ಷೆಯ ನಂತರ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪರಿಶಿಷ್ಟ ವರ್ಗದ ವಿದ್ಯಾರ್ಥಿ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು: ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 2026–27ನೇ ಸಾಲಿನ ರಾಮಕೃಷ್ಣ ವಿದ್ಯಾಶಾಲೆಗೆ ಪ್ರತಿಭಾವಂತ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು 8ನೇ ತರಗತಿಗೆ ಪ್ರವೇಶ ಪರೀಕ್ಷೆ ಮೂಲಕ ಆಯ್ಕೆ ಮಾಡಲು ಏ.15ರಂದು ಪ್ರವೇಶ ಪರೀಕ್ಷೆ ನಿಗದಿಪಡಿಸಿದ್ದು, ಆಸಕ್ತ ಪರಿಶಿಷ್ಟ ವರ್ಗಗಳ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು ಮಾ.31ರೊಳಗೆ ಯೋಜನಾ ಸಮನ್ವಯಾಧಿಕಾರಿ ಕಚೇರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ಡಾ. ಬಾಬು ಜಗಜೀವನ್‌ರಾಮ್ ಭವನ, ಆದಿಪಂಪ ರಸ್ತೆ, ಒಂಟಿಕೊಪ್ಪಲು, ಇಲ್ಲಿ ಅರ್ಜಿಗಳನ್ನು ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ದಾಖಲಾತಿಗಳೊಂದಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 0821–2427140 ನ್ನು ಸಂಪರ್ಕಿಸಬಹುದಾಗಿದೆ.

ಅಭಿನಂದನೆ



ಮೈಸೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ, ವಿದ್ಯೋದಯ ಕಲಾ ಮತ್ತು ವಾಣಿಜ್ಯ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ತಿ.ನರಸೀಪುರ ತಾಲೂಕಿನ ಸುಜ್ಜಲೂರು ಗ್ರಾಮದಲ್ಲಿ ಜರುಗಿದ 'ಯೂತ್ ಫಾರ್ ಮೈ ಭಾರತ್' ವಿಶೇಷ ವಾರ್ಷಿಕ ಶಿಬಿರದಲ್ಲಿ ಸಾಹಿತಿ ಟಿ.ಸತೀಶ್ ಜವರೇಗೌಡರನ್ನು ಅಭಿನಂದಿಸಲಾಯಿತು. ಈ ವೇಳೆ ಕೆನರಾ ಬ್ಯಾಂಕಿನ ಸಲಹೆಗಾರ ಎಸ್.ವಿ.ರಮೇಶ್‌ರಾವ್, ಶಿಬಿರಾಧಿಕಾರಿ ಶಿವಮೂರ್ತಿ, ಸಹ ಶಿಬಿರಾಧಿಕಾರಿಗಳಾದ ಎಸ್.ಸುಮ, ಅಶ್ವಿನಿ, ಪಿಆರ್‌ಎಂ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ನಂದೀಶ್ ಉಪಸ್ಥಿತರಿದ್ದರು.

ಬಜೆಟ್‌ನಲ್ಲಿ ಮೈಸೂರಿಗೆ ಇಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಆದ್ಯತೆ ಕೊಡಲಿ


ಮೈಸೂರು, ಮಾ.4(ಜಿಎ)–ರಾಜ್ಯದಲ್ಲಿ ಎರಡನೇ ದೊಡ್ಡ ಪ್ರಮುಖ ನಗರವಾಗಿರುವ ಮೈಸೂರಿನಲ್ಲಿ ಒಂದೇ ಒಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಇಲ್ಲದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಸರ್ಕಾರ ಈ ಬಜೆಟ್‌ನಲ್ಲಿ ಈ ಬಗ್ಗೆ ಗಮನ ಹರಿಸಬೇಕೆಂದು ಅಹಿಂದ ಸಮನ್ವಯ ಸಮಿತಿ ಜಂಟಿ ಕಾರ್ಯದರ್ಶಿ ಎಂ. ವಿಷಕಂಠ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನಲ್ಲಿ ಈಗಾಗಲೇ ಕಾಲೇಜು ಸ್ಥಾಪನೆಗೆ ಸಾಕಷ್ಟು ಸ್ಥಳಗಳಿವೆ. ಹೀಗಾಗಿ ಒಂದು ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿ, ವಿದ್ಯಾರ್ಥಿಗಳು ಬಂದು ಹೋಗುವುದಕ್ಕೆ ಸೂಕ್ತವಾದ ಜಾಗ ಆಯ್ಕೆ ಮಾಡಿ ಸ್ಥಾಪಿಸಿದಲ್ಲಿ ಮೈಸೂರು ಜನತೆ, ಅದರಲ್ಲಿಯೂ ವಿದ್ಯಾರ್ಥಿ ಸಮುದಾಯಕ್ಕೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ನಗರದಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಇಲ್ಲದಿರುವುದರಿಂದಾಗಿ ಜಿಲ್ಲೆಯ ಹಿಂದುಳಿದ ಸಮುದಾಯದ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಪಡೆಯುವುದು ಕಷ್ಟವಾಗಿದೆ. ಬುದ್ಧಿವಂತ ಮಕ್ಕಳು ಖಾಸಗಿ ಶಿಕ್ಷಣ ಸಂಸ್ಥೆಗಳ ದುಬಾರಿ ಶುಲ್ಕ ಕಟ್ಟಲಾಗದೇ ಈ ಶಿಕ್ಷಣ ಪಡೆಯಲು ಸಾಧ್ಯವಾಗದಂತಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಗಮನ ಹರಿಸಿ, ಇಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಸಿ.ಹರಕುಮಾರ್, ಸೋಮಯ್ಯ ಮಲೆಯೂರು, ಬಿ.ಬೋರಯ್ಯ ಉಪಸ್ಥಿತರಿದ್ದರು.

ಶ್ರೀಮತಿ ರತ್ನಮ್ಮ ನಿಧನ



ಮೈಸೂರು: ಮೈಸೂರಿನ ರಾಮಾನುಜ ರಸ್ತೆ 12ನೇ ಕ್ರಾಸ್ ನಿವಾಸಿ ಹಾಗೂ ಬಿಜೆಪಿ ಮುಖಂಡ ರಾಜ್‌ಕುಮಾರ್ ಅವರ ತಾಯಿ ಶ್ರೀಮತಿ ರತ್ನಮ್ಮ (86) ಇಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಾ.5) ಮಧ್ಯಾಹ್ನ 12 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.3.2026 ಗುರುವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026ರಿಂದ 17.03.2026 ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉತ್ತರ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಮೂತ್ರಪಿಂಡ ಕಾಯಿಲೆ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಮತ್ತು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ಸುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು ಹಾಗೂ ಏಕಾಗ್ರತೆಯ ಕೊರತೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಆಂಗ್ಲಭಾಷಾ ವಿಭಾಗ ಮತ್ತು ಆಂತರಿಕ ಗುಣಮಟ್ಟದ ಭರವಸೆ ಕೋಶ:** ಸಂಪ್ರದಾಯಗಳು ಮತ್ತು ಪರಿ ವರ್ತನೆಗಳ ನಡುವೆ–ಸಮಕಾಲೀನ ಭಾರತೀಯ ಸಾಹಿತ್ಯ ಮತ್ತು ಸಿನಿಮಾದಲ್ಲಿ ಮಹಿಳಾ ಧ್ವನಿ ವಿಷಯ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಶಸ್ತ್ರವೈದ್ಯೆ ಹಾಗೂ ಕಾದಂಬರಿಗಾರ್ತಿ ಡಾ.ಕಾವೇರಿ ನಂಬಿಸನ್, ಅಧ್ಯಕ್ಷತೆ : ಮಹಾಜನ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಉಪಸ್ಥಿತರು: ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ಶೈಕ್ಷಣಿಕ ಸಲಹೆಗಾರರು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಡಾ.ಎಸ್.ಆರ್. ರಮೇಶ್, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ

■ **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಶ್ವಾಸಕೋಶ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ :** ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಮುಖ್ಯ ಅತಿಥಿಗಳು : ಪ್ರೊ. ಪಿ.ನಾಗಭೂಷಣ್, ಅಧ್ಯಕ್ಷತೆ : ಜೆಎಸ್‌ಎಸ್ ಎಹೆಚ್‌ಇಆರ್ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಗೌರವ ಅತಿಥಿಗಳು: ಪ್ರೊ.ಕೆ.ಎ.ರವೀಶ, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಫಾರ್ಮಸಿ ಕಾಲೇಜು, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ರಾಷ್ಟ್ರಕವಿ ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಸಂಪಾದಕತ್ವದ ಕುಮಾರವ್ಯಾಸ ಮಹಾಕವಿ ವಿರಚಿತ ಕರ್ನಾಟಕ ಭಾರತ ಕಥಾ ಮಂಜರಿ ಕೃತಿ ಲೋಕಾರ್ಪಣೆ ಹಾಗೂ ಪ್ರಸಾರಾಂಗ ಮಾರಾಟ ವಿಭಾಗದ ಗಣಕೀಕೃತ ಲೆಕ್ಕಪತ್ರ ನಿರ್ವಹಣಾ ವ್ಯವಸ್ಥೆಗೆ ಚಾಲನೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಕೃತಿ ಬಿಡುಗಡೆ : ಹಿರಿಯ ಸಾಹಿತಿ ಪ್ರೊ. ಸಿ.ಪಿ. ಕೃಷ್ಣಕುಮಾರ್, ಗೌರವ ಅತಿಥಿಗಳು : ಪ್ರೊ.ಎಸ್.ಎನ್.ಶ್ರೀಧರ್, ಪ್ರೊ.ಕೃಷ್ಣಮೂರ್ತಿ ಹನೂರು, ಡಿ.ಎನ್. ಲೋಕಪ್ಪ, ಪ್ರಾಸ್ತಾವಿಕ ನುಡಿ : ಪ್ರಸಾರಾಂಗ ನಿರ್ದೇಶಕ ಪ್ರೊ. ಎಂ. ನಂಜಯ್ಯ ಹೊಂಗನೂರು, ಸ್ಥಳ: ಕುವೆಂಪು ಸಭಾಂಗಣ, ಪ್ರಸಾರಾಂಗ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆ :** ಸಹಕಾರಿ ಸಂಸ್ಥೆಗಳಲ್ಲಿ ನಿರ್ವಹಣೆಯ ವೃತ್ತಿಪರೀಕರಣ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್, ಮುಖ್ಯ ಅತಿಥಿಗಳು: ಎನ್‌ಸಿಯುಐ ನಿವೃತ್ತ ನಿರ್ದೇಶಕ ಡಾ.ಎ.ಆರ್.ಶ್ರೀನಾಥ್, ಡಾ.ಕೃಷ್ಣರಾವ್, ಪ್ರೊ.ಎಂ. ಮೀರಾ, ಪ್ರೊ.ಹೆಚ್.ಎಂ.ಚಂದ್ರಶೇಖರ್, ಸ್ಥಳ: ಪ್ರೊ.ಆರ್.ಪಿ.ಮಿಶ್ರಾ ಸಭಾಂಗಣ, ಮಧ್ಯಾಹ್ನ 12ಕ್ಕೆ.

■ **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಅಶ್ವಾರೋಹಣ, ದೇವಿಪ್ರಣಯ ಕಲಹ ಸಂಧಾನ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ವಿದ್ವಾನ್ ಖೇಡಾ ವೇದವ್ಯಾಸಚಾರ್ ಅವರಿಂದ ರುಕ್ಮೇಶ ವಿಜಯ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ, ಸಂಜೆ 5 ರಿಂದ.

■ **ಪರಂಪರೆ ಸಂಸ್ಥೆ ಸುಧರ್ಮಾ ಸಂಸ್ಕೃತ ದಿನ ದಿನ ಪತ್ರಿಕೆ:** ಉಪನ್ಯಾಸ ಸರಣಿ, ಚಿತ್ಪಾವನ ಭಜನಾ ಮಂಡಳಿಯಿಂದ ವಾಚನ, ವಿದ್ವಾನ್ ಡಾ.ಹೆಚ್.ವಿ.ನಾಗಾರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಕುರಿತು ಉಪನ್ಯಾಸ ಸ್ಥಳ: ಶ್ರೀನಿವಾಸ ಪದ್ಮಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ರಾಘವೇಂದ್ರ ಸ್ವಾಮಿ ಮಠದ ಪಕ್ಕ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.

■ **ಗೋದೆಯ ಬಳಕ ಫೌಂಡೇಷನ್, ಶ್ರೀ ಮಹಾಲಕ್ಷ್ಮಿ ಅಮ್ಮನವರ ದೇವಸ್ಥಾನ :** ಶ್ರೀ ಮಹಾಲಕ್ಷ್ಮಿ ಅಮ್ಮನವರ ದೇವಾಲಯದ 13ನೇ ವಾರ್ಷಿಕೋತ್ಸವ, ಬ್ರಹ್ಮರಥೋತ್ಸವ, ಬೆಳಗ್ಗೆ 7.18 ರಿಂದ ಶ್ರೀ ಮಹಾಲಕ್ಷ್ಮೀ ಅಮ್ಮನವರ ಹಾಗೂ ಶ್ರೀದೇವಿ, ಭೂದೇವಿ ಸಹಿತ ಶ್ರೀ ಶ್ರೀನಿವಾಸ ದೇವರ ದಿವ್ಯ ರಥಾರೋಹಣ, ರಥಯಾತ್ರೆ, ಸ್ಥಳ: ಶ್ರೀ ಮಹಾಲಕ್ಷ್ಮಿ ಅಮ್ಮನವರ ದೇವಸ್ಥಾನ, ದಟ್ಟಗಳ್ಳಿ, ಕನಕದಾಸನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ. ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಂ ಮತ್ತು ಡಾ. ಪಿ.ಎಸ್. ಮುರಳೀಧರ್, ವ್ಯಾಖ್ಯಾನ –ಡಾ. ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ಭಾರತಿ – ವೀಣಾವಾದನ, 11.00 ಸುತ್ತಮುತ್ತ– ಪ್ರಸ್ತುತಿ–ಚಂದನಾ .ಸಿ, ನಿತಿನ್ ರಾಜಾರಾಂ ಶಾಸ್ತ್ರೀ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಸ್ನೇಹಾ ಟಿ. ಎಸ್., 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಅಮೃತಾ ನಿತಿನ್ ಶಾಸ್ತ್ರೀ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ಸಂಧ್ಯಾರಾಗ–ಹಿರಿಯ ರಂಗಕರ್ಮಿ, ರಾಜಶೇಖರ ಕದಂಬ ಅವರೊಂದಿಗೆ ಆತ್ಮೀಯ ಮಾತುಕತೆ, ಇವರೊಂದಿಗೆ ಭಾಗವಹಿಸಿದ್ದಾರೆ– ಪ್ರಭುಸ್ವಾಮಿ ಮಳೀಮಠ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ICC T20–ಎರಡನೆಯ ಸೆಮಿಫೈನಲ್, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಹಣ್ಣು ಹೊನ್ನು–ತೋಟಗಾರಿಕಾ ಬೆಳೆಗಳ ಸಮಗ್ರ ಬೇಸಾಯ ವಿಧಾನ ಕುರಿತ ಬಾನುಲಿ ಸರಣಿ ಮಣ್ಣು ಪರೀಕ್ಷೆ ಮಹತ್ವ ಮತ್ತು ಮಾದರಿ ಸಂಗ್ರಹಣೆ ಕುರಿತು ಸಂವಾದ, ಭಾಗವಹಿಸುತ್ತಾರೆ–ಮೈಸೂರು ತಾಲೂಕು ಎಲಚನಹಳ್ಳಿಯ ತೋಟಗಾರಿಕಾ ಮಹಾ ವಿದ್ಯಾಲಯದ ಸಹ ಪ್ರಾಧ್ಯಾಪಕರಾದ ಡಾ. ಎಸ್. ಮೋಹನ್ ಕುಮಾರ್ ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ. ಶಿವಕುಮಾರ್, ಪ್ರಸ್ತುತಿ–ಎನ್. ಕೇಶವಮೂರ್ತಿ

ಕುಂಬಾರಕೊಪ್ಪಲು ಪಾರ್ಕ್‌ನ ಅವ್ಯವಸ್ಥೆ



ಕುಂಬಾರಕೊಪ್ಪಲು ಪಾರ್ಕ್‌ನ ರಕ್ಷಣಾ ಬೇಲಿ ಮೇಲೆ ಕಲ್ಲು, ಮಣ್ಣು ಸುರಿದಿರುವುದು.

ಮೈಸೂರು, ಮಾ.4(ವಿವಿಹೆಚ್)– ಮೈಸೂರಿನ ಕುಂಬಾರಕೊಪ್ಪಲು ಪಾರ್ಕ್ ನಿರ್ವಹಣೆ ಕೊರತೆಯಿಂದ ಅವ್ಯವಸ್ಥೆಯ ತಾಣವಾಗಿದೆ. ಬಹಳ ಚಿಕ್ಕದಾದ ಮತ್ತು ಸ್ಥಳೀಯ ಜನರಿಗೆ ಬಹು ಬಳಕೆಯ ಈ ಪಾರ್ಕ್ ಸುತ್ತಲೂ ನಿರ್ಮಿಸಿರುವ ರಕ್ಷಣಾ ಬೇಲಿಯೇ ಇಲ್ಲದಂತಾಗಿದ್ದು, ಕನಿಷ್ಟ ಮೂಲ ಸೌಕರ್ಯವೂ ಇಲ್ಲದೇ ನೆನೆಗುದಿಗೆ ಬಿದ್ದಿದೆ.

ಕುಂಬಾರ ಕೊಪ್ಪಲಿನ ಮಹದೇಶ್ವರ ದೇವಾಲಯದ ಮುಂಭಾಗದ ರಸ್ತೆ ಕಾಂಟೂರ್ ರಸ್ತೆಗೆ ಹೊಂದಿಕೊಂಡಂತಿರುವ ಈ ಚಿಕ್ಕ ಪಾರ್ಕ್‌ಗೆ ಹಾಕಲಾಗಿದ್ದ ರಕ್ಷಣಾ ಬೇಲಿ ಕಾಣೆಯಾಗಿದ್ದರೆ, ಹಿಂಬದಿಯಲ್ಲಿ ಹಾಕಲಾಗಿರುವ ಬೇಲಿಯಲ್ಲಿ ಗಿಡ–ಗಂಟಿಗಳು ಬೆಳೆದು ನಿಂತಿವೆ. ಪಾರ್ಕ್ ಒಳಭಾಗದಲ್ಲಿಯೂ ಗಿಡಗಳು ಬೆಳೆದಿದ್ದು, ಸಂಜೆ ವೇಳೆ ವಿಹಾರ ಮಾಡುವವರಿಗೆ ಇದರಿಂದ ಕಿರಿಕಿರಿ ಉಂಟಾಗುತ್ತಿದೆ.

ಇತ್ತ ಪಾರ್ಕ್ ಮುಂಭಾಗದ ರಸ್ತೆಗೆ ಮರು ಡಾಂಬರೀಕರಣ ಕೆಲಸ ನಡೆಯುತ್ತಿದ್ದು, ರಸ್ತೆ ಅಗೆದು ಅದರಲ್ಲಿ ಬಂದ ಮಣ್ಣು ಮತ್ತು ಕಲ್ಲನ್ನು ಪಾರ್ಕ್ ಮುಂಭಾಗ ಹಾಕಿದ್ದಾರೆ. ಅದರಲ್ಲೂ ರಕ್ಷಣಾ ಬೇಲಿಗಳೇ ಮೇಲೆ ಮನಬಂದಂತೆ ಮಣ್ಣು ಸುರಿದು ಹಾಳು ಮಾಡಲಾಗಿದೆ. ರಸ್ತೆ ಮಧ್ಯದಲ್ಲಿ ಮ್ಯಾನ್ ಹೋಲ್‌ಗಳ ಮೇಲ್ಭಾಗ ಹಾಕಲಾಗಿದ್ದ ಸಿಮೆಂಟ್ ರಿಂಗ್ ಗಳನ್ನು ಇಲ್ಲೆ ಬಿಸಾಡಲಾಗಿದೆ.

ಪಾರ್ಕ್‌ನಾದ್ಯಂತ ಕಸದ ರಾಶಿ ಬಿದ್ದಿದ್ದು, ಪಾರ್ಕ್‌ನ ಸೌಂದರ್ಯ ಹಾಳಾಗಿದೆ. ರಾತ್ರಿ ಸಮಯದಲ್ಲಿ ಪಾರ್ಕ್‌ನಲ್ಲಿ ಬೆಳಕಿನ ವ್ಯವಸ್ಥೆ ಇಲ್ಲದಿರುವುದರಿಂದ ಅಸುರಕ್ಷಿತ ವಾತಾವರಣ ನಿರ್ಮಾಣವಾಗಿದೆ. ಬೆಳಕಿನ ವ್ಯವಸ್ಥೆ ಮತ್ತು ಮೇಲ್ವಿಚಾರಣೆ ಇಲ್ಲದಿರುವುದರಿಂದ, ವಾಕಿಂಗ್ ತೆರಳುವವರಿಗೆ ಸುರಕ್ಷತೆ ಇಲ್ಲದಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು, ಪಾರ್ಕ್ ಅನ್ನು ದುರಸ್ತಿಗೊಳಿಸಿ ಸುಸ್ಥಿತಿಗೆ ತರಬೇಕೆಂದು ನಿವಾಸಿಗಳು ಆಗ್ರಹಿಸಿದರು.

ಪಾರ್ಕ್ ಒಳಾಂಗಣಕ್ಕೆ ಇಂಟರ್ ಲಾಕ್ ಹಾಕಲಾಗಿದೆ. ಆಟೋಟ ಸಾಮಾಗ್ರಿಗಳು ಉಪಯೋಗಿಸಬಹುದಾಗಿದೆ. ಆದರೆ ಪಾರ್ಕ್ ಒಳಾಂಗಣ ಮತ್ತು ಸುತ್ತಲೂ ಹೆಚ್ಚಿನ ಗಿಡಗಂಟಿಗಳು ಬೆಳೆದಿದ್ದು, ಸಂಜೆ ವೇಳೆ ತಿರುಗಾಡಲು ಕಷ್ಟವಾಗುತ್ತಿದೆ. ಪಾರ್ಕ್ ಸುತ್ತಲೂ ಹಾಕಲಾಗಿದ್ದ ರಕ್ಷಣಾ ಬೇಲಿ ಮೇಲೆಯೇ ಮಣ್ಣು, ಕಲ್ಲುಗಳನ್ನು ಸುರಿದಿರುವುದು ಖಂಡನೀಯ. ಇದರಿಂದಾಗಿ ಒಳಗಿರುವ ಆಟೋಟ ಸಾಮಾಗ್ರಿಗಳಿಗೂ ರಕ್ಷಣೆ ಇಲ್ಲದಂತಾಗಿದೆ. ಇತ್ತ ಗಮನ ಹರಿಸಿ, ಸಮಸ್ಯೆ ಪರಿಹರಿಸಬೇಕು. ತ್ವರಿತ ಗತಿಯಲ್ಲಿ ರಕ್ಷಣಾ ಬೇಲಿ ನಿರ್ಮಿಸುವ ಕಾರ್ಯಕ್ಕೆ ಮುಂದಾಗಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

ಒಳ ಮೀಸಲಾತಿ ಅನ್ವಯ ಯುವ ಜನರಿಗೆ ಉದ್ಯೋಗ ಕಲ್ಪಿಸದಿದ್ದರೆ ಹೋರಾಟ

ಬೆಂಗಳೂರು, ಮಾ.4(ಕೆಎಂಶಿ)–ಒಳ ಮೀಸಲಾತಿ ಪರಿಗಣಿಸಿ ಯುವಜನರಿಗೆ ಉದ್ಯೋಗ ಸೃಷ್ಟಿ ಮಾಡಬೇಕು, ನ್ಯಾಯಾಲಯದ ಕುಂಟುನೆಪ ಕೊಡಬಾರದು. ತಪ್ಪಿದಲ್ಲಿ ಬಿಜೆಪಿ ಉಗ್ರ ಹೋರಾಟಕ್ಕೆ ಇಳಿಯುವುದು ಅನಿವಾರ್ಯವಾದೀತು ಎಂದು ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ರಾಜ್ಯ ಸರ್ಕಾರವನ್ನು ಎಚ್ಚರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಪ್ರಮಾಣ ಶೇ.50ರಿಂದ ಶೇ.56ಕ್ಕೆ ಏರಿಸಲಾಗಿದೆ. ಎಲ್ಲ ಖಾಲಿ ಹುದ್ದೆ ಭರ್ತಿ ಮಾಡಿ ಎಂಬುದು ನಮ್ಮ ಆಗ್ರಹ ಎಂದರು. ಶೇ.56 ಒಳ ಮೀಸಲಾತಿ ನೀಡಿ ಬಿಜೆಪಿ ಸರ್ಕಾರ ಎಲ್ಲ ಸಮುದಾಯಗಳಿಗೆ ನ್ಯಾಯ ಕೊಡುವ ಕೆಲಸ ಮಾಡಿದೆ, ಈ ಆಧಾರದಡಿ ಶೋಷಿತ, ಪೀಡಿತ ಸಮುದಾಯಗಳಿಗೆ ಒಳ ಮೀಸಲಾತಿ ಪರಿಗಣಿಸಿ ಹುದ್ದೆಗಳ ಭರ್ತಿ ಮಾಡಬೇಕು.

ಪದೇ ಪದೇ ಈ ಸಮುದಾಯಗಳಿಗೆ ಅನ್ಯಾಯ ಮಾಡಲಾಗುತ್ತಿದೆ, ಪರಿಶಿಷ್ಟ ಜಾತಿ, ಪಂಗಡಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ ನ್ಯಾಯಾಲಯದ ಕುಂಟುನೆಪ ಹೇಳದೆ ಈ ಸಮುದಾಯಗಳಿಗೆ ಉದ್ಯೋಗ ನೀಡಿ ನ್ಯಾಯ ಕೊಡಿ.

ಅಕ್ಷಮ್ಯ ಅಪರಾಧ: ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ, ಪಂಗಡಗಳ ಯುವಜನತೆ ಸೇರಿ ಎಲ್ಲ ವರ್ಗಗಳ ಜನರಿಗೆ ನ್ಯಾಯ ಕೊಡುವ ಕೆಲಸ ಮಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ತೊಟ್ಟಿಲು ತೂಗುವ ಜೊತೆಗೇ ಮಗುವನ್ನು ಚಿವುಟುವ ಕೆಲಸ ಮಾಡುತ್ತಿದ್ದಾರೆ. ಇದು ಅಕ್ಷಮ್ಯ ಅಪರಾಧ.

ಹಳೆ ಮೀಸಲಾತಿ ಪ್ರಮಾಣದಡಿ ನೇಮಕಾತಿ ಮಾಡಲು ಮುಂದಾಗಿರುವ ರಾಜ್ಯ ಸರ್ಕಾರವು ರಾಜ್ಯದಲ್ಲಿ ಸಮುದಾಯಗಳ ಮಧ್ಯೆ ಬೆಂಕಿ ಹಚ್ಚಲು ಹೊರಟಂತಿದೆ.



ನೀವೆಷ್ಟು ದಿನ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿರುತ್ತೀರಿ ಎಂಬುದು ನಮಗೆ ತಿಳಿದಿಲ್ಲ. ಅಹಿಂದ ಹೆಸರಿನಲ್ಲಿ ಅಧಿಕಾರ ಹಿಡಿದು ಈ ಸಮುದಾಯದ ತಾಳ್ಮೆ ಪರೀಕ್ಷೆ ಮಾಡಬೇಡಿ.

ಶೋಷಿತ, ಪೀಡಿತ ಸಮುದಾಯಗಳನ್ನು ಕೆಣಕಬೇಡಿ. ಒಳ ಮೀಸಲಾತಿ ಜಾರಿ ಮಾಡದೇ ಖಾಲಿ ಹುದ್ದೆ ಭರ್ತಿ ಮಾಡಿದರೆ, ರಾಜ್ಯದಲ್ಲಿ ಮುಂದೆ ಆಗುವ ಘಟನೆಗಳಿಗೆ ತಾವೇ ಹೊಣೆ ಹೊರಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಿಎಂ ಗೌರವ ಉಳಿಸಿಕೊಳ್ಳಲಿ: ಸಮರ್ಪಕ ನಿರ್ಧಾರ ಕೈಗೊಳ್ಳುವ ಮೂಲಕ ಯುವಜನತೆ ಬೀದಿಗಿಳಿದು ಹೋರಾಟ ಮಾಡದಂತೆ ನೋಡಿಕೊಳ್ಳಬೇಕು. ಯುವಜನರ ವಯೋಮಿತಿ ಮೀರುತ್ತಿದೆ. ಸಹನೆಯ ಕಟ್ಟೆ ಒಡೆಯುತ್ತಿದೆ. ನ್ಯಾಯ ಕೊಡುವ ಸ್ಥಾನದಲ್ಲಿರುವ ಮುಖ್ಯಮಂತ್ರಿ ತಮ್ಮ ಗೌರವ ಉಳಿಸಿಕೊಳ್ಳಬೇಕು ಎಂದರು.

ಮಾರ್ಚ್ 6ರಂದು ಬಜೆಟ್ ಅಧಿವೇಶನ ಆರಂಭವಾಗುತ್ತಿದೆ, ಸರಣಿ ಪ್ರತಿಭಟನೆಗಳು ಬೆಂಗಳೂರಿನಲ್ಲಿ ಪ್ರಾರಂಭವಾಗಲಿವೆ. ನುಡಿದಂತೆ ನಡೆಯದ ಸರ್ಕಾರ ಯಾವುದೇ ಭರವಸೆಯನ್ನೂ ಈಡೇರಿಸಿಲ್ಲ.

ಹೋರಾಟಗಾರರಿಗೆ ನ್ಯಾಯ ಕಲ್ಪಿಸಲಿ: ಅಂಗನವಾಡಿ, ಆಶಾ ಕಾರ್ಯಕರ್ತೆಯರು ಹೋರಾಟ ಆರಂಭಿಸಲಿದ್ದಾರೆ. ಅತಿಥಿ ಉಪನ್ಯಾಸಕರ ಆಶ್ವಾಸನೆಯನ್ನೂ ಸರ್ಕಾರ ಈಡೇರಿಸಿಲ್ಲ. ಅವರೂ ಬೀದಿಗಿಳಿದು ಹೋರಾಟ ಮಾಡುವ ಸಂದರ್ಭ ಸೃಷ್ಟಿಯಾಗಿದೆ.

ಕೆಎಸ್‌ಆರ್‌ಟಿಸಿ–ಬಿಎಂಟಿಸಿ ನೌಕರರಿಗೆ ಪಿಎಫ್, ಗ್ರಾಚ್ಯುಟಿ ಕೊಡದೇ ಅನ್ಯಾಯ ಮಾಡುತ್ತಿದ್ದು, ಅವರೂ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಮತ್ತೊಂದೆಡೆ ರಾಜ್ಯ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವ ವೈದ್ಯರೂ ಬೀದಿಗಿಳಿದು ಹೋರಾಟ ಮಾಡುವ ಪರಿಸ್ಥಿತಿಗೆ ಬಂದು ತಲುಪಿದೆ.

108 ಆಂಬುಲೆನ್ಸ್ ಕೆಟ್ಟು ನಿಂತು ನೌಕರರಿಗೆ ಸಂಬಳ ಕೊಟ್ಟಿಲ್ಲ, 34 ತಿಂಗಳಿಂದ ಸಣ್ಣಪುಟ್ಟ ಗುತ್ತಿಗೆದಾರರ ಸುಮಾರು 40–45 ಸಾವಿರ ಕೋಟಿ ರೂ. ಬಾಕಿ ಉಳಿಸಿಕೊಳ್ಳಲಾಗಿದೆ. ಈಗಾಗಲೇ ಆತ್ಮಹತ್ಯೆ ಪ್ರಕರಣಗಳೂ ವರದಿಯಾಗಿವೆ.

ಬೆಂಗಳೂರಿನ ಕಸದ ಸಮಸ್ಯೆ, ಪೌರಕಾರ್ಮಿಕರ ಹೋರಾಟ ಪ್ರಾರಂಭ ಆಗಲಿವೆ, ಕಾಂಗ್ರೆಸ್ ಸರ್ಕಾರ ಸಂಪೂರ್ಣ ವಿಫಲವಾಗಿ, ಅರಾಜಕತೆ ಸೃಷ್ಟಿಯಾಗಿದೆ. ಆಡಳಿತ ಕಾಂಗ್ರೆಸ್ ಶಾಸಕರನ್ನು ಸಮಾಧಾನಪಡಿಸಲು ವಿದೇಶ ಪ್ರವಾಸ ಕಲ್ಪಿಸಿ ಕೊಟ್ಟಿದ್ದೀರಿ. ಆಡಳಿತ ಸಂಪೂರ್ಣ ಕುಸಿದಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣ ಹಾಳಾಗಿದೆ. ಅಭಿವೃದ್ಧಿಯಿಂದ ಕರ್ನಾಟಕ ವಂಚಿತವಾಗಿದೆ. ಆಡಳಿತ ಪಕ್ಷದ ಶಾಸಕರೇ ದಂಗೆ ಏಳುತ್ತಿದ್ದಾರೆ. ಇದು ವಾಸ್ತವಿಕ ಸತ್ಯ, ಮುಖ್ಯಮಂತ್ರಿ ಸಿದ್ದರಾಮಯ್ಯ ಕೇಂದ್ರ ಸರ್ಕಾರವನ್ನು ದೂರುವ ಬದಲು ಎಲ್ಲ ವಿಚಾರಗಳನ್ನು ಪರಿಗಣಿಸಿ ಪರಿಹಾರ ಒದಗಿಸಬೇಕು ಎಂದರು.

ವಿದೇಶಗಳಲ್ಲಿನ ರಸ್ತೆ ನೋಡಲು ಹೋಗಿದ್ದೆವು...! ಹೇಗೆ ರಸ್ತೆ ಮಾಡಬೇಕು, ಅಂತಾ ಸರ್ಕಾರಕ್ಕೆ ಹೇಳ್ತೇವೆ...!!

- ವಿದೇಶ ಪ್ರವಾಸ ಮುಗಿಸಿ ಬಂದ ಶಾಸಕರ ಅಚ್ಚರಿಯ ಪ್ರತಿಕ್ರಿಯೆ
- ಅಲ್ಲೇನು ರಾಜಕೀಯ ಮಾಡೋದು!; ಅದೇನಿದ್ರೂ ಇಲ್ಲೇ ತಾನೆ...!!

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಕುರ್ಚಿ ಕದನ ಒಂದೆಡೆ ಮುಂದುವರಿಯುತ್ತಿದ್ದರೆ, ಮತ್ತೊಂದೆಡೆ ಇದೇ ಮಾರ್ಚ್ 6ಕ್ಕೆ ಬಜೆಟ್ ಮಂಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಿದ್ಧತೆ ನಡೆಸುತ್ತಿದ್ದಾರೆ.

ಈ ಮಧ್ಯೆ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್ ವಿದೇಶ ಪ್ರವಾಸ ಕೈಗೊಂಡಿದ್ದ ಕಾಂಗ್ರೆಸ್‌ನ ಸುಮಾರು 20 ಶಾಸಕರು ಇಂದು ಬೆಂಗಳೂರಿಗೆ ವಾಪಸ್ ಆಗಿದ್ದಾರೆ.

ಕೆಂಪೇಗೌಡ ಏರ್‌ಪೋರ್ಟ್‌ಗೆ ಹೆಚ್.ಡಿ. ತಮ್ಮಯ್ಯ, ದೇವೇಂದ್ರಪ್ಪ, ಪುಟ್ಟರಂಗಶೆಟ್ಟಿ ಸೇರಿದಂತೆ ಹಲವು ಕಾಂಗ್ರೆಸ್ ಶಾಸಕರು ಮಧ್ಯರಾತ್ರಿ ಆಗಮಿಸಿದ್ದಾರೆ. ಬಹುತೇಕ ಶಾಸಕರು ಮಾಧ್ಯಮಗಳ ಕ್ಯಾಮರಾ ಕಾಣುತ್ತಿದ್ದಂತೆ ತರಾತುರಿಯಲ್ಲಿ ಕಾರು ಹತ್ತಿ ತೆರಳಿದರು.

ವಿದೇಶ ಪ್ರವಾಸದ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಸಿರಗುಪ್ಪ ಶಾಸಕ ಬಿಎಂ ನಾಗರಾಜ್, ಆಸ್ಟ್ರೇಲಿಯಾ ನ್ಯೂಜಿಲೆಂಡ್ ಹೋಗಿ ಬಂದೆವು. ಯಾವುದೇ ರಾಜಕೀಯ ಚರ್ಚೆ ಮಾಡಿಲ್ಲ. ನಾವು ಯಾವುದೇ ಅಧ್ಯಯನ ಮಾಡಿಲ್ಲ. ಫ್ಯಾಮಿಲಿ ಟ್ರಿಪ್ ಹೋಗಿದ್ದೆವ್ರು. ನಮ್ಮ ಯಾವ ರಾಜಕೀಯ ನಾಯಕರೂ ಕರೆ ಮಾಡಿಲ್ಲ. ಅಲ್ಲಿನ ಕೆಲ ತೋಟಗಳಿಗೆ ಹೋಗಿದ್ದೆವು. ಕೆಲವು ಕಡೆ ನಮಗೆ ಹೋಗೋದಕ್ಕೆ ಅವಕಾಶ ಸಿಗಲಿಲ್ಲ. ನಾವು ಅಧಿಕೃತ ಸರ್ಕಾರಿ ಪ್ರವಾಸಕ್ಕೆ ಹೋಗಿಲ್ಲ. ಅದಕ್ಕೆ ಕೆಲವು ಕಡೆ ಅವಕಾಶ ಸಿಕ್ಕಿಲ್ಲ ಎಂದರು.

ಜಗಳೂರು ಶಾಸಕ ದೇವೇಂದ್ರಪ್ಪ, ಪ್ರವಾಸದ ಜೊತೆಗೆ ಅಧ್ಯಯನಕ್ಕೆ ಹೋಗಿದ್ದೆವು. ಹೈನುಗಾರಿಕೆ, ಕಾನೂನು ಎಲ್ಲದರ ಬಗ್ಗೆ ಅಧ್ಯಯನ ಮಾಡಿದ್ದೇವೆ. ಆ ದೇಶಗಳಲ್ಲಿನ ವ್ಯವಸ್ಥೆ ನಾವು ಅಳವಡಿಸಿಕೊಳ್ಳುವ ಅಗತ್ಯತೆ ಇದೆ. ನಮ್ಮ ಕ್ಷೇತ್ರಗಳಲ್ಲಿ ನಾವು ಅಧ್ಯಯನ ಮಾಡಿಕೊಳ್ಳುತ್ತೇವೆ.

ಆಸ್ಟ್ರೇಲಿಯಾಕ್ಕೆ ಹೋಗಿ ನಾವು ಯಾವ ರಾಜಕೀಯ ಮಾಡೋಕೆ ಆಗುತ್ತೆ? ಇಲ್ಲಿ ಇದ್ರೇನೇ ನಾವು ಯಾವ ರಾಜಕೀಯವೂ ಮಾಡಿಲ್ಲ. ನಮ್ಮ ನಾಯಕರಲ್ಲಿ ಏನೂ ಗೊಂದಲಗಳಿಲ್ಲ. ರಾಜಕೀಯ ಚರ್ಚೆಗೂ ಈ ಪ್ರವಾಸಕ್ಕೂ ಯಾವುದೇ ಸಂಬಂಧವಿಲ್ಲ. ಟೀ ಕುಡಿಯುವ ಸಮಯದಲ್ಲೂ ರಾಜಕೀಯ ಮಾತಾಡಿಲ್ಲ. ಮೂರು ವರ್ಷದಿಂದ ಇದೇ ಚರ್ಚೆ ಆಗುತ್ತದೆ. ಕುಟುಂಬದ ಜೊತೆಗೆ ಹೋಗಿ ನಾವು ರಾಜಕೀಯ ಮಾಡಲು ಆಗುತ್ತಾ. ನಿಜವಾಗಲೂ ರಾಜಕೀಯ ಮಾಡಲು ಹೋಗಿದ್ದರೆ ನಾವು ಮಾಧ್ಯಮಕ್ಕೆ ಸಿಗುತ್ತಿರಲಿಲ್ಲ ಎಂದು ಹೇಳಿದರು.

ಚಾಮರಾಜನಗರ ಪುಟ್ಟರಂಗಶೆಟ್ಟಿ, ಹೈನುಗಾರಿಕೆ, ಅಲ್ಲಿನ ರಸ್ತೆಗಳನ್ನ ನೋಡಲು ಹೋಗಿದ್ದೆವು. ಸರ್ಕಾರಕ್ಕೆ ಹೇಗೆ ರಸ್ತೆ ಮಾಡಬೇಕು ಎಂದು ಹೇಳುತ್ತೇನೆ. ರಾಜಕೀಯ ಇಲ್ಲಿ ಬಂದ ಮೇಲೆ ಮಾಡೋದು, ಅಲ್ಲಿ ಹೋಗಿ ಏನು ಮಾಡಿಲ್ಲ ಎಂದರು.

ಆರ್. ರಾಕೇಶ್‌ಗೌಡರ ಹುಟ್ಟುಹಬ್ಬ




ಬಿಜೆಪಿ ಯುವಮೋರ್ಚಾ ಮೈಸೂರು ನಗರಾಧ್ಯಕ್ಷರಾದ ಆರ್.ರಾಕೇಶ್‌ಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಜಯನಗರದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ನವಜಾತ ಶಿಶುಗಳಿಗೆ ಬೇಬಿ ಕಿಟ್ ವಿತರಿಸಲಾಯಿತು. ಈ ವೇಳೆ ಕೆ.ಆರ್.ಕ್ಷೇತ್ರದ ಶಾಸಕ ಶ್ರೀವತ್ಸ, ಮುಖಂಡರಾದ ಜೋಗಿ ಮಂಜು, ಭೀಮಾ ಮಹೇಶ್, ಅನಿಲ್, ಮೋಹನ್, ರವಿ, ಪ್ರವೀಣ್, ಕಾರ್ತಿಕ್‌ಗೌಡ(ಪಂಪ), ದಿಲೀಪ್, ವಿನೋದ್, ಭರತ್, ಪೃಥ್ವಿ, ಮನು, ವಿಕಾಸ್, ಪ್ರಕಾಶ್, ಕಿರಣ್, ಮನೋಜ್, ಚೇತನ್, ರಮೇಶ್, ಕೃಷ್ಣ ಇತರರು ಉಪಸ್ಥಿತರಿದ್ದರು. ಇದೇ ವೇಳೆ ಕ್ಯೂರ್ ಬ್ಲಡ್ ಸೆಂಟರ್‌ನಲ್ಲಿ ಕನ್ನೇಗೌಡ ಟೈಗರ್ಸ್ ಹಾಗೂ ರಾಕೇಶ್ ಬಳಗದವರು ಸ್ವಯಂ ರಕ್ತದಾನ ಮಾಡಿದರು. ಬಳಿಕ ಮೈಸೂರಿನ ಪಿಂಜರಾ ಪೋಲ್‌ನಲ್ಲಿ ಜಾನುವಾರುಗಳಿಗೆ ಮೇವು ವಿತರಿಸಲಾಯಿತು.

ಮಧ್ಯಪ್ರಾಚ್ಯ ಸಂಘರ್ಷ

ಬೆಂಗಳೂರು ವಿಮಾನ ನಿಲ್ದಾಣದಲ್ಲಿ 34 ಅಂತಾರಾಷ್ಟ್ರೀಯ ವಿಮಾನಗಳು ರದ್ದು

ಬೆಂಗಳೂರು: ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ವಿಮಾನಯಾನ ಕಾರ್ಯಾಚರಣೆಗೆ ಅಡ್ಡಿಯಾಗಿದ್ದರಿಂದ ಬುಧವಾರ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸುಮಾರು 34 ಅಂತರ ರಾಷ್ಟ್ರೀಯ ವಿಮಾನಗಳು ರದ್ದಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಮಾರ್ಚ್ 4 ರಂದು ವಾಯುಪ್ರದೇಶ ನಿರ್ಬಂಧಗಳಿಂದಾಗಿ 18 ಆಗಮನ ಮತ್ತು 16 ನಿರ್ಗಮನ ವಿಮಾನಗಳು ರದ್ದಾಗಿವೆ ಎಂದು ವಿಮಾನ ನಿಲ್ದಾಣದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ರದ್ದತಿಯಿಂದ ಅಬುಧಾಬಿ, ರಿಯಾದ್, ಜೆಡ್ಡಾ, ದಮ್ಮಾಮ್, ದುಬೈ ಮತ್ತು ದೋಹಾ ಸೇರಿದಂತೆ ಪಶ್ಚಿಮ ಏಷ್ಯಾದ ನಗರಗಳೊಂದಿಗೆ ಬೆಂಗಳೂರನ್ನು ಸಂಪರ್ಕಿಸುವ ಹಲವು ಪ್ರಮುಖ ಅಂತರ ರಾಷ್ಟ್ರೀಯ ವಿಮಾನಗಳ ಮೇಲೆ ಪರಿಣಾಮ ಬೀರಿದೆ. ಏತನ್ಮಧ್ಯೆ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್), ಪ್ರಯಾಣಿಕರಿಗೆ ಸಹಾಯ ಒದಗಿಸಲು ಟರ್ಮಿನಲ್ 2ರ ಕರ್ಬ್‌ಸೈಡ್‌ನಲ್ಲಿ ಸಹಾಯ ಕೇಂದ್ರವನ್ನು ಸ್ಥಾಪಿಸಲಾಗಿದೆ ಎಂದು ತಿಳಿಸಿದೆ.

ನಾನು ಬೀದಿ ಹೋರಾಟಗಾರ, ಆದರೆ ಮುಖ್ಯಮಂತ್ರಿ ಹುದ್ದೆಗೆ ಬಂಡಾಯ ಮಾಡುವವನಲ್ಲ



ಬೆಂಗಳೂರು: ನಾನು ಮುಖ್ಯಮಂತ್ರಿ ಆಗಲು ಪಕ್ಷದೊಳಗೆ ಹೋರಾಟ ಮಾಡುವುದಿಲ್ಲ ಬಂಡಾಯ ಎಬ್ಬಿಸಿ ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ನಾನು ಬೀದಿ ಹೋರಾಟಗಾರ, ಹೇಗೆ ಹೋರಾಡಬೇಕೆಂದು ನನಗೆ ಗೊತ್ತು. ನನ್ನ ಹೋರಾಟ ಅಧಿಕಾರಕ್ಕಾಗಿ ಅಲ್ಲ, ಪಕ್ಷದೊಳಗಲ್ಲ; ನನ್ನ ಹೋರಾಟ ಪಕ್ಷದ ಹೊರಗಿದೆ. ನಾನು ಮೌನವಾಗಿದ್ದೇನೆ ಎಂದು ನನ್ನ ವಿರೋಧಿಗಳು ಭಾವಿಸಿದರೆ ಅದು ಅವರ ಊಹೆ ಎಂದು ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ಹೇಳಿದರು. ನಾನು ಏಕೆ ಬಂಡಾಯ ಮಾಡಬೇಕು. ನನಗೆ ನನ್ನ ಮೇಲೆ ವಿಶ್ವಾಸವಿದೆ, ನಾನು ಆಶಾಭಾವದಿಂದ ಬದುಕುತ್ತೇನೆ. ನನಗೆ ಸಿಗಬೇಕಾದ್ದು ಸಿಕ್ಕೇ ಸಿಗುತ್ತದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ನಡುವಿನ ಸಂಬಂಧ ಹಾಲು–ಜೇನಿನಂತಿದೆ ಎಂದು ಹೇಳಿದ್ದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಮುಖ್ಯಮಂತ್ರಿಯ ವಿಷಯವಾಗಿ ನಾನು ಇದುವರೆಗೆ ಮಾತನಾಡಿಲ್ಲ. ಅದು ನನ್ನ, ಮುಖ್ಯಮಂತ್ರಿ ಮತ್ತು ಪಕ್ಷದ ಹೈಕಮಾಂಡ್ ನಡುವೆ ಇರುವ ವಿಷಯ ಎಂದರು.

ಕೆಲವು ನಿರ್ಧಾರಗಳು ತೆಗೆದುಕೊಳ್ಳುವಾಗ ನಾನು ಭಾಗಿಯಾಗಿದ್ದೆ ಎಂದು ಹೇಳುವುದನ್ನು ಹೊರತುಪಡಿಸಿ ಬೇರೆ ಯಾವುದೇ ಹೇಳಿಕೆ ನೀಡಿಲ್ಲ. ಮುಖ್ಯಮಂತ್ರಿ ಸ್ಥಾನ ಖಾಲಿಯಾಗಲಿದೆ ಅಥವಾ ದಲಿತರಿಗೆ ಅಥವಾ ಇನ್ನೊಬ್ಬರಿಗೆ ಆ ಸ್ಥಾನ ಸಿಗಬೇಕು ಎಂದು ನಾನು ಎಂದಿಗೂ ಹೇಳಿಲ್ಲ. ಮುಖ್ಯಮಂತ್ರಿ ಸ್ಥಾನವನ್ನು ಖಾಲಿ ಮಾಡುತ್ತಿರುವುದು ಇತರರೇ ಎಂದು ತಮ್ಮ ವಿರೋಧಿಗಳಿಗೆ ತಿರುಗೇಟು ನೀಡಿದರು.

ಕೆಪಿಸಿಸಿ ಅಧ್ಯಕ್ಷನಾಗಿ ಶಿಸ್ತನ್ನು ಕಾಪಾಡುವುದು ಮತ್ತು ಪಕ್ಷದ ಪ್ರತಿಷ್ಠೆಗೆ ಧಕ್ಕೆ ಉಂಟಾಗದಂತೆ ನೋಡಿಕೊಳ್ಳುವುದು ನನ್ನ ಹೊಣೆಗಾರಿಕೆ ಎಂದರು. ನನ್ನ ಹುದ್ದೆಗೆ ಅನ್ಯಾಯವಾಗುವಂತಹ ಕೆಲಸ ನಾನು ಮಾಡಬಾರದು. ನಾನು ತಪ್ಪು ಮಾಡಿದ್ದೇನೆ ಎಂದು ಇತರರು ಬೆರಳು ತೋರಿಸುವಂತಾಗಬಾರದು. ನಾವು ಕಟ್ಟಿಕೊಂಡು ಬೆಳೆಸಿದ ಪಕ್ಷ ಇದು. ಸ್ವಾರ್ಥಕ್ಕಾಗಿ ನಾನು ಪಕ್ಷಕ್ಕೆ ತೊಂದರೆ ಕೊಡಲ್ಲ ಎಂದು ಹೇಳಿದರು.

ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ದೆಹಲಿಯಲ್ಲಿ ನಾಯಕತ್ವದ ವಿಚಾರ ಚರ್ಚಿಸಿದ್ದಾರೆಯೇ ಎಂದು ಕೇಳಿದಾಗ ಈ ಬಗ್ಗೆ ನನಗೆ ತಿಳಿದಿಲ್ಲ. ನಾನು ಅವರೊಂದಿಗೆ ಮಾತನಾಡಿಲ್ಲ, ಎಂದು ಹೇಳಿದರು.

ಮಾ.13ರಿಂದ ಸೀರೆ, ಉಡುಪುಗಳ ಮೇಳ

ಮೈಸೂರು, ಮಾ.4– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು ವತಿಯಿಂದ ಮಾ.13 ರಿಂದ 22 ರವರೆಗೆ ಸೀರೆ ಮತ್ತು ಉಡುಪುಗಳ ಮೇಳವನ್ನು ಆಯೋಜಿಸಲಾಗಿದೆ. ಮೇಳದಲ್ಲಿ ಸಣ್ಣ ಮನರಂಜನೆ, ತಿಂಡಿ ತಿನಿಸುಗಳ ಅಂಗಡಿಗಳು, ಕರಕುಶಲಗಳ ಮಾರಾಟಕ್ಕೆ ಅವಕಾಶ ಇರುತ್ತದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಖದೀಮರಿಬ್ಬರ ಬಂಧನ ; ಕಳವು ಮಾಡಿದ್ದ 2.28 ಲಕ್ಷ ನಗದು, 22 ಗ್ರಾಂ ಚಿನ್ನಾಭರಣ ವಶಕ್ಕೆ

ತಗಡೂರು ಗ್ರಾಮದಲ್ಲಿ ನಡೆದಿದ್ದ ಕಳ್ಳತನ, ಅದೇ ಗ್ರಾಮದ ಇಬ್ಬರು ಬಂಧಿತರು

ಮೈಸೂರು,ಮಾ.4(ಪಿಎಂ)– ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಇಬ್ಬರು ಖದೀಮರನ್ನು ಬಂಧಿಸಿರುವ ಮೈಸೂರು ಜಿಲ್ಲಾ ಪೊಲೀಸರು, ಕಳವು ಮಾಡಿದ್ದ 2.28 ಲಕ್ಷ ನಗದು ಹಾಗೂ 22 ಗ್ರಾಂ ಚಿನ್ನದ ಒಡವೆಗಳನ್ನು ವಶಪಡಿಸಿಕೊಂಡಿದ್ದಾರೆ.


ತಗಡೂರು ಗ್ರಾಮದ ಟಿ.ಬಿ.ರಾಜು ಹಾಗೂ ಟಿ.ಡಿ.ಅಭಿಷೇಕ್ ಬಂಧಿತರು. ನ್ಯಾಯಾಲಯದ ಆದೇಶದ ಮೇರೆಗೆ ಈ ಇಬ್ಬರನ್ನು ನಂಜನಗೂಡು ತಾಲೂಕು ಉಪ ಕಾರಾಗೃಹಕ್ಕೆ ಒಪ್ಪಿಸಲಾಗಿದೆ. ಕವಲಂದೆ ಠಾಣಾ ವ್ಯಾಪ್ತಿಯ ತಗಡೂರು ಗ್ರಾಮದ ನಿವಾಸಿ ಪ್ರೇಮ ಅವರ ಮನೆಯಲ್ಲಿ ಫೆ.16ರಂದು ಈ ಇಬ್ಬರು ಕಳ್ಳತನ ಮಾಡಿದ್ದರು.

ಅಂದು ಪ್ರೇಮ ಅವರು ಕೆಲಸಕ್ಕೆ ಹೋಗಿದ್ದ ಸಂದರ್ಭದಲ್ಲಿ ಅವರ ಮನೆಗೆ ಕನ್ನ ಹಾಕಿದ್ದ ಈ ಇಬ್ಬರು ಖದೀಮರು, 22 ಗ್ರಾಂ ಚಿನ್ನಾಭರಣ ಮತ್ತು 9 ಲಕ್ಷ ನಗದು ಹಣವನ್ನು ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಕವಲಂದೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿತ್ತು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಪೊಲೀಸ್ ವರಿಷ್ಠಾಧಿಕಾರಿಗಳಾದ ಮಲ್ಲಿಕ್,ಎಲ್. ನಾಗೇಶ್ ಅವರ ಮಾರ್ಗದರ್ಶನದಲ್ಲಿ ನಂಜನಗೂಡು ಉಪವಿಭಾಗದ ಡಿವೈಎಸ್‌ಪಿ ಜಿ.ಎಸ್.ರಘು, ಬಿಳಿಗೆರೆ ವೃತ್ತ ನಿರೀಕ್ಷಕ ಚಂದ್ರಶೇಖರ್, ಬಿಳಿಗೆರೆ ಪ್ರಭಾರ ವೃತ್ತ ನಿರೀಕ್ಷಕ ಆನಂದ, ಕವಲಂದೆ ಪೊಲೀಸ್ ಠಾಣೆಯ ಪಿಎಸ್‌ಐ ಬಸವರಾಜು ಅವರ ನೇತೃತ್ವದಲ್ಲಿ ಈ ಕಳ್ಳರನ್ನು ಪತ್ತೆ ಮಾಡಿ ಕಳವು ಮಾಡಿದ್ದ ನಗದು, ಚಿನ್ನಾಭರಣ ವಶಪಡಿಸಿಕೊಳ್ಳಲಾಯಿತು.

ಜೂಜಾಟ: ವರುಣ ಕಾಲುವೆ ಬಳಿ ಹಣವನ್ನು ಪಣಕ್ಕಿಟ್ಟು ಅಂದರ್ ಬಾಹರ್ ಇಸ್ಪೀಟ್ ಆಡುತ್ತಿದ್ದ ಅಡ್ಡೆ ಮೇಲೆ ಜಯಪುರ ಪೊಲೀಸರು ದಾಳಿ ನಡೆಸಿ, 6 ಮಂದಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಅಲ್ಲದೆ, ಪಣಕ್ಕಿಟ್ಟಿದ್ದ 2,520 ರೂ. ನಗದನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ದ.ಆಫ್ರಿಕಾ ಮಣಿಸಿ ಟಿ20 ವಿಶ್ವಕಪ್ ಫೈನಲ್ ಪ್ರವೇಶಿಸಿದ ನ್ಯೂಜಿಲೆಂಡ್


ನ್ಯೂಜಿಲೆಂಡ್ ಆಟಗಾರರ ಸಂಭ್ರಮ

ಕೋಲ್ಕತ್ತಾ, ಮಾ.4(ವಿವಿಹೆಚ್)– ನ್ಯೂಜಿಲೆಂಡ್ ತಂಡದ ಆರಂಭಿಕ ಬ್ಯಾಟರ್ ಫಿನ್ ಅಲೆನ್ ಅವರ ಅಜೇಯ ಶತಕದಾಟದ ಫಲದಿಂದ ಬಲಿಷ್ಠ ದಕ್ಷಿಣ ಆಫ್ರಿಕಾವನ್ನು 9 ವಿಕೆಟ್‌ಗಳಿಂದ ಮಣಿಸಿದ ನ್ಯೂಜಿಲೆಂಡ್ ಟಿ20 ವಿಶ್ವಕಪ್ ಫೈನಲ್ಸ್‌ಗೆ ಲಗ್ಗೆಯಿಟ್ಟಿದೆ.

ಇಲ್ಲಿನ ಈಡೆನ್ ಗಾರ್ಡನ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಸಿಸಿ ಟಿ20 ವಿಶ್ವಕಪ್ 2026ರ ಮೊದಲ ಸೆಮಿ ಫೈನಲ್ ಪಂದ್ಯದಲ್ಲಿ ಹರಿಣ ಪಡೆ ನೀಡಿದ್ದ 170ರನ್‌ಗಳನ್ನು ಸರಾಗವಾಗಿ ಬೆನ್ನತ್ತುವಲ್ಲಿ ಫಿನ್ ಅಲೆನ್ ಯಶಸ್ವಿಯಾದರು. ಬೌಂಡರಿ, ಸಿಕ್ಸರ್‌ಗಳ ಮೂಲಕ ಎದುರಾಳಿ ತಂಡವನ್ನು ಧೂಳೀಪಟ ಮಾಡಿದರು.

ಅಜೇಯರಾಗಿ ಬ್ಯಾಟ್ ಬೀಸಿದ ಅವರು ಕೇವಲ 33 ಎಸೆತಗಳಲ್ಲಿ 10 ಬೌಂಡರಿ, ಭರ್ಜರಿ 8 ಸಿಕ್ಸರ್‌ಗಳ ಮೂಲಕ 100 ರನ್ ಬಾರಿಸಿದರು. ತಂಡ ಗೆಲ್ಲಲು 1 ರನ್, ಅವರ ಶತಕಕ್ಕೆ 4 ರನ್‌ಗಳ ಅವಶ್ಯಕವಿತ್ತು. ಈ ವೇಳೆ ಏನ್ಸನ್ ಅವರ ಬಾಲ್‌ನ್ನು ಬೌಂಡರಿ ಗಟ್ಟುವ ಮೂಲಕ ತಂಡಕ್ಕೆ ಗೆಲುವಿನ ರನ್ ಬಾರಿಸುವ ಜೊತೆಗೆ ಶತಕವನ್ನೂ ಪೂರೈಸಿದರು. ಅತ್ತ ಇವರಿಗೆ ಸಾಥ್ ನೀಡಿದ ಟಿಮ್ ಸೀಫರ್ಟ್ 33 ಎಸೆತಗಳಲ್ಲಿ 7 ಬೌಂಡರಿ, 2 ಸಿಕ್ಸರ್ ಸಹಿತ 58 ರನ್ ಗಳಿಸಿ ನಿರ್ಗಮಿಸಿದರು. ಬಳಿಕ ಬಂದ ರಚಿನ್ ರವೀಂದ್ರ 13 ರನ್ ಬಾರಿಸಿದರು. ಅಂತಿಮವಾಗಿ ಕಿವೀಸ್ ಕೇವಲ 12.5 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು 173 ರನ್ ಬಾರಿಸಿ ಗೆದ್ದು ಬೀಗುವ ಮೂಲಕ ಫೈನಲ್ಸ್‌ಗೆ ಎಂಟ್ರಿಕೊಟ್ಟಿತು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ ಕೇವಲ 12 ರನ್‌ಗೆ 2 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಕ್ವಿಂಟನ್ ಡಿಕಾಕ್ 10 ರನ್‌ಗೆ ವಿಕೆಟ್ ಒಪ್ಪಿಸಿದರೆ, ನಂತರ ಬಂದ ರಯಾನ್ ರಿಕಲ್ಟನ್ ಗೋಲ್ಡನ್ ಡಕ್ ಆದರು.

ಬಳಿಕ ಮೂರನೇ ವಿಕೆಟ್‌ಗೆ ಜೊತೆಯಾದ ಆರಂಭಿಕ ಆಟಗಾರ ಏಡನ್ ಮಾರ್ಕರಂ ಹಾಗೂ ಡಿವಾಲ್ಡ್ ಬ್ರೆವೀಸ್ 43 ರನ್ ಗಳ ಜೊತೆಯಾಟ ನೀಡಿದರು. 18 ರನ್ ಕಲೆಹಾಕಿದ್ದ ಮಾರ್ಕರಂ ವಿಕೆಟ್ ಒಪ್ಪಿಸಿದರೆ, ನಂತರ ಕಣಕ್ಕಿಳಿದ ಡೇವಿಡ್ ಮಿಲ್ಲರ್ 6 ರನ್ ಕಲೆಹಾಕಿ ಔಟ್ ಆದರು. ಬೆನ್ನಲ್ಲೇ ನೆಲಕಚ್ಚಿ ಆಟವಾಡುತ್ತಿದ್ದ ಡಿವಾಲ್ಡ್ ಬ್ರೇವೀಸ್ 34 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಒಂದಾದ ಟ್ರಿಸ್ಟನ್ ಸ್ಟಬ್ಸ್ ಹಾಗೂ ಮಾರ್ಕೊ ಯಾನ್ಸನ್ 73 ರನ್‌ಗಳ ಅಮೂಲ್ಯ ಜೊತೆಯಾಟವಾಡಿದರು. ಸ್ಟಬ್ಸ್ 29 ರನ್ ಕಲೆಹಾಕಿದರೆ, ಯಾನ್ಸನ್ 30 ಎಸೆತಗಳಲ್ಲಿ ಅಜೇಯ 55 ರನ್ ಬಾರಿಸಿದರು. ಉಳಿದಂತೆ ಕಾರ್ಬಿನ್ ಬಾಷ್ 2, ಕಗಿಸೋ ರಬಾಡ ಡಕ್ ಔಟ್ ಹಾಗೂ ಕೇಶವ್ ಮಹಾರಾಜ್ ಅಜೇಯ 1 ರನ್ ಬಾರಿಸುವ ಮೂಲಕ 20 ಓವರ್ ಗಳಲ್ಲಿ 8 ವಿಕೆಟ್ ನಷ್ಟಕ್ಕೆ 169 ರನ್ ಕಲೆಹಾಕಿತು. ನ್ಯೂಜಿಲೆಂಡ್ ಪರ ರಚಿನ್ ರವೀಂದ್ರ, ಮ್ಯಾಟ್ ಹೆನ್ರಿ ಹಾಗೂ ಮೆಕ್ ಕಾನ್ನಿ ತಲಾ 2 ವಿಕೆಟ್ ಪಡೆದರೆ, ಲಾಕಿ ಫರ್ಗ್ಯುಸನ್ ಹಾಗೂ ಜೇಮ್ಸ್ ನಿಶಮ್ ತಲಾ ಒಂದೊಂದು ವಿಕೆಟ್ ಪಡೆದರು. ಭರ್ಜರಿ ಬ್ಯಾಟಿಂಗ್ ಮೂಲಕ ಕಿವೀಸ್ ಗೆಲುವಿಗೆ ಸಹಕರಿಸಿದ ಫಿನ್ ಅಲೆನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದು ಆಂಗ್ಲೋ–ಇಂಡಿಯಾ ಕದನ

ಗುರುವಾರ (ಮಾ.5) ಐಸಿಸಿ ಟಿ20 ವಿಶ್ವಕಪ್ 2026ರ ಎರಡನೇ ಸೆಮಿಫೈನಲ್ಸ್ ನಲ್ಲಿ ಭಾರತ ಮತ್ತು ಇಂಗ್ಲೆಂಡ್ ಮುಖಾಮುಖಿಯಾಗಲಿದೆ.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಸಂಜೆ 7 ಗಂಟೆಗೆ ಇತ್ತಂಡಗಳು ಕಾದಾಡಲಿದ್ದು, ಗೆದ್ದ ತಂಡ ಮಾ.8 ರಂದು ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಫೈನಲ್ಸ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ ಪ್ರಶಸ್ತಿಗಾಗಿ ಸೆಣಸಾಡಲಿದೆ. ಇತ್ತಂಡಗಳು ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಮೂರನೇ ಬಾರಿಗೆ ಮುಖಾಮುಖಿಯಾಗಲಿವೆ. ಹಿಂದಿನ ಎರಡು ಸೆಮಿಫೈನಲ್‌ಗಳಲ್ಲಿ ಉಭಯ ತಂಡಗಳು ತಲಾ ಒಂದೊಂದು ಪಂದ್ಯವನ್ನು ಗೆದ್ದುಕೊಂಡಿವೆ. 2020ರ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್, ಭಾರತವನ್ನು 10 ವಿಕೆಟ್‌ಗಳಿಂದ ಸೋಲಿಸಿದರೆ, 2024ರ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ಭಾರತ, ಇಂಗ್ಲೆಂಡ್ ತಂಡವನ್ನು 68 ರನ್‌ಗಳಿಂದ ಸೋಲಿಸಿತ್ತು.

ಹಿರಿಯ ಪತ್ರಕರ್ತ, ಪದ್ಮಭೂಷಣ ಪುರಸ್ಕೃತ ಎಚ್.ಕೆ. ದುವಾ ನಿಧನ

ನವದೆಹಲಿ: ಹಿರಿಯ ಪತ್ರಕರ್ತ, ಪದ್ಮಭೂಷಣ ಪುರಸ್ಕೃತ ಎಚ್.ಕೆ. ದುವಾ (88) ಅವರು ಬುಧವಾರ ನಿಧನರಾಗಿದ್ದಾರೆ.



ಎಚ್.ಕೆ ದುವಾ ನಿಧನಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಂಸದ ಶಶಿ ತರೂರ್ ಸೇರಿದಂತೆ ಗಣ್ಯರು ಸಾಮಾಜಿಕ ಮಾಧ್ಯಮಗಳಲ್ಲಿ ಸಂತಾಪ ವ್ಯಕ್ತಪಡಿಸಿದ್ದಾರೆ.

ದುವಾ ಅವರು ತೀಕ್ಷ್ಣ ರಾಜಕೀಯ ವಿಶ್ಲೇಷಕರಾಗಿ ಮತ್ತು ಸಂಪಾದಕೀಯ ಸ್ವಾತಂತ್ರ್ಯದ ಬದ್ಧತೆಗೆ ದುವಾ ಹೆಸರುವಾಸಿಯಾಗಿದ್ದರು. 2009ರಿಂದ 2015ರವರೆಗೆ ರಾಜ್ಯಸಭಾ ಸದಸ್ಯರಾಗಿದ್ದ ಅವರು ವಿದೇಶಾಂಗ ವ್ಯವಹಾರ ಮತ್ತು ರಾಷ್ಟ್ರೀಯ ಭದ್ರತೆಯ ಚರ್ಚೆಗಳಿಗೆ ಮಹತ್ವದ ಕೊಡುಗೆ ನೀಡಿದ್ದರು.

'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆ ಸಂಪಾದಕರಾಗಿ, ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ದ ಟ್ರಿಬ್ಯೂನ್ ಪತ್ರಿಕೆಯ ಪ್ರಧಾನ ಸಂಪಾದಕರಾಗಿ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಸಂಪಾದಕೀಯ ಸಲಹೆಗಾರರಾಗಿ ದುವಾ ಕಾರ್ಯನಿರ್ವಹಿಸಿದ್ದರು. ಅಟಲ್ ಬಿಹಾರಿ ವಾಜಪೇಯಿ ಮತ್ತು ಎಚ್.ಡಿ ದೇವೇಗೌಡರು ಪ್ರಧಾನಿಯಾಗಿದ್ದಾಗ ಅವರಿಗೆ ದುವಾ ಅವರು ಮಾಧ್ಯಮ ಸಲಹೆಗಾರರಾಗಿದ್ದರು. 2001ರಿಂದ 2003ರವರೆಗೆ ಡೆನ್ಮಾರ್ಕ್‌ನಲ್ಲಿ ಭಾರತದ ರಾಯಭಾರಿಯಾಗಿಯೂ ಕಾರ್ಯನಿರ್ವಹಿಸಿದ್ದರು.

ರಾಷ್ಟ್ರೀಯ ಭದ್ರತಾ ಸಲಹಾ ಮಂಡಳಿಯ ಸದಸ್ಯರಾಗಿದ್ದ ದುವಾ ಅವರು ವಿದೇಶಾಂಗ ವ್ಯವಹಾರಗಳ ಸ್ಥಾಯಿ ಸಮಿತಿ ಮತ್ತು ಗೃಹ ಸಚಿವಾಲಯದ ಸಮಾಲೋಚನಾ ಸಮಿತಿಯ ಭಾಗವಾಗಿದ್ದರು. ದುವಾ ಅವರು ಪದ್ಮಭೂಷಣ ಪುರಸ್ಕೃತರಾಗಿದ್ದರು ಮತ್ತು ಪಂಜಾಬ್ ಹಾಗೂ ಕುರುಕ್ಷೇತ್ರ ವಿಶ್ವವಿದ್ಯಾಲಯಗಳಿಂದ ಡಿ.ಲಿಟ್ ಗೌರವವನ್ನು ಪಡೆದಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನಿಮ್ಮ ಗೆಳೆಯ ಮದುವೆ ಆಗ್ತಿರೊ ಹುಡ್ಗಿ ಸ್ವಲ್ಪಾನು ಚೆನ್ನಾಗಿಲ್ಲ. ನೀವಾದ್ರು ಹೇಳ್ಬಾರ್ದ?

ಗಂಡ : ನಾನು ಯಾಕೆ ಹೇಳಲಿ, ನಾನು ನಿನ್ನ ಮದುವೆ ಆಗುವಾಗ ಬಡ್ಡಿಮಗ ಸುಮ್ನೆ ಇದ್ದ!

ಮೈಸೂರು ಮಿತ್ರ

ಗುರುವಾರ, ಮಾರ್ಚ್ 5, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಮಾತಾಡಿದಂತೆ ಜೀವಿಸಲು ಆಗೋದಿಲ್ಲ. ಬರೆದಿಟ್ಟಂತೆ ಬದುಕಲೂ ಆಗುವುದಿಲ್ಲ. ನಮ್ಮಿಂದ ಬೇರೆಯವರಿಗೆ ತೊಂದರೆಯಾಗದಂತೆ ಬದುಕಿದರೆ ಸಾಕು ಅದೇ ಸಂತೃಪ್ತ ಬದುಕು.

ವೇದ ಸುಳ್ಳಾದರೂ ⎧ ರಾವಣನ ಹೊಟ್ಟೆಗೆ
ಗಾದೆ ಸುಳ್ಳಾಗದು ⎩ ಅರೆಕಾಸಿನ ಮಜ್ಜಿಗೆ

ನಿಮ್ಮ ಪತ್ರಗಳು

ಜನಪ್ರತಿನಿಧಿಗಳು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸಬೇಕಿದೆ!

ಮಾನ್ಯರೆ,

ರೌಡಿಶೀಟರ್ ಬಿಕ್ಲು ಶಿವ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ ಶಾಸಕ, ಹುಬ್ಬಳ್ಳಿಯ ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಶಾಸಕ ಜೈಲುಪಾಲು, ಅಕ್ರಮ ಬೆಟ್ಟಿಂಗ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಚಿತ್ರದುರ್ಗ ಮೂಲದ ಶಾಸಕನ ಬಂಧನ ಹಾಗೂ ಲಂಚಕ್ಕೆ ಕೈಯೊಡ್ಡಿ ಸಿಕ್ಕಿಬಿದ್ದ ಶಾಸಕ ಲೋಕಾಯುಕ್ತ ಪೊಲೀಸರ ವಶಕ್ಕೆ..... ಈ ರೀತಿಯ ಹತ್ತು ಹಲವು ಸುದ್ದಿಗಳನ್ನು ಮಾಧ್ಯಮಗಳಲ್ಲಿ ನೋಡಿದಾಗ ಮನಸ್ಸಿಗೆ ಖೇದವೆನಿಸುತ್ತದೆ. ಏಕೆಂದರೆ ಶಾಸಕರು ನಮ್ಮ ಜನಪ್ರತಿನಿಧಿಗಳು. ವಿಧಾನಸಭೆಯಲ್ಲಿ ಅವರು ಶಾಸನ ರಚನೆ ಮಾಡಬೇಕಾದ ಜವಾಬ್ದಾರಿ ಹೊಂದಿರುವವರು. ಆದರೆ ಕೆಲ ಶಾಸಕರು ತಮ್ಮ ಜವಾಬ್ದಾರಿ ಮರೆತು ಕಾನೂನು ಉಲ್ಲಂಘನೆ ಮಾಡಿ ಜೈಲು ಪಾಲಾಗುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ತಮ್ಮ ಕ್ಷೇತ್ರದ ಜನರ ಧ್ವನಿಯಾಗಿ ವಿಧಾನಸಭೆಯಲ್ಲಿ ಕಾರ್ಯನಿರ್ವಹಿಸುವ ಪ್ರಮುಖವಾದ ಜವಾಬ್ದಾರಿ ಪ್ರತಿಯೊಬ್ಬ ಶಾಸಕರ ಮೇಲಿದೆ. ಮತದಾರರ ಕುಂದುಕೊರತೆಗಳನ್ನು ಆಲಿಸಿ ಸರ್ಕಾರದಿಂದ ಪರಿಹಾರ ಒದಗಿಸುವ ಹಾಗೂ ಸರ್ಕಾರದ ನೀತಿಗಳು ಮತ್ತು ನಿರ್ಧಾರಗಳನ್ನು ಪ್ರಶ್ನಿಸುವ ಮೂಲಕ ಪಾರದರ್ಶಕತೆ ಕಾಪಾಡಿಕೊಳ್ಳಬೇಕಾದ ಜನಪ್ರತಿನಿಧಿಗಳೇ ಈ ರೀತಿ ಕಾನೂನುಬಾಹಿರ ಕೃತ್ಯಗಳಲ್ಲಿ ಭಾಗಿಯಾಗಿ ಜೈಲು ಪಾಲಾಗುತ್ತಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಪಮಾನ ಮಾಡಿದಂತೆ. ರಾಜಕೀಯದಲ್ಲಿ ಶಾಸಕರು ಆರೋಪಿಗಳಾಗುವುದು ದೊಡ್ಡ ಕಳಂಕ. ಇಂತಹ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸಕರು ತಾನು ಹೊಂದಿರುವ ಸ್ಥಾನದ ಮಹತ್ವವನ್ನು ಅರಿತು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುವ ಅವಶ್ಯಕತೆ ಇದೆ. ಅದೇ ರೀತಿ ಪ್ರತಿಯೊಬ್ಬ ಮತದಾರನು ಸದೃಢವಾದ ದೇಶ ಕಟ್ಟಲು ಹಾಗೂ ಭ್ರಷ್ಟಾಚಾರ ಮುಕ್ತ ಸಮಾಜವನ್ನು ನಿರ್ಮಿಸಲು ಚುನಾವಣಾ ಸಮಯದಲ್ಲಿ ಸೂಕ್ತ ಹಾಗೂ ಯೋಗ್ಯ ಅಭ್ಯರ್ಥಿಗೆ ಯೋಚಿಸಿ ಮತ ಚಲಾಯಿಸುವ ಅವಶ್ಯಕತೆ ಬಹಳಷ್ಟಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

'ಮೈಸೂರು ಮಿತ್ರ' ಸುದ್ದಿ ಫಲಶ್ರುತಿ

ತಿ.ನರಸೀಪುರ ಮುಖ್ಯ ರಸ್ತೆ, ಗಿರಿದರ್ಶಿನಿ ಬಡಾವಣೆಗೆ ಭಾಗಶಃ ಬೀದಿದೀಪ ಭಾಗ್ಯ!

ಮಾನ್ಯರೆ,

ಮೈಸೂರು ಸಿದ್ಧಾರ್ಥನಗರದ ಟೆರೇಸಿಯನ್ ಕಾಲೇಜು ವೃತ್ತದಿಂದ ಪ್ರಾರಂಭವಾಗಿ ತಿ.ನರಸೀಪುರ ಮುಖ್ಯ ರಸ್ತೆ (ಲಲಿತಮಹಲ್ ನಗರ, ಗಿರಿದರ್ಶಿನಿ ಬಡಾವಣೆ ಮತ್ತು ಆಲನಹಳ್ಳಿ)– ಈ ಭಾಗಗಳಿಗೆ ಹೊಂದಿಕೊಂಡಂತೆ)ಯಲ್ಲಿ ವಿದ್ಯುತ್ ಕಂಬಗಳು ಮತ್ತು ದೀಪಗಳನ್ನು ಅಳವಡಿಸಿದ್ದರೂ ರಾತ್ರಿ ವೇಳೆ ಅವು ಬೆಳಗದೆ ದಟ್ಟ ಕತ್ತಲೂ ಆವರಿಸಿತ್ತು. ಮಾರಣಾಂತಿಕ ಅಪಾಯಕಾರಿ ತಿರುವುಗಳು ಇದ್ದು ಈ ಮಾರ್ಗ ಸಂಚರಿಸುವ ಕಾರುಗಳು, ಲಾರಿಗಳು ಆಗಾಗ ಅಪಘಾತಕ್ಕೀಡಾಗುತ್ತಿದ್ದವು. ಈ ಸಂಬಂಧ 'ಮೈಸೂರು ಮಿತ್ರ'ನಲ್ಲಿ ವರದಿ ಪ್ರಕಟವಾಗಿತ್ತು.

ಎಷ್ಟೋ ಬೈಕ್, ಸ್ಕೂಟರ್ ಸವಾರರು ಮುಂದೆ ಇರುವ ತಿರುವು ಕಾಣದೆ ಮರಗಳಿಗೆ, ನಿಂತಿರುವ ವಾಹನಗಳಿಗೆ ಡಿಕ್ಕಿ ಹೊಡೆದು ಪ್ರಾಣ ಕಳೆದುಕೊಳ್ಳುತ್ತಿದ್ದರೂ ಸಂಬಂಧಪಟ್ಟ ಇಲಾಖೆ ಮತ್ತು ನಗರ ಪಾಲಿಕೆ ಅಧಿಕಾರಿಗಳು ದಿವ್ಯ ನಿರ್ಲಕ್ಷ್ಯ ತೋರಿದ್ದರು. ಇದರ ಬಗ್ಗೆ 'ಮೈಸೂರು ಮಿತ್ರ' ವರದಿ ಮಾಡಿತ್ತು. ಈ ಸಮಸ್ಯೆ ಶೀಘ್ರ ಬಗೆಹರಿಸದಿದ್ದರೆ ಇಲಾಖೆ ಮತ್ತು ನಗರಪಾಲಿಕೆ ವಿರುದ್ಧ ಪ್ರತಿಭಟನೆ ಮಾಡುವ ಎಚ್ಚರಿಕೆಯನ್ನು ನಿವಾಸಿಗಳು ನೀಡಿದ್ದರು. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡ ಸಂಬಂಧಪಟ್ಟ ಇಲಾಖೆಯು ಇತ್ತೀಚೆಗೆ ಭಾಗಶಃ ವಿದ್ಯುತ್ ಕಂಬಗಳಲ್ಲಿ ದೀಪಗಳು ಬೆಳಗುವಂತೆ ಮಾಡಿ ಸ್ಥಳೀಯ ನಿವಾಸಿಗಳು ನಿಟ್ಟುಸಿರು ಬಿಡುವಂತೆ ಮಾಡಿದೆ. ಬಾಕಿ ಇರುವ ದೀಪಗಳು ಬೆಳಗುವಂತೆ ಕ್ರಮ ಕೈಗೊಳ್ಳುವಂತೆ ಆಗ್ರಹಪಡಿಸುತ್ತೇವೆ.

– ನೊಂದ ನಿವಾಸಿಗಳು

ರೇಷ್ಮೆ ಕಾರ್ಖಾನೆ: ಮುಖ್ಯಮಂತ್ರಿ ಮೌನವೇಕೆ?

ಮಾನ್ಯರೆ,

ಮೈಸೂರು ಜಿಲ್ಲೆಯ ತಿ. ನರಸೀಪುರದ, ಕೆಎಸ್ಐಸಿ ನೂಲು ತೆಗೆಯುವ ಘಟಕದ 6 ಎಕರೆ ಜಾಗವನ್ನು ಕ್ರೀಡಾಂಗಣ ನಿರ್ಮಿಸಲು ಜಿಲ್ಲಾಡಳಿತ ಕ್ರೀಡಾ ಇಲಾಖೆಗೆ ವರ್ಗಾಯಿಸಿದ್ದು, ಇದನ್ನು ವಿರೋಧಿಸಿ, ಮೈಸೂರು ಸಂಸದರು, ಮೈಸೂರು ಗ್ರಾಹಕ ಪರಿಷತ್, ಕಾರ್ಮಿಕರು, ಸಾರ್ವಜನಿಕರು, ಪರಿಸರ ಪ್ರಿಯರು ಪ್ರತಿಭಟಿಸುತ್ತಿದ್ದಾರೆ. ಹಲವು ದಿನಗಳಿಂದ ಪ್ರತಿಭಟನೆ ನಡೆಯುತ್ತಿದ್ದರೂ, ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು, ತವರು ಜಿಲ್ಲೆಯವರೇ ಆದ ಮುಖ್ಯಮಂತ್ರಿಗಳು ಮೌನ ವಹಿಸಿದ್ದಾರೆ. ಇಷ್ಟಾದರೂ ಜನರ ನಾಡಿ ತಿಳಿಯದಂತೆ ಇರುವುದು ಅನುಮಾನಕ್ಕೆ ಕಾರಣವಾಗಿದೆ. ಎನ್‌ಟಿಎಂ ಸರ್ಕಾರಿ ಶಾಲೆಯ ಜಾಗವನ್ನು ವಿವೇಕಾನಂದ ಸ್ಮಾರಕ ಮಾಡಲು ಕೊಟ್ಟಾಗಲೂ, ರಾತ್ರೋ ರಾತ್ರಿ ಜೆಸಿಬಿಯಿಂದ ಶಾಲೆ ಹೊಡೆಯುವಾಗಲೂ ಮುಖ್ಯಮಂತ್ರಿಗಳು ಮೌನವಹಿಸಿದ್ದರು. ಅದು ಇತಿಹಾಸದ ಪುಟ ಸೇರಿತು. ಈಗ ರೇಷ್ಮೆ ಕಾರ್ಖಾನೆಯ ಸರದಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು

ಕಾಲಾಯ ತಸ್ಮೈ ನಮಃ ಉತ್ತಮ ಲೇಖನ

ಮಾನ್ಯರೆ,

ಮಾರ್ಚ್ 3ರಂದು 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಪ್ರಕಟವಾದ ಕಾಲಾಯ ತಸ್ಮೈ ನಮಃ ಲೇಖನ ವರ್ತಮಾನದ ಎಐ ತಂತ್ರಜ್ಞಾನದ ಸಂಶೋಧನಾತ್ಮಕ ಬರವಣಿಗೆಗಾಗಿ ಮೂಡಿ ಬಂದಿದೆ. ಎಐ ತಂತ್ರಜ್ಞಾನದ ಸಾಧಕ ಬಾಧಕಗಳ ಕುರಿತ ವಿಷಯಗಳು ಜನಸಾಮಾನ್ಯರಿಗೆ ಮುಟ್ಟುವ ರೀತಿಯಲ್ಲಿ ಮನೋಜ್ಞವಾಗಿ ಲೇಖಕರು ಪ್ರಸ್ತುತಪಡಿಸಿದ್ದಾರೆ. ಇಂತಹ ಸಕಾಲಿಕ ಲೇಖನಗಳನ್ನು ಪ್ರಕಟಿಸುತ್ತಿರುವ ಮೈಸೂರು ಮಿತ್ರ ದಿನಪತ್ರಿಕೆ ಮತ್ತು ಸಂಪಾದಕರಿಗೆ ಮೆಚ್ಚುಗೆಯ ನಮಸ್ಕಾರಗಳು. ವರ್ತಮಾನದ ವಿಷಯಗಳ ಮೇಲೆ ಬೆಳಕು ಚೆಲ್ಲುವ ಇಂತಹ ಲೇಖನಗಳು ಮತ್ತಷ್ಟು ಓದುಗರಿಗೆ ತಲುಪಿಸುವ ಕೆಲಸವನ್ನು ಪತ್ರಿಕೆ ಮತ್ತೆ ಮತ್ತೆ ಮಾಡುತ್ತಾ ಇರಲಿ ಎಂಬ ಆಶಯದೊಂದಿಗೆ ಅಂಕಣಕಾರರಾದ ಡಾ. ಗುಬ್ಬಿಗೂಡು ರಮೇಶ್ ಅವರನ್ನು ಅಭಿನಂದಿಸುತ್ತೇನೆ.

–ಭುಗತಗಳ್ಳಿ ಮಹಾದೇವ, ವಾಜಮಂಗಲ ಅಂಚೆ, ಮೈಸೂರು ತಾ.



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸಂಸ್ಕೃತಿಯ ಸೇತುವೆಯಾಗಿರುವ ಶಿಕ್ಷಕರು

ಸೂರ್ಯನಿಲ್ಲದೆ ಬೆಳಕನ್ನು ಹೇಗೆ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲವೋ ಹಾಗೆಯೇ ಗುರುವಿಲ್ಲದ ವಿದ್ಯೆಯ ಕಲ್ಪನೆ ಕೂಡ ಸಾಧ್ಯವಿಲ್ಲ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಎಂಬ ದಾಸರ ಪದ ಗುರುವಿನ ಮಹತ್ವವನ್ನು ತಿಳಿಸುತ್ತದೆ.

ಮಾನವ ಜೀವನದ ಮೂಲಾಧಾರವೇ ಕಲಿಕೆ. ಕಲಿಕೆ ಇಲ್ಲದೆ ಮಾನವ ಅಭಿವೃದ್ಧಿಯೂ ಇಲ್ಲ, ಸಮಾಜದ ಪ್ರಗತಿಯೂ ಇಲ್ಲ. ಕಲಿಕೆ ಎನ್ನುವುದು ಅಕ್ಷರಜ್ಞಾನಕ್ಕೆ ಮಾತ್ರ ಸೀಮಿತವಾಗದೆ, ವ್ಯಕ್ತಿಯ ಚಿಂತನೆ, ವರ್ತನೆ, ಮೌಲ್ಯಬೋಧನೆ ಹಾಗೂ ಜೀವನದ ದೃಷ್ಟಿಕೋನವನ್ನು ರೂಪಿಸುವ ನಿರಂತರ ಪ್ರಕ್ರಿಯೆಯಾಗಿದೆ. ಈ ಕಲಿಕೆಯೊಡನೆ ಸಂಸ್ಕೃತಿ ಬೆಸೆಯಲ್ಪಟ್ಟಾಗ ಮಾತ್ರ ವ್ಯಕ್ತಿ ಸಂಪೂರ್ಣನಾಗುತ್ತಾನೆ. ಸಂಸ್ಕೃತಿ ಎನ್ನುವುದು ಒಂದು ಸಮಾಜದ ಆತ್ಮ, ಅದರ ಇತಿಹಾಸ, ಪರಂಪರೆ, ಭಾಷೆ, ಆಚರಣೆ, ಕಲೆ, ಸಾಹಿತ್ಯ, ನೈತಿಕತೆ ಹಾಗೂ ಮಾನವೀಯ ಮೌಲ್ಯಗಳ ಒಗ್ಗೂಡಿಕೆಯಾಗಿದೆ. ಈ ಎರಡರ ಸಮನ್ವಯವೇ ಸುಸಂಸ್ಕೃತ ಸಮಾಜದ ನಿರ್ಮಾಣಕ್ಕೆ ಕಾರಣವಾಗುತ್ತದೆ.

ಇಂತಹ ಮಹತ್ವದ ಕಲಿಕೆ ಮತ್ತು ಸಂಸ್ಕೃತಿಯ ನಡುವೆ ಸೇತುವೆಯಾಗಿ ನಿಂತಿರುವವರು ಶಿಕ್ಷಕರು. ಶಿಕ್ಷಕರು ಸಮಾಜದ ಶಿಲ್ಪಿಗಳು ಎಂಬ ಮಾತು ಅತಿಶಯೋಕ್ತಿಯಲ್ಲ. ಅವರು ಕೇವಲ ಪಾಠಗಳನ್ನು ಬೋಧಿಸುವ ಜ್ಞಾನವಾಹಕರಲ್ಲ; ಬದಲಾಗಿ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವ ಮಾರ್ಗದರ್ಶಕರು, ಮೌಲ್ಯಗಳ ಬಿತ್ತುವ ಕೃಷಿಕರು. ಮಕ್ಕಳ ಮನಸ್ಸು ಹಸಿ ಮಣ್ಣಿನಂತೆ ಇರುವ ಸಂದರ್ಭದಲ್ಲಿ, ಶಿಕ್ಷಕರು ಬಿತ್ತುವ ವಿಚಾರಗಳು, ಮೌಲ್ಯಗಳು ಹಾಗೂ ಸಂಸ್ಕಾರಗಳು ಅವರ ಜೀವನಪೂರ್ತಿ ಬೆಳೆದು ಫಲ ನೀಡುತ್ತವೆ.

ಶಿಕ್ಷಕರ ಪಾತ್ರ ತರಗತಿಯ ಗೋಡೆಯೊಳಗೆ ಮಾತ್ರ ಸೀಮಿತವಾಗುವುದಿಲ್ಲ. ಅವರು ವಿದ್ಯಾರ್ಥಿಗಳಿಗೆ ಶಿಸ್ತು, ಸಮಯಪಾಲನೆ, ಪರಸ್ಪರ ಗೌರವ, ಸಹಿಷ್ಣುತೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಮಾನವೀಯತೆಯ ಪಾಠಗಳನ್ನು ತಮ್ಮ ನಡೆನುಡಿಯ ಮೂಲಕ ಕಲಿಸುತ್ತಾರೆ. ಪಠ್ಯಕ್ರಮದ ಜೊತೆಗೆ ನಮ್ಮ ನಾಡಿನ ಸಂಸ್ಕೃತಿ, ಭಾಷೆ, ಪರಂಪರೆ ಮತ್ತು ರಾಷ್ಟ್ರೀಯ ಚಿಂತನೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವಲ್ಲಿ ಶಿಕ್ಷಕರ ಕೊಡುಗೆ ಅನನ್ಯವಾಗಿದೆ.

ಜ್ಞಾನ ಮತ್ತು ತಂತ್ರಜ್ಞಾನದ ಯುಗದಲ್ಲಿ ಬೆಳೆಯುತ್ತಿರುವ ಇಂದಿನ ಪೀಳಿಗೆಯು ತಮ್ಮ ಮೂಲ ಸಂಸ್ಕೃತಿಯಿಂದ ದೂರವಾಗದಂತೆ ಜಾಗರೂಕರಾಗಿ ಮಾರ್ಗದರ್ಶನ ನೀಡುವುದು ಶಿಕ್ಷಕರ ಪ್ರಮುಖ ಕರ್ತವ್ಯವಾಗಿದೆ. ಅಂತೆಯೇ ಸಮಕಾಲೀನ ಸಮಾಜದಲ್ಲಿ ಕಂಡುಬರುವ ಮೌಲ್ಯ ಕುಸಿತ, ಅಸಹಿಷ್ಣುತೆ ಮತ್ತು ಸ್ವಾರ್ಥದ ಪ್ರವೃತ್ತಿಗಳನ್ನು ಸರಿಪಡಿಸುವ ಶಕ್ತಿ ಶಿಕ್ಷಣದಲ್ಲಿದೆ. ಈ ಶಿಕ್ಷಣಕ್ಕೆ ದಿಕ್ಕು ನೀಡುವವರು ಶಿಕ್ಷಕರು. ಅವರು ಕಲಿಕೆಯನ್ನು ಕೇವಲ ಉದ್ಯೋಗಮುಖಿಯಾಗಿ ಅಲ್ಲದೆ, ಜೀವನಮುಖಿಯಾಗಿ ರೂಪಿಸಿದಾಗ ಮಾತ್ರ ಸಂಸ್ಕೃತಿಯ ರಕ್ಷಣೆಯೂ, ಸಮಾಜದ ಸಮತೋಲನದ ಕಾಪಾಡಿಕೆಯೂ ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ಕಲಿಕೆ ಮತ್ತು ಸಂಸ್ಕೃತಿ: ಶಿಕ್ಷಕರ ಪಾತ್ರ ಎಂಬ ವಿಷಯವು ಅತ್ಯಂತ ಪ್ರಾಸಂಗಿಕವೂ ಮಹತ್ವಪೂರ್ಣವೂ ಆಗಿದೆ. ಭವಿಷ್ಯದ ಸಮಾಜವನ್ನು ಸುಸಂಸ್ಕೃತ, ಮೌಲ್ಯಾಧಾರಿತ ಹಾಗೂ ಮಾನವೀಯತೆಯಿಂದ ತುಂಬಿದ ಸಮಾಜವನ್ನಾಗಿ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅನನ್ಯ, ಅವಿಭಾಜ್ಯ ಮತ್ತು ಶಾಶ್ವತವಾಗಿದೆ.

ಕಲಿಕೆ ಮತ್ತು ಸಂಸ್ಕೃತಿ ಎಂಬುದು ಮಾನವನ ಜೀವನದಲ್ಲಿ ಪ್ರಮುಖವಾದ ಅಂಶಗಳಾಗಿವೆ. ಶಿಕ್ಷಕರು ಕೇವಲ ಬೋಧನೆ ಮಾಡಿ, ಅಂಕಗಳನ್ನು ತೆಗೆದುಕೊಳ್ಳುವಂತೆ ಮಾಡುವುದು ಮಾತ್ರ ತಮ್ಮ ಕರ್ತವ್ಯವೆಂದು ಭಾವಿಸದೇ ನೈತಿಕ ಮೌಲ್ಯ, ಜೀವನ ಕೌಶಲ್ಯ, ಸಮಾಜದಲ್ಲಿ ಬದ್ಧತೆಯಿಂದ ಬದುಕುವುದನ್ನು ಕಲಿಸಬೇಕು.ಈ ದೃಷ್ಟಿಯಿಂದ ಕಲಿಕೆ ಮತ್ತು ಸಂಸ್ಕೃತಿಯ ಸೇತುವೆಯಾಗಿ ಶಿಕ್ಷಕರು ತಮ್ಮ ಕಾರ್ಯವನ್ನು ನಿರ್ವಹಿಸಬೇಕು.ಜೀವನ ಮೌಲ್ಯಗಳೊಂದಿಗೆ ಜ್ಞಾನದ ಕೌಶಲ್ಯಗಳನ್ನು ಬೆಳೆಸುವ ಮೂಲಕ ಕಲಿಕೆಗೆ ಸೂಕ್ತ ವಾತಾವರಣವನ್ನು ನಿರ್ಮಿಸಿಕೊಡುವುದರೊಂದಿಗೆ ನಮ್ಮ ಪರಂಪರೆಯನ್ನು ಉಳಿಸಿ,ಬೆಳೆಸಿಕೊಂಡು ಮುನ್ನಡೆಸುವ ನಿಟ್ಟಿನಲ್ಲಿ ಸಂಸ್ಕೃತಿಯ ರಾಯಭಾರಿಯಂತೆಯೂ ಶಿಕ್ಷಕರು ಕಾರ್ಯನಿರ್ವಹಿಸಬಲ್ಲರು. ಈ ಮುಖೇನ ಸಮಾಜಕ್ಕೆ ಉತ್ತಮ ನಾಗರಿಕರನ್ನು ಒದಗಿಸಿ ಕೊಡುವ ಜವಾಬ್ದಾರಿಯು ಶಿಕ್ಷಕರ ಮೇಲಿರುತ್ತದೆ.

ಹಾಗಾದರೆ ಸಂಸ್ಕೃತಿ ಎಂದರೇನು ಎಂಬ ಪ್ರಶ್ನೆಗೆ ಕನ್ನಡದ ಕವಿಗಳು ತಮ್ಮದೇಯಾದ ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

ಡಿವಿಜಿ ಅವರು ಮಂಕುತಿಮ್ಮನ ಕಗ್ಗದಲ್ಲಿ ಹೇಳಿರುವಂತೆ ಸಂಸ್ಕೃತಿಯು ಹೃದಯದ ವಿಶಾಲತೆ ಮತ್ತು ಪರರ ಬಗ್ಗೆ ಕಾಳಜಿ ವಹಿಸುವುದನ್ನು ಕಲಿಸುತ್ತದೆ. ಸಂಸ್ಕೃತಿಯು ಬಾಹ್ಯ ಆಚಾರಕ್ಕಿಂತ ಅಂತರಂಗದ ಪರಿಶುದ್ಧತೆಗೆ ಹೆಚ್ಚಿನ ಒತ್ತು ನೀಡುತ್ತದೆ ಮಾಸ್ತಿ ಅವರ ಪ್ರಕಾರ ಬದುಕಿಗೂ ಬರವಣಿಗೆಗೂ ಅಂತರವಿಲ್ಲದ ಆದರ್ಶ ಜೀವನ ಶೈಲಿಯೇ ಸಂಸ್ಕೃತಿಯ ಸಂಕೇತ.

ಕುವೆಂಪು ಅವರ ಅಭಿಪ್ರಾಯದಂತೆ ಜಾತಿ,ಅಸ್ಪೃಶ್ಯತೆ ಮತ್ತು ತಾರತಮ್ಯಗಳನ್ನು ತಿರಸ್ಕರಿಸಿ ಎಲ್ಲರನ್ನೂ ಸಮಾನವಾಗಿ ಕಾಣುವ



ಧರ್ಮವೇ ಸಂಸ್ಕೃತಿ. ಬೇಂದ್ರೆ ಅವರ ಪ್ರಕಾರ ಹಳೆಯ ಮೌಲ್ಯಗಳನ್ನು ಗೌರವಿಸುತ್ತಲೇ ಆಧುನಿಕತೆಯ ಸ್ಪರ್ಶವನ್ನು ಪಡೆದುಕೊಳ್ಳುವುದು ನಿಜವಾದ ಸಂಸ್ಕೃತಿಯ ಲಕ್ಷಣ

ಒಟ್ಟಾರೆಯಾಗಿ ಸಂಸ್ಕೃತಿ ಎಂಬುದನ್ನು ಒಂದು ಸಮಾಜದ ಜೀವನ ವಿಧಾನ, ನಂಬಿಕೆಗಳು, ಆಚಾರ–ವಿಚಾರಗಳು, ಕಲೆ, ಭಾಷೆ ಮತ್ತು ಮೌಲ್ಯಗಳ ಒಟ್ಟು ಸಾರ ಎಂದು ಅರ್ಥೈಸಬಹುದು.

ಕಲಿಕೆಯ ಹಂತದಲ್ಲಿ ಶಿಕ್ಷಕರು ಜ್ಞಾನವನ್ನು ನೀಡುವ ಮಾರ್ಗದರ್ಶಕರಾಗಿ ತಮ್ಮ ಕಾರ್ಯನಿರ್ವಹಿಸುವರು. ಕೇವಲ ಪಠ್ಯವಿಷಯಗಳನ್ನು ಬೋಧಿಸುವುದಲ್ಲದೇ ವಿದ್ಯಾರ್ಥಿಗಳಲ್ಲಿ ವೈಚಾರಿಕವಾಗಿ ಆಲೋಚಿಸುವಂತೆ ಮಾಡುವ, ಸಮಸ್ಯೆಗಳಿಗೆ ಸ್ವಯಂ ಪ್ರೇರಿತರಾಗಿ ಪರಿಹಾರ ಒದಗಿಸುವ ಸಾಮರ್ಥ್ಯವನ್ನು ಬೆಳೆಸುವ, ಸೃಜನಾತ್ಮಕವಾಗಿ ಚಿಂತಿಸುವ, ಬದುಕಿನಲ್ಲಿ ಎಂತಹ ಸಮಸ್ಯೆ ಎದುರಾದರೂ ಅದನ್ನು ಅಚಲವಾಗಿ ನಿಂತು ಎದುರಿಸುವಂತಹ ಆತ್ಮವಿಶ್ವಾಸವನ್ನು ತುಂಬಿ ಸರಿಯಾದ ಮಾರ್ಗದಲ್ಲಿ, ಸೂಕ್ತ ರೀತಿಯಲ್ಲಿ ಮಾರ್ಗದರ್ಶನ ನೀಡುವುದು ಶಿಕ್ಷಕರ ವಿಶೇಷತೆಯಾಗಿದೆ.

ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ ಹೊಸ ಮಾದರಿಯ ಬೋಧನಾ ವಿಧಾನಗಳೊಂದಿಗೆ ತಂತ್ರಜ್ಞಾನವನ್ನು ಬೋಧನೆಗೆ ಪೂರಕವಾಗಿ ಬಳಸಿಕೊಂಡು ಕಲಿಕೆಯನ್ನು ಪ್ರೇರಣಾದಾಯಕವಾಗಿ, ಆಸಕ್ತಿದಾಯಕವಾಗಿ ಕಲಿಸಬಲ್ಲರು. ಕಲಿಕೆ ಕೇವಲ ಓದಿನ ಅವಧಿಗೆ ಮಾತ್ರ ಸೀಮಿತವಾಗದೇ ಬದುಕಿನುದ್ದಕ್ಕೂ ಅಗತ್ಯ, ಅನಿವಾರ್ಯವಾದುದೆಂಬ ಮನವರಿಕೆಯನ್ನು ಮಾಡಿಕೊಡಬಲ್ಲ ಶಕ್ತಿ ಶಿಕ್ಷಕರಿಗಿದೆ.

ಸಂಸ್ಕೃತಿಯ ವಿಚಾರದಲ್ಲಿಯೂ ಶಿಕ್ಷಕರು ಮೌಲ್ಯಗಳನ್ನು ಉಳಿಸುವ ರಕ್ಷಕರೆನ್ನಬಹುದು. ಸತ್ಯ, ಶಿಸ್ತು, ಸಹಾನುಭೂತಿ, ಪರಸ್ಪರ ಗೌರವ, ಸಮಾನತೆ ಮುಂತಾದ ಮಾನವೀಯ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬಿತ್ತುವ ಮೂಲಕ ಉತ್ತಮ ನಾಗರಿಕರನ್ನು ರೂಪಿಸುತ್ತಾರೆ. ಭಾಷೆ, ಸಾಹಿತ್ಯ, ಕಲೆ, ಇತಿಹಾಸ ಮತ್ತು ಪರಂಪರೆಗಳ ಅರಿವನ್ನು ನೀಡುವ ಮೂಲಕ ತಮ್ಮ ಸಂಸ್ಕೃತಿಯ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸುತ್ತಾರೆ. ಜೊತೆಗೆ, ವೈವಿಧ್ಯತೆಯೊಳಗೆ ಏಕತೆಯನ್ನು ಕಲಿಸಿ ಸಾಮಾಜಿಕ ಸೌಹಾರ್ದತೆಯನ್ನು ಬೆಳೆಸುತ್ತಾರೆ.

ಶಿಕ್ಷಕರ ಪಾತ್ರ ಕಲಿಕೆ ಮತ್ತು ಸಂಸ್ಕೃತಿ ಬೆಳವಣಿಗೆಯಲ್ಲಿ ಶಿಕ್ಷಕರ ಪಾತ್ರ ಮಹತ್ವಪೂರ್ಣವಾದುದು. ಶಿಕ್ಷಕರು ವಿದ್ಯಾರ್ಥಿಗಳ ಬೌದ್ಧಿಕ, ಭಾವನಾತ್ಮಕ ಮತ್ತು ಸಾಮಾಜಿಕ ಬೆಳವಣಿಗೆಯ ಶಿಲ್ಪಿಗಳಾಗಿದ್ದಾರೆ. ಅವರು ಕೇವಲ ಪಾಠ ಬೋಧಿಸುವ ಬೋಧಕರಷ್ಟೇ ಅಲ್ಲ, ವಿದ್ಯಾರ್ಥಿಗಳ ಜೀವನದ ದಿಕ್ಕನ್ನು ರೂಪಿಸುವ ಮಾರ್ಗದರ್ಶಕರೂ ಹೌದು.

ಶಿಕ್ಷಕರು ತಮ್ಮ ವ್ಯಕ್ತಿತ್ವದ ಮೂಲಕವೇ ಮೌಲ್ಯಗಳನ್ನು ಸಾರುತ್ತಾರೆ. ಅವರ ನಡೆ, ನುಡಿ, ಶಿಸ್ತು ಮತ್ತು ಸಮರ್ಪಣೆ ವಿದ್ಯಾರ್ಥಿಗಳಿಗೆ ಮಾದರಿಯಾಗುತ್ತದೆ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು, ಅವರ ದೌರ್ಬಲ್ಯಗಳನ್ನು ಅರಿತು ಸೂಕ್ತ ಮಾರ್ಗದರ್ಶನ ನೀಡುವುದು ಶಿಕ್ಷಕರ ಮಹತ್ತರ ಕರ್ತವ್ಯವಾಗಿದೆ.

ಇಂದಿನ ಸ್ಪರ್ಧಾತ್ಮಕ ಹಾಗೂ ತಂತ್ರಜ್ಞಾನಯುಕ್ತ ಸಮಾಜದಲ್ಲಿ ಶಿಕ್ಷಕರು ನಿರಂತರವಾಗಿ ಕಲಿಯುವ ಮನೋಭಾವವನ್ನು ಬೆಳೆಸಿಕೊಂಡು, ಹೊಸ ಜ್ಞಾನ ಹಾಗೂ ಕೌಶಲ್ಯಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಬೇಕಾಗಿದೆ. ಕಲಿಕೆಗೆ ಕೊನೆ ಎಂಬುದಿಲ್ಲ. ಕಲಿಕೆಗೆ ಪೂರ್ಣ ವಿರಾಮವನ್ನಿಟ್ಟ ದಿನ ನಮ್ಮತನ ಮರೆಯಾಗುತ್ತದೆ.ಈ ನಿಟ್ಟಿನಲ್ಲಿ ಶಿಕ್ಷಕ ಪ್ರತಿ ದಿನವು ವಿದ್ಯಾರ್ಥಿಯೇ ಆಗಿರಬೇಕು. ಹೇಗೆ ದೀಪ ತಾನು ಬೆಳಗುವುದರೊಂದಿಗೆ ಜಗತ್ತನ್ನು ಬೆಳಗುವ ಕಾರ್ಯವನ್ನು ಮಾಡಬಲ್ಲುದೋ ಹಾಗೆ ಶಿಕ್ಷಕರು ತಾನು ಕಲಿಯುತ್ತಾ ವಿದ್ಯಾರ್ಥಿಗಳಲ್ಲಿಯೂ ಕಲಿಕೆಯ ಅಭಿರುಚಿಯನ್ನು ಬೆಳೆಸಬೇಕು. ಜೊತೆಗೆ ಸಂಸ್ಕೃತಿಯ ಮೂಲ ಮೌಲ್ಯಗಳನ್ನು ಕಾಪಾಡುತ್ತಾ, ಆಧುನಿಕ ಚಿಂತನೆಗೆ ಅವಕಾಶ ಕಲ್ಪಿಸುವ ಸಮತೋಲನದ ಪಾತ್ರವನ್ನು ಅವರು ನಿರ್ವಹಿಸಬೇಕು. ಸಂಸ್ಕೃತಿಯ ಅರಿವನ್ನು ತಿಳಿಸುವ ಕೆಲಸವನ್ನು, ತಮ್ಮ ನಾಡು, ನುಡಿ, ಸಂಪ್ರದಾಯಗಳ ಕುರಿತ ಇತಿಹಾಸದ ಬಗ್ಗೆ ಅರಿವನ್ನು ಮೂಡಿಸಬೇಕು. ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸ

> “ ಶಿಕ್ಷಕರು ಕೇವಲ ಬೋಧನೆ ಮಾಡಿ, ಅಂಕಗಳನ್ನು ತೆಗೆದುಕೊಳ್ಳುವಂತೆ ಮಾಡುವುದು ಮಾತ್ರ ತಮ್ಮ ಕರ್ತವ್ಯವೆಂದು ಭಾವಿಸದೇ ನೈತಿಕ ಮೌಲ್ಯ, ಜೀವನ ಕೌಶಲ್ಯ, ಸಮಾಜದಲ್ಲಿ ಬದ್ಧತೆಯಿಂದ ಬದುಕುವುದನ್ನು ಕಲಿಸಬೇಕು.ಈ ದೃಷ್ಟಿಯಿಂದ ಕಲಿಕೆ ಮತ್ತು ಸಂಸ್ಕೃತಿಯ ಸೇತುವೆಯಾಗಿ ಶಿಕ್ಷಕರು ತಮ್ಮ ಕಾರ್ಯವನ್ನು ನಿರ್ವಹಿಸಬೇಕು. ಜೀವನ ಮೌಲ್ಯಗಳೊಂದಿಗೆ ಜ್ಞಾನದ ಕೌಶಲ್ಯಗಳನ್ನು ಬೆಳೆಸುವ ಮೂಲಕ ಕಲಿಕೆಗೆ ಸೂಕ್ತ ವಾತಾವರಣ ನಿರ್ಮಿಸಿಕೊಡುವುದರೊಂದಿಗೆ ನಮ್ಮ ಪರಂಪರೆ ಉಳಿಸಿ, ಬೆಳೆಸಿಕೊಂಡು ಮುನ್ನಡೆಸುವ ನಿಟ್ಟಿನಲ್ಲಿ ಸಂಸ್ಕೃತಿಯ ರಾಯಭಾರಿಯಂತೆಯೂ ಶಿಕ್ಷಕರು ಕಾರ್ಯನಿರ್ವಹಿಸಬಲ್ಲರು. ಈ ಮುಖೇನ ಸಮಾಜಕ್ಕೆ ಉತ್ತಮ ನಾಗರಿಕರನ್ನು ಒದಗಿಸಿ ಕೊಡುವ ಜವಾಬ್ದಾರಿಯು ಶಿಕ್ಷಕರ ಮೇಲಿರುತ್ತದೆ.

ಲಾರರು ಎಂಬ ಮಾತಿನಂತೆ ನಮ್ಮ ಸಂಸ್ಕೃತಿಯ ಮೌಲ್ಯಗಳನ್ನು ಮುಂದಿನ ತಲೆಮಾರಿಗೆ ತಿಳಿಸುವ ಅವಶ್ಯಕತೆಯನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಡುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದುದು.

ಶಿಕ್ಷಕರು ಕಲಿಕೆಯ ದೀಪಗಳಾಗಿ, ಸಂಸ್ಕೃತಿಯ ಸಂರಕ್ಷಕರಾಗಿ ಮತ್ತು ಸಮಾಜದ ಶಿಲ್ಪಿಗಳಾಗಿ ಕಾರ್ಯನಿರ್ವಹಿಸುತ್ತಾರೆ. ಅವರ ಸಮರ್ಪಿತ ಸೇವೆಯಿಂದಲೇ ಸಜ್ಜನ, ಸಂಸ್ಕಾರಯುತ, ಸಂಸ್ಕೃತಿವಂತ ಮತ್ತು ಜವಾಬ್ದಾರಿಯುತ ನಾಗರಿಕರನ್ನು ಸಮಾಜಕ್ಕೆ ನೀಡಲು ಸಾಧ್ಯವಾಗುತ್ತದೆ. ಆದ್ದರಿಂದ ಕಲಿಕೆ ಮತ್ತು ಸಂಸ್ಕೃತಿಯ ಯಶಸ್ವಿ ಸಂಯೋಜನೆ ಶಿಕ್ಷಕರ ಕೈಯಲ್ಲಿದೆ ಎಂದು ಹೇಳುವುದರಲ್ಲಿ ಯಾವುದೇ ಸಂಶಯವಿಲ್ಲ. ಜ್ಞಾನ ವಿತರಣೆಯ ಮೂಲಕ ಮೌಲ್ಯ ಶಿಕ್ಷಣವನ್ನು ತಿಳಿಸುವ ಸಂಸ್ಕೃತಿಯನ್ನು ಪರಿಚಯಿಸುವ ಚಿಂತನಾ ಶಕ್ತಿಯ ವಿಕಾಸವನ್ನು ಒರೆಗೆ ಹಚ್ಚುವ ತನ್ನ ನಡೆನುಡಿಯ ನಡವಳಿಕೆಯ ಮಾದರಿಯೊಂದಿಗೆ ಕಲಿಕೆಗೆ ಸೂಕ್ತ ಪರಿಸರವನ್ನು ನಿರ್ಮಾಣ ಮಾಡಿಕೊಡುವುದರೊಂದಿಗೆ ಸಂಸ್ಕೃತಿಯ ಸಂರಕ್ಷಣೆಯನ್ನು ಮಾಡಿ ಸಮಾಜಕ್ಕೆ ಉತ್ತಮ ಸತ್ ಪ್ರಜೆಗಳನ್ನು ನಿರ್ಮಿಸಿ ಭವಿಷ್ಯ ನಿರ್ಮಾಣ ಮಾಡಿಕೊಡುವಲ್ಲಿ ಶಿಕ್ಷಕರ ಪಾತ್ರ ಅನನ್ಯವಾದುದು, ಅನುಪಮವಾದುದು.

ಒಟ್ಟಾರೆಯಾಗಿ ಹೇಳುವುದಾದರೆ ಶಿಕ್ಷಕರು ಜ್ಞಾನವನ್ನು ಮಾತ್ರವಲ್ಲ ಮೌಲ್ಯಗಳು ಮತ್ತು ಸಂಸ್ಕೃತಿಯನ್ನು ಸಹ ಪೋಷಿಸಿದಾಗ ಜವಾಬ್ದಾರಿಯುತ, ಸಂವೇದನಾಶೀಲ ಮತ್ತು ಸಂಸ್ಕೃತಿ ಪರ ನಾಗರೀಕರನ್ನು ನೀಡಲು ಸಾಧ್ಯವಾಗುತ್ತದೆ. ಅಲ್ಲದೆ ಕಲಿಕೆ ಮತ್ತು ಸಂಸ್ಕೃತಿ ಮಾನವ ಜೀವನದ ಎರಡು ಅವಿಭಾಜ್ಯ ಅಂಗಗಳಾಗಿವೆ. ಕಲಿಕೆ ವ್ಯಕ್ತಿಗೆ ಜ್ಞಾನ ಮತ್ತು ಬೌದ್ಧಿಕ ಬೆಳವಣಿಗೆಯನ್ನು ನೀಡಿದರೆ, ಸಂಸ್ಕೃತಿ ಅವನಿಗೆ ಮಾನವೀಯತೆ, ಮೌಲ್ಯಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯ ಅರಿವನ್ನು ನೀಡುತ್ತದೆ. ಈ ಎರಡರ ಸಮತೋಲನವೇ ವ್ಯಕ್ತಿಯನ್ನು ಸಂಪೂರ್ಣನಾಗಿಸಿ, ಸಮಾಜವನ್ನು ಸುಸ್ಥಿರ ಮತ್ತು ಸುಸಂಸ್ಕೃತ ದಾರಿಯಲ್ಲಿ ಮುನ್ನಡೆಸುತ್ತದೆ.

ಈ ಮಹತ್ವದ ಸಮನ್ವಯವನ್ನು ಸಾಧಿಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ನಿರ್ಣಾಯಕವಾಗಿದೆ. ಶಿಕ್ಷಕರು ಪಠ್ಯಜ್ಞಾನವನ್ನು ನೀಡುವವರಷ್ಟೇ ಅಲ್ಲದೆ, ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸಂಸ್ಕಾರದ ಬೀಜ ಬಿತ್ತುವ ಶಿಲ್ಪಿಗಳಾಗಿದ್ದಾರೆ. ತಮ್ಮ ನಡೆ, ನುಡಿ ಮತ್ತು ಚಿಂತನೆಯ ಮೂಲಕ ಅವರು ಸತ್ಯ, ಶಿಸ್ತು, ಸಹಿಷ್ಣುತೆ, ಪರಸ್ಪರ ಗೌರವ ಮತ್ತು ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಮಕ್ಕಳಲ್ಲಿ ಬೆಳೆಸುತ್ತಾರೆ. ಈ ಮೂಲಕ ಅವರು ಭವಿಷ್ಯದ ನಾಗರಿಕರನ್ನು ರೂಪಿಸುವ ಮಹತ್ತರ ಕಾರ್ಯವನ್ನು ನಿರಂತರವಾಗಿ ನಿರ್ವಹಿಸುತ್ತಾರೆ.

ಇಂದಿನ ತಂತ್ರಜ್ಞಾನಯುಗದಲ್ಲಿ ಕಲಿಕೆ ವೇಗವಾಗಿ ವಿಸ್ತರಿಸುತ್ತಿದ್ದರೂ, ಸಂಸ್ಕೃತಿಯ ಬೇರುಗಳು ದುರ್ಬಲವಾಗುವ ಅಪಾಯವೂ ಇದೆ. ಇಂತಹ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿಗಳನ್ನು ಆಧುನಿಕತೆಯ ಜೊತೆಗೆ ಪರಂಪರೆಯ ಮೌಲ್ಯಗಳಿಗೆ ಕೊಂಡೊಯ್ಯುವ ದಾರಿದೀಪವಾಗಬೇಕು. ಕಲಿಕೆಯನ್ನು ಜೀವನಮುಖಿಯಾಗಿ ರೂಪಿಸಿ, ಸಂಸ್ಕೃತಿಯನ್ನು ಜೀವಂತವಾಗಿಡುವ ಜವಾಬ್ದಾರಿ ಶಿಕ್ಷಕರ ಕೈಯಲ್ಲಿದೆ.

ಅಂತಿಮವಾಗಿ ಹೇಳುವುದಾದರೆ, ಸುಸಂಸ್ಕೃತ ಸಮಾಜದ ನಿರ್ಮಾಣ ಶಿಕ್ಷಕರಿಂದಲೇ ಆರಂಭವಾಗುತ್ತದೆ. ಕಲಿಕೆ ಮತ್ತು ಸಂಸ್ಕೃತಿಯನ್ನು ಸಮನ್ವಯಗೊಳಿಸಿ, ಮೌಲ್ಯಾಧಾರಿತ, ಮಾನವೀಯ ಹಾಗೂ ಜವಾಬ್ದಾರಿಯುತ ಸಮಾಜವನ್ನು ರೂಪಿಸುವಲ್ಲಿ ಶಿಕ್ಷಕರ ಪಾತ್ರ ಶಾಶ್ವತವೂ ಅವಿಸ್ಮರಣೀಯವೂ ಆಗಿದೆ.

ಕೆ.ಆರ್.ಕ್ಷೇತ್ರದಲ್ಲಿ ಶಾಸಕ ಶ್ರೀವತ್ಸ ಪಾದಯಾತ್ರೆ



ಶಾಸಕ ಶ್ರೀವತ್ಸ ಪಾದಯಾತ್ರೆ ನಡೆಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ಮೈಸೂರು,ಮಾ.4–ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ನಡೆಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ಕ್ಷೇತ್ರದ ವಲಯ ಕಚೇರಿ–2ರ ವ್ಯಾಪ್ತಿಯ 56 ವಾರ್ಡ್‌ನಲ್ಲಿ ಪಾದಯಾತ್ರೆ ನಡೆಸಿದ ಶಾಸಕರು ಮನೆ–ಮನೆಗೆ ಭೇಟಿ ನೀಡಿ, ಅಲ್ಲಿನ ನಿವಾಸಿಗಳ ಸಮಸ್ಯೆಗಳನ್ನು ಕೇಳಿ ನಂತರ ಸ್ಥಳದಲ್ಲಿ ಅಧಿಕಾರಿಗಳಿ ಸೂಚನೆ ನೀಡಿದರು.

ಪ್ರಮುಖವಾಗಿ ಯುಜಿಡಿ ನೀರು ಮಳೆ ನೀರಿನ ಚರಂಡಿಯಲ್ಲಿ ಹರಿಯುತ್ತಿರುವುದರ ಬಗ್ಗೆ ಜನರು ದೂರು ಹೇಳಿದಂತೆ ಸಂಬಂಧಪಟ್ಟ ಅಧಿಕಾರಿಗೆ ಮುಂದಿನ ವಾರದಿಂದ ಕಾಮಗಾರಿ ಆರಂಭಿಸಿ, ಸಮಸ್ಯೆ ಬಗೆಹರಿಸುವಂತೆ ತಿಳಿಸಿ, ಅಲ್ಲಿನ

ಅಹವಾಲು ಆಲಿಸಿ, ಸ್ಥಳದಲ್ಲೇ ಪರಿಹಾರಕ್ಕೆ ಅಧಿಕಾರಿಗಳಿಗೆ ಸೂಚನೆ

ಗಲ್ಲಿಗಳಲ್ಲಿ ಬೆಳೆದಿರುವ ಗಿಡಗಳನ್ನು ಕ್ಲೀನ್ ಮಾಡಬೇಕು ಹಾಗೂ ಕೆಲವೆಡೆ ಬೀದಿ ದೀಪಗಳ ಸಮಸ್ಯೆಯನ್ನು ಮುಂದಿನ 15 ದಿನದೊಳಗೆ ಸರಿ ಪಡಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಶಾಸಕರು ಪ್ರತಿ ಮನೆಗೆ ಭೇಟಿ ನೀಡುತ್ತಿದ್ದಂತೆ ಅವರಿಗೆ ಜನರು ನೋಟ್ ಬುಕ್ ನೀಡುವ ಮೂಲಕ ಸ್ವಾಗತಿಸಿತ್ತಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ದೀಪಕ್, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ಜಯರಾಮ್, ನಾಗರಾಜ್, ಬಿಲ್ಲಯ್ಯ, ಪಿ.ಟಿ.ಕೃಷ್ಣ, ಮಧುಸೂದನ್, ಜಿತೇಂದ್ರ, ರಾಮು, ಅಮಿತ್, ಸ್ಥಳೀಯರಾದ ಸತೀಶ್, ದಿನೇಶ್, ಅಡಿಗ ಅನಂತ ರಾಮು, ಯೋಗರಾಜು, ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಿಗೆ 'ಚಿನ್ಮಯ ಅಮೃತ ವಾಹಿನಿ' ವಾಹನ



ಮೈಸೂರು,ಮಾ.4– ಸ್ವಾಮಿ ಚಿನ್ಮಯಾನಂದರಿಂದ ಸ್ಥಾಪಿಸಲ್ಪಟ್ಟ ಅಂತರ ರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಚಿನ್ಮಯ ಮಿಷನ್ ಸಂಸ್ಥೆಗೆ 75 ವರ್ಷ ತುಂಬಿದ ಹಿನ್ನೆಲೆ, ಇಂದಿನ ಪೀಳಿಗೆಗೆ ಪೂಜ್ಯ ಗುರುದೇವರ ಸಂದೇಶವನ್ನು ತಲುಪಿಸಲು ಉದ್ದೇಶದಿಂದ ಭಾರತಾದ್ಯಂತ 'ಚಿನ್ಮಯ ಅಮೃತ ವಾಹಿನಿ' ಪ್ರಚಾರ ರಥ ಸಂಚರಿಸುತ್ತಿದ್ದು, ಮಾ.6, 7ರಂದು ಈ ಪ್ರಚಾರ ವಾಹನವು ಮೈಸೂರಿಗೆ ಆಗಮಿಸಲಿದೆ.

ಈ ಹಿನ್ನೆಲೆಯಲ್ಲಿ ಮೈಸೂರು ಚಿನ್ಮಯ ಮಿಷನ್ ವತಿಯಿಂದ ನಗರದ ಹಲವು ಸ್ಥಳಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಮಾ.6ರಂದು ಮೈಸೂರಿನ ಗೋಕುಲಂ 3ನೇ ಹಂತದ 6ನೇ ಮುಖ್ಯ ರಸ್ತೆಯಲ್ಲಿರುವ ಶ್ರೀ ಗುರುದೇವ ದತ್ತ ಸನ್ನಿಧಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮಕ್ಕೆ ರಾಮಕೃಷ್ಣ ಮಿಷನ್‌ನ ಸ್ವಾಮಿ ಮಹಾಮೇಧಾನಂದಜಿ ಮಹಾರಾಜ್ ಅವರು ಆಗಮಿಸಿ ಆಶೀರ್ವಚನ ನೀಡಲಿದ್ದಾರೆ.

ಮಾ.7ರಂದು ವಿದ್ಯಾರಣ್ಯಪುರಂನ ಸಾರ್ವಜನಿಕ ಹಾಸ್ಟೆಲ್ ರಸ್ತೆಯಲ್ಲಿರುವ ಶ್ರೀ ರಾಮ ಕ್ಷೇತ್ರದಲ್ಲಿ ಬೆಳಗ್ಗೆ 9.30ರಿಂದ 10.30 ರವರೆಗೆ ಹನುಮಾನ್ ಚಾಲೀಸಾ ಸಾಮೂಹಿಕ ಪಾರಾಯಣ ನಡೆಯಲಿದೆ. ನಂತರ ಲಕ್ಷ್ಮೀಪುರಂನ ಜೆಎಲ್‌ಬಿ ರಸ್ತೆಯಲ್ಲಿರುವ ಶ್ರೀ ಶಿವಾನಂದ ಜ್ಞಾನಾಲಯದಲ್ಲಿ, ಡಾ॥ ಕೆ.ಎಲ್. ಪ್ರಸನ್ನಾಕ್ಷಿ ಅವರು ಗುರುದೇವರ ಕುರಿತು ಮಾತನಾಡಲಿದ್ದಾರೆ.

ಸಂಜೆ 5.30ರಿಂದ 7.30 ರವರೆಗೆ ಮೈಸೂರಿನ ಫೋರ್ಟ್ ಮೊಹಲ್ಲಾದಲ್ಲಿರುವ ಶ್ರೀ ಸಚ್ಚಿದಾನಂದ ವಿಲಾಸ, ಅಭಿನವ ಶಂಕರಾಲಯದಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸುತ್ತೂರು ಶ್ರೀಗಳು ವಹಿಸಲಿದ್ದು, ಭಗವದ್ಗೀತೆಯ 15ನೇ ಅಧ್ಯಾಯ ಮತ್ತು ಭಗವದ್ಗೀತೆಯ ಐದು ಅಮೂಲ್ಯ ರತ್ನಗಳಂತೆ ಕಂಗೊಳಿಸುತ್ತಿರುವ ಪ್ರಮುಖ ಐದು ಶ್ಲೋಕಗಳಾದ ಗೀತ ಪಂಚಾಮೃತದ ಸಾಮೂಹಿಕ ಪಾರಾಯಣ ನಡೆಯಲಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆನ್‌ಲೈನ್ ಹೂಡಿಕೆ ಮೋಡಿಗೆ ಬಲಿಯಾಗಿ 22 ಲಕ್ಷ ರೂ. ಕಳೆದುಕೊಂಡ ವೈದ್ಯ!

ಕ್ರೈಂ ಬಾಕ್ಸ್

ಮೈಸೂರು, ಮಾ.4(ಎಂಕೆ)– ಆನ್‌ಲೈನ್ ಹೂಡಿಕೆ ಹೆಸರಿನಲ್ಲಿ ವೈದ್ಯರೊಬ್ಬರಿಗೆ ಬರೋಬ್ಬರಿ 22 ಲಕ್ಷ ರೂ. ವಂಚಿಸಿರುವ ಕುರಿತು ಮೈಸೂರು ನಗರ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ವಿಜಯನಗರ ನಿವಾಸಿಯೂ ಆದ 29 ವರ್ಷದ ವೈದ್ಯರ ವಾಟ್ಸ್‌ಅಪ್ ನಂಬರ್ ಅನ್ನು ಜ.12ರಂದು '19 Stock Market Stable Profit Group' ಎಂಬ ವಾಟ್ಸ್‌ಅಪ್ ಗ್ರೂಪ್‌ಗೆ ವಿಜಯ್ ಲೋದಾ ಎಂಬ ಹೆಸರಿನ ಅಪರಿಚಿತ ವ್ಯಕ್ತಿ ಸೇರಿಸಿದ್ದು, ಒಂದು ವಾರ ಟ್ರೇಡಿಂಗ್ (ವಹಿವಾಟು) ನಡೆಸುವ ಕುರಿತು ವಾಟ್ಸ್‌ಅಪ್‌ನಲ್ಲೇ ತರಬೇತಿ ನೀಡಿದ್ದಾನೆ.

ಹಾಗೆಯೇ ಅದೇ ವಾಟ್ಸ್‌ಅಪ್ ಗ್ರೂಪ್‌ನಲ್ಲಿ ಕಳುಹಿಸಿದ್ದ ಆನ್‌ಲೈನ್ ಲಿಂಕ್ ಮೂಲಕ ಲಾಗಿನ್ ಆದ ವೈದ್ಯರು, ಪಾಸ್‌ವರ್ಡ್ ನೀಡಿ ತಮ್ಮ ಹೆಸರು ನೋಂದಾಯಿಸಿಕೊಂಡು ಟ್ರೇಡಿಂಗ್ ಕೂಡ ನಡೆಸಿದ್ದಾರೆ. ಬಳಿಕ 'ELEVATION CAPITAL SERIES 1,L.P' ಸ್ಟಾಕ್ ಬ್ರೋಕರ್ ಕಂಪನಿ ಹೆಸರಿನಲ್ಲಿ ಟ್ರೇಡಿಂಗ್ ಮಾಡಿಸುವುದಾಗಿ ಹೇಳಿದ್ದನ್ನು ನಂಬಿದ ವೈದ್ಯರು, ತಮ್ಮ ಎಸ್‌ಬಿಐ ಖಾತೆಯಿಂದ ಐಎಂಪಿಎಸ್ ಮತ್ತು ಆರ್‌ಟಿಜಿಎಸ್ ಮೂಲಕ ವಿವಿಧ ಬ್ಯಾಂಕ್ ಖಾತೆಗಳಿಗೆ 22 ಲಕ್ಷ ರೂ.ಗಳನ್ನು ವರ್ಗಾಯಿಸಿದ್ದಾರೆ.

ನಂತರ ಹಣ ವರ್ಗಾವಣೆ ಹಿನ್ನಲೆ ವೈದ್ಯರ ಖಾತೆಯು ಸೆಬಿ (ಭಾರತೀಯ ಭದ್ರತಾ ವಿನಿಮಯ) ಯಿಂದ ಫ್ರೀಜ್(ಸ್ಥಗಿತ) ಆಗಿದ್ದು, ಡೆಪಾಸಿಟ್ ಮಾಡಿದ ಮೊತ್ತದ ಶೇ.40ರಷ್ಟು ಹಣವನ್ನು ಕಳುಹಿಸಿದರೆ, ಹೂಡಿಕೆ ಹಣವನ್ನು ವಾಪಸ್ ನೀಡುವುದಾಗಿ ವಾಟ್ಸ್‌ಅಪ್ ಮೂಲಕ ತಿಳಿಸಿದ ಕೂಡಲೇ ಅನುಮಾನಗೊಂಡ ವೈದ್ಯರು, ತಾನು ಮೋಸ ಹೋಗಿರುವುದನ್ನು ಅರಿತು ಸೈಬರ್ ಕ್ರೈಂ ಸಹಾಯವಾಣಿ 1930ಗೆ ಕರೆ ಮಾಡಿ ದೂರು ದಾಖಲಿಸಿದ್ದಾರೆ.

ಈ ಸಂಬಂಧ ಮಾಹಿತಿ ತಂತ್ರಜ್ಞಾನ ಕಾಯ್ದೆ 2000ರ ಸೆಕ್ಷನ್ 66(ಡಿ) ಮತ್ತು ಬಿಎನ್‌ಎಸ್ 2023ರ ಸೆಕ್ಷನ್ 318(4) ಮತ್ತು 319(2)ರ ಅಡಿ ಪ್ರಕರಣ ದಾಖಲಿಸಿಕೊಂಡಿರುವ ಮೈಸೂರು ನಗರ ಸೆನ್ ಠಾಣೆ ಪೊಲೀಸರು, ತನಿಖೆ ಕೈಗೊಂಡಿದ್ದಾರೆ.

ಕಾರು ಅಪಘಾತದಲ್ಲಿ ಗಾಯಗೊಂಡ ವಿದ್ಯಾರ್ಥಿ ಸಾವು; ಮತ್ತೋರ್ವ ಗಂಭೀರ

ಮೈಸೂರು, ಮಾ.4(ಎಂಕೆ)– ಮೈಸೂರಿನ ರಿಂಗ್ ರಸ್ತೆ ಸಮೀಪದಲ್ಲಿರುವ ಮಾನಸಿನಗರದ ಬಳಿ ಮಂಗಳವಾರ ರಾತ್ರಿ ಕಾರು ನಿಯಂತ್ರಣ ತಪ್ಪಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದ ಐವರು ವಿದ್ಯಾರ್ಥಿಗಳಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಓರ್ವ ವಿದ್ಯಾರ್ಥಿ ಮೃತಪಟ್ಟಿದ್ದಾನೆ.

ರಾಯಚೂರು ಮೂಲದ ಸುಮೀತ್ (23) ಮೃತ ವಿದ್ಯಾರ್ಥಿಯಾಗಿದ್ದು, ಆತನ ಸ್ನೇಹಿತರಾದ ಧನಂಜಯ, ರೇವಂತ್, ಪವನ್‌ಕುಮಾರ್ ಮತ್ತು ಪ್ರಜ್ವಲ್ ವಿವಿಧ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿಟಿಯು ಕಾಲೇಜಿನಲ್ಲಿ ಪ್ರಥಮ ವರ್ಷದ ಎಂಟೆಕ್ ವಿದ್ಯಾಭ್ಯಾಸ ಮಾಡುತ್ತಿದ್ದ ಐವರು ವಿದ್ಯಾರ್ಥಿಗಳು, ಮಂಗಳವಾರ ರಾತ್ರಿ 8.45ರ ಸುಮಾರಿಗೆ ಸುಜುಕಿ ಬಲೆನೊ ಕಾರಿನಲ್ಲಿ (ಕೆ.ಎ–09–ಎಂಸಿ–7926) ರಿಂಗ್ ರಸ್ತೆಯಲ್ಲಿ ಹೋಗುತ್ತಿದ್ದಾಗ, ನಿಯಂತ್ರಣ ತಪ್ಪಿದ ಕಾರು ಮೊದಲು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ನಂತರ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದಿದೆ.

ತಕ್ಷಣವೇ ಗಂಭೀರವಾಗಿ ಗಾಯಗೊಂಡಿದ್ದ ಐವರು ವಿದ್ಯಾರ್ಥಿಗಳನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸುಮಿತ್ ಮೃತಪಟ್ಟಿದ್ದು, ಮತ್ತೋರ್ವ ವಿದ್ಯಾರ್ಥಿ ಧನಂಜಯ ಸ್ಥಿತಿ ಗಂಭೀರವಾಗಿದೆ ಎಂದು ಸಿದ್ಧಾರ್ಥನಗರ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಹೃದ್ರೋಗಿಗಳಿಗೆ ಚೆಕ್ ವಿತರಣೆ



ಮೈಸೂರು ಮಹಾನಗರಪಾಲಿಕೆ ವತಿಯಿಂದ 25ನೇ ವಾರ್ಡಿನ ತಿಲಕ್‌ನಗರ ವ್ಯಾಪ್ತಿಯಲ್ಲಿ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುವ, ಆರ್ಥಿಕವಾಗಿ ಹಿಂದುಳಿದ 6 ಜನ ಫಲಾನುಭವಿಗಳಿಗೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರು ಚೆಕ್ ವಿತರಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ನಂದಕುಮಾರ್, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್, ಪ್ರಕಾಶ್, ರಿಚರ್ಡ್, ಗಣೇಶ್ ಉಪಸ್ಥಿತರಿದ್ದರು.

ಸ್ಥೂಲಕಾಯದ ಬಗ್ಗೆ ವೈದ್ಯಕೀಯ ತಪಾಸಣಾ ಕಾರ್ಯಕ್ರಮ

ಮೈಸೂರು,ಮಾ.4(ಜಿಎ)–ಸ್ಥೂಲ ಕಾಯದಿಂದ ಅನೇಕ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ತಮ್ಮ ಭಾನವಿ ಆಸ್ಪತ್ರೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಜೊತೆಗೆ ರಿಯಾಯಿತಿ ದರದಲ್ಲಿ ವೈದ್ಯಕೀಯ ತಪಾಸಣಾ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ವೈದ್ಯಕೀಯ ಅಧೀಕ್ಷಕ ಡಾ.ಹೆಚ್.ಎನ್.ಚಂದನ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಥೂಲ ಕಾಯವೂ ಮಧುಮೇಹ, ಹೃದಯ ರೋಗ, ಅಸಮರ್ಪಕ ಆಹಾರ ಪದ್ಧತಿ, ಹೆಚ್ಚು ಸಮಯ ಕುಳಿತೇ ಕೆಲಸ ಮಾಡುವುದು, ರಕ್ತದೊತ್ತಡ, ಕೊಬ್ಬಿನ ಯಕೃತ್, ವ್ಯಾಯಾಮದ ಕೊರತೆ, ಸಂಧಿವಾತ, ಸಂಧಿನೋವು, ಉಸಿರಾಟದ ತೊಂದರೆ, ಒತ್ತಡದ ಜೀವನ ಶೈಲಿಗಳಿಂದಾಗಿ ಇದು ಕಾಣಿಸಿಕೊಳ್ಳಬಹುದಾಗಿದೆ. ಹೀಗಾಗಿ ಸೂಕ್ತ ಸಮಯದಲ್ಲಿ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆಯುವುದು ಅಗತ್ಯ ಎಂದು ಸಲಹೆ ನೀಡಿದರು.

ಇದಕ್ಕಾಗಿ ಭಾನವಿ ಆಸ್ಪತ್ರೆಯಲ್ಲಿ ಮಾ.4ರಿಂದ 31ರವರೆಗೂ ರಿಯಾಯಿತಿ ದರದಲ್ಲಿ ತಪಾಸಣೆ ನಡೆಸಲಾಗುತ್ತಿದ್ದು, ಉಚಿತವಾಗಿ ವೈದ್ಯರೊಂದಿಗೆ ಸಮಾಲೋಚನೆ ನಡೆಸಬಹುದು. ಎಲ್ಲರೂ ಇದರ ಉಪಯೋಗ ಪಡೆದುಕೊಳ್ಳಿ ಎಂದರು. ಸುದ್ದಿ ಗೋಷ್ಠಿಯಲ್ಲಿ ನರ್ಸಿಂಗ್ ಅಧೀಕ್ಷಕ ಕೆ.ಎಸ್. ನಿರಂಜನ್‌ಸ್ವಾಮಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯರಿಗೆ ಸವಾಲಾಗಿರುವ ದಾಖಲೆ 17ನೇ ಬಜೆಟ್!

● ಕೇಂದ್ರದ ಜನಸಂಖ್ಯೆ ಆಧಾರದಲ್ಲಿ ಅನುದಾನ ಮಾನದಂಡದಿಂದ ರಾಜ್ಯಕ್ಕೆ ಭಾರೀ ಹೊಡೆತ ● ಜಿಎಸ್‌ಟಿಯಲ್ಲೂ 12 ಸಾವಿರ ಕೋಟಿ ಖೋತಾ

ಬೆಂಗಳೂರು,ಮಾ.4(ಕೆಎಂಶಿ)– ಸುದೀರ್ಘ ಅವಧಿಗೆ ರಾಜ್ಯದ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಯೊಂದಿಗೆ ರಾಜ್ಯ ವಿಧಾನ ಮಂಡಲದ ಇತಿಹಾಸದಲ್ಲಿ ಅತೀ ಹೆಚ್ಚಿನ ಬಜೆಟ್ ಮಂಡಿಸಿರುವ ದಾಖಲೆ ನಿರ್ಮಿಸಲು ಸಜ್ಜಾದ ಹಣಕಾಸು ಮಂತ್ರಿ ಸಿದ್ದರಾಮಯ್ಯ ಇದೀಗ ಕಳೆದ ಬಜೆಟ್ ಗಾತ್ರವನ್ನು ಮರು ನಿಗದಿ ಮಾಡುವ ಅನಿವಾರ್ಯತೆಗೆ ಸಿಲುಕಿದ್ದಾರೆ.

ಕಲ್ಯಾಣ ರಾಜ್ಯ ಪರಿಕಲ್ಪನೆಯೊಂದಿಗೆ 16 ಬಜೆಟ್‌ಗಳನ್ನು ಮಂಡಿಸಿರುವ ಸಿದ್ದರಾಮಯ್ಯ ಇದೀಗ 17ನೇ ಬಜೆಟ್ ಮಂಡಿಸಲು ಸಜ್ಜಾಗುತ್ತಿದ್ದಾರೆ ಆದರೆ ಈ 17ನೇ ಬಜೆಟ್ ಅವರಿಗೆ ದೊಡ್ಡ ಸವಾಲಾಗಿದೆ.

ಹದಿನಾರನೇ ಹಣಕಾಸು ಆಯೋಗ ಜನಸಂಖ್ಯೆ ಆಧಾರದಲ್ಲಿ ಸಂಪನ್ಮೂಲ ಹಂಚುವ ತೀರ್ಮಾನ ತೆಗೆದುಕೊಂಡಿದೆ ಇದನ್ನು ಆಧರಿಸಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ಸಂಪನ್ಮೂಲ ಹಂಚಿಕೆ ಮಾಡುತ್ತಿದೆ.

ಇದರಿಂದಾಗಿ ಜನಸಂಖ್ಯೆ ನಿಯಂತ್ರಣ ಗುರಿ ಸಾಧಿಸಿರುವ ಕರ್ನಾಟಕಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಅದೇ ರೀತಿ ತೆರಿಗೆ ಪಾಲು ನೀಡುವಲ್ಲೂ ಕೂಡ ಜನಸಂಖ್ಯೆಯೇ ಮಾನದಂಡವಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ದೊಡ್ಡ ನಷ್ಟ ಉಂಟಾಗಿದೆ.

ಇದಲ್ಲದೆ ಕೇಂದ್ರ ಸರ್ಕಾರ ಜಿಎಸ್‌ಟಿ ಪದ್ಧತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಮಾರ್ಪಾಟು ಮಾಡಿದೆ. ಇದರಿಂದ ರಾಜ್ಯಕ್ಕೆ ಬರಬೇಕಾಗಿದ್ದ ತೆರಿಗೆಯಲ್ಲಿ ಸುಮಾರು 12 ಸಾವಿರ ಕೋಟಿ ರೂ. ಖೋತಾ ಆಗಿದೆ. ಸಿದ್ದರಾಮಯ್ಯ 2025–26ನೇ ಸಾಲಿನಲ್ಲಿ ಒಟ್ಟು 4,09,549 ಕೋಟಿ ರೂಪಾಯಿ ಬಜೆಟ್ ಗಾತ್ರ ನಿಗದಿ ಮಾಡಲಾಗಿದೆ ಇದರಲ್ಲಿ ಒಟ್ಟು ಆದಾಯ 4,08,647 ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ.

ವಿತ್ತೀಯ ಕೊರತೆ 90,428 ಕೋಟಿ, ರಾಜಸ್ವ ಕೊರತೆ 19,262 ಕೋಟಿಯಾಗಿದೆ ಇದರಿಂದಾಗಿ 2025–26 ಆರ್ಥಿಕ ವರ್ಷದ ಅಂತ್ಯಕ್ಕೆ ರಾಜ್ಯದ ಒಟ್ಟು ಸಾಲ 7.6 ಲಕ್ಷ ಕೋಟಿ ರೂಪಾಯಿ ತಲುಪುವ ಅಂದಾಜಿದೆ. ಪ್ರಸಕ್ತ 2025–26ನೇ ಆರ್ಥಿಕ ವರ್ಷಕ್ಕೆ ದಾಖಲೆಯ 4.09 ಲಕ್ಷ ಕೋಟಿ ರೂ. ಮೊತ್ತದ ಬಜೆಟ್ ಮಂಡನೆಯಾಗಿದ್ದರೂ ಸರಕಾರದ ಸ್ವಂತ ತೆರಿಗೆ ಮೂಲಗಳಿಂದ ವಾರ್ಷಿಕ ಗುರಿಯಷ್ಟು ಆದಾಯ ಸಂಗ್ರಹವಾಗುವುದು ಕಷ್ಟಸಾಧ್ಯವೆನಿಸಿದೆ. ಗುರಿ ತಲುಪಲು ಮಾರ್ಚ್ ಅಂತ್ಯದೊಳಗೆ 48,306 ಕೋಟಿ ರೂಪಾಯಿ ಸಂಗ್ರಹವಾಗಬೇಕಿದ್ದು, ಅಬಕಾರಿ ಇಲಾಖೆ ಹೊರತುಪಡಿಸಿ ಉಳಿದ ಮೂರು ಮೂಲಗಳಿಂದ ವಾರ್ಷಿಕ ಗುರಿ ಸಾಧನೆ ಅನುಮಾನವಾಗಿದೆ.

ವಾಣಿಜ್ಯ ತೆರಿಗೆ, ಮುದ್ರಾಂಕ ಮತ್ತು ನೋಂದಣಿ, ಮೋಟಾರು ವಾಹನ ತೆರಿಗೆಯಿಂದ ಸುಮಾರು 15,000 ಕೋಟಿ



ರೂಪಾಯಿಯಷ್ಟು ಆದಾಯ ಕೈತಪ್ಪುವ ಲಕ್ಷಣ ಕಾಣುತ್ತಿದೆ. ಇದು ಸರಕಾರದ ವೆಚ್ಚ, ಬಜೆಟ್ ಗಾತ್ರದ ಮೇಲೆ ಪರಿಣಾಮ ಬೀರಲಿದೆ. ಪ್ರಸಕ್ತ ಸಾಲಿನಲ್ಲಿ ಬಂಡವಾಳ ವೆಚ್ಚಕ್ಕೆ 83,200 ಕೋಟಿ ರೂ. ವಿನಿಯೋಗಿಸುವುದಾಗಿ ಸರ್ಕಾರ ಹೇಳುತ್ತಿದ್ದರೂ ತೆರಿಗೆ ಆದಾಯ ತಗ್ಗಿದರೆ ಅಭಿವೃದ್ಧಿ ಯೋಜನೆಗಳಿಗೆ ಬಳಕೆಯಾಗುವ ಅನುದಾನ ಕಡಿತವಾಗಲಿದೆ.

ಅಬಕಾರಿ ಇಲಾಖೆಯಿಂದ ಮಾತ್ರ ಪ್ರಸಕ್ತ ಸಾಲಿನ ವಾರ್ಷಿಕ ಗುರಿಯಷ್ಟು ಆದಾಯ ಸಂಗ್ರಹ ನಿರೀಕ್ಷೆ ಇದೆ. 40,000 ಕೋಟಿ ರೂಪಾಯಿ ವಾರ್ಷಿಕ ಗುರಿಯಡಿ ಜನವರಿ ಅಂತ್ಯಕ್ಕೆ 33,371ಕೋಟಿ ರೂಪಾಯಿ ಸಂಗ್ರಹವಾಗಿದೆ.

ಬಜೆಟ್ ಪೂರ್ವಭಾವಿ ಸಭೆ ಸಮಯದಲ್ಲಿ ಅಧಿಕಾರಿಗಳು ನಿಗದಿತ ಗುರಿ ಮುಟ್ಟುವ ಬಗ್ಗೆ ಅಸಹಾಯಕತೆ ವ್ಯಕ್ತಪಡಿಸಿದ್ದಾರೆ.

ವಾಣಿಜ್ಯ ತೆರಿಗೆ ಮೂಲದಿಂದ ಜನವರಿ ಅಂತ್ಯದವರೆಗೆ 90,229 ಕೋಟಿ ರೂ. ಸಂಗ್ರಹವಾಗಿದೆ. ಜಿಎಸ್‌ಟಿಯಿಂದ 66,605 ಕೋಟಿ ರೂ. ಮಾರಾಟ ತೆರಿಗೆಯಿಂದ 22,387 ಕೋಟಿ ರೂ. ಹಾಗೂ ವೃತ್ತಿ ತೆರಿಗೆಯಿಂದ 1,236 ಕೋಟಿ ರೂ. ಬೊಕ್ಕಸಕ್ಕೆ ಬಂದಿದೆ. ಕೇಂದ್ರ ಸರಕಾರ ಕಳೆದ ಸೆಪ್ಟೆಂಬರ್ 22ರಿಂದ ನಾಲ್ಕು ಶ್ರೇಣಿಯ ಜಿಎಸ್‌ಟಿ ಬದಲಿಗೆ ಎರಡೇ ಶ್ರೇಣಿಯ ದರಗಳನ್ನು ಜಾರಿ ಗೊಳಿಸಿದೆ. ಇದರಿಂದ ರಾಜ್ಯ ಸರಕಾರಕ್ಕೆ ವಾಣಿಜ್ಯ ತೆರಿಗೆಯಿಂದ ವಾರ್ಷಿಕ 11000 ಕೋಟಿ ರೂ. ನಷ್ಟ ಉಂಟಾಗುವ ಸಾಧ್ಯತೆ ಇದೆ.

ಮುದ್ರಾಂಕ ಮತ್ತು ನೋಂದಣಿ ಶುಲ್ಕ ಸೇರಿದಂತೆ ಇತರೆ ಶುಲ್ಕ ರೂಪದಲ್ಲಿ ಜನವರಿವರೆಗೆ 20,500 ಕೋಟಿ ರೂ. ಆದಾಯ ಗಳಿಸಿದೆ. ಬಾಕಿ ಎರಡು ತಿಂಗಳಲ್ಲಿ 7,500 ಕೋಟಿ ರೂಪಾಯಿ ಸಂಗ್ರಹ ಅಸಾಧ್ಯವೆನಿಸಿದ್ದು, 3,000 ಕೋಟಿ ರೂಪಾಯಿಯಷ್ಟು ಆದಾಯ ಕೈತಪ್ಪುವ ಸಾಧ್ಯತೆ ಇದೆ

ಮೋಟಾರು ವಾಹನ ತೆರಿಗೆ ಸೇರಿದಂತೆ ಇತರೆ ಮೂಲಗಳಿಂದ ಮಾರ್ಚ್ ಅಂತ್ಯಕ್ಕೆ 15,000 ಕೋಟಿ ರೂ. ಸಂಗ್ರಹ ಗುರಿ ನೀಡಲಾಗಿದೆ. ಆದರೆ ಜನವರಿವರೆಗೆ ಕೇವಲ 10,594 ಕೋಟಿ ರೂ.ಸಂಗ್ರಹ ವಾಗಿದೆ. ಇನ್ನು ಎರಡು ತಿಂಗಳಲ್ಲಿ4,406 ಕೋಟಿ ರೂಪಾಯಿಗಳಿಸಬೇಕಿದೆ. ಮಾರ್ಚ್ ಅಂತ್ಯಕ್ಕೆ 15,000 ಕೋಟಿ ರೂಪಾಯಿ ಆದಾಯ ಸಂಗ್ರಹ ಸವಾಲಾಗಿದ್ದು, 13,000 ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದೆ. ಹಾಗಾಗಿ ವಾರ್ಷಿಕ ಗುರಿಯಲ್ಲಿ 2000 ಕೋಟಿ ರೂಪಾಯಿಯಷ್ಟು ಕೈತಪ್ಪುವ ಸಂಭವವಿದೆ. ಒಟ್ಟಾರೆಯಾಗಿ ಈ ಎಲ್ಲಾ ಲೆಕ್ಕಾಚಾರಗಳನ್ನು ಆಧರಿಸಿ ಹೇಳುವುದಾದರೆ ರಾಜ್ಯ ಸರ್ಕಾರದ ಬಜೆಟ್ ಗಾತ್ರದಲ್ಲಿ ಒಟ್ಟಾರೆ ಸುಮಾರು 20 ಸಾವಿರ ಕೋಟಿ ರೂಪಾಯಿಗಳಷ್ಟು ಖೋತಾ ಉಂಟಾಗುವ ಸಾಧ್ಯತೆ ಇದೆ.

ಸಿದ್ದರಾಮಯ್ಯ ಅವರು ಈ ವರ್ಷ ಸಂಗ್ರಹಿಸಿದ ತೆರಿಗೆ ಹಾಗೂ ತೆರಿಗೆಯೇತರ ಆದಾಯ, ಕೇಂದ್ರ ಸರ್ಕಾರದ ಅನುದಾನ ಹಾಗೂ ಸಾಲ ಮೊತ್ತವನ್ನು ಆಧರಿಸಿ ವೆಚ್ಚದ ಬಾಬ್ತಿನ ನಿರ್ವಹಣೆ ಮಾಡಬೇಕು.

ವೈದ್ಯಕೀಯ ಕಾರಣಗಳಿಗಾಗಿ ಮಾತ್ರ ಮನೆ ಊಟ, ಕೋರಿಕೆ ಮೇರೆಗೆ ಅಲ್ಲ: ಪವಿತ್ರಾಗೌಡ ಅಂಡ್ ಟೀಂಗೆ ಹೈಕೋರ್ಟ್ ಶಾಕ್!

ಬೆಂಗಳೂರು: ಮನೆ ಊಟಕ್ಕೆ ಬೇಡಿಕೆ ಇಟ್ಟಿದ್ದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ಪವಿತ್ರಾಗೌಡ ಮತ್ತು ಇತರರಿಗೆ ಕರ್ನಾಟಕ ಹೈಕೋರ್ಟ್ ಶಾಕ್ ನೀಡಿದ್ದು, ವೈದ್ಯಕೀಯ ಕಾರಣಗಳಿಗಾಗಿ ಮಾತ್ರ ಮನೆ ಊಟ, ಕೋರಿಕೆ ಮೇರೆಗೆ ಅಲ್ಲ ಎಂದು ಖಡಕ್ ಸಂದೇಶ ನೀಡಿದೆ.

ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿಗಳಾದ ಪವಿತ್ರ ಗೌಡ, ನಾಗರಾಜ್ ಹಾಗೂ ಲಕ್ಷ್ಮಣ್ ಮೂವರು ಆರೋಪಿಗಳಿಗೆ ಮನೆ ಊಟಕ್ಕೆ ಹೈಕೋರ್ಟ್ ಬ್ರೇಕ್ ಹಾಕಿದ್ದು, ವಾರಕ್ಕೊಮ್ಮೆ ಹಾಗೂ ವೈದ್ಯಕೀಯ ಕಾರಣಗಳಿಂದ ಮನೆ ಊಟ ತರಿಸಿಕೊಳ್ಳಬಹುದು ಎಂಬ ಕೆಳ ಹಂತದ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿದ ಹೈಕೋರ್ಟ್ ಮನೆ ಊಟ ನೀಡುವಂತಿಲ್ಲ ಎಂದು ಆದೇಶಿಸಿದೆ.

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪದಲ್ಲಿ ಪವಿತ್ರಾಗೌಡ ಸೇರಿ ಕೆಲವು ಆರೋಪಿಗಳು ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿದ್ದಾರೆ. 57ನೇ ಟ್ರಯಲ್ ಕೋರ್ಟ್‌ಗೆ ಅರ್ಜಿ ಹಾಕಿದ್ದ ಪವಿತ್ರಾಗೌಡ, ನಾಗರಾಜು ಮತ್ತು ಲಕ್ಷ್ಮಣ್‌ಗೆ ಮನೆ ಊಟ ಬರುತ್ತಿತ್ತು.

ವೈದ್ಯಕೀಯ ಕಾರಣ ಹಾಗೂ ವಾರಕ್ಕೊಮ್ಮೆ ಮನೆ ಊಟ ತರಿಸಿಕೊಳ್ಳಬಹುದೆಂದು ಟ್ರಯಲ್ ಕೋರ್ಟ್ ಆದೇಶಿಸಿತ್ತು. ಅದರಂತೆ ಈ ಮೂರು ಆರೋಪಿಗಳು



ಮನೆ ಊಟ ಸೌಲಭ್ಯ ಪಡೆಯುತ್ತಿದ್ದರು. ಇದನ್ನು ವಿರೋಧಿಸಿದ್ದ ಜೈಲಾಧಿಕಾರಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಕೋರ್ಟ್ ಹೇಳಿದ್ದೇನು: ಸೆಷನ್ಸ್ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಪ್ರಾಸಿಕ್ಯೂಷನ್ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠವು ಈ ಆದೇಶವನ್ನು ಹೊರಡಿಸಿದೆ. ಕೇವಲ ವಿಚಾರಣಾಧೀನ ಕೈದಿಗಳ ವೈಯಕ್ತಿಕ ಮನವಿ ಅಥವಾ ಇಷ್ಟದ ಮೇರೆಗೆ ಮನೆಯೂಟ ನೀಡುವುದು ಕಾನೂನುಬದ್ಧವಾಗಿ ಸರಿಯಲ್ಲ. ವೈದ್ಯಕೀಯ ತುರ್ತು ಪರಿಸ್ಥಿತಿ ಅಥವಾ ವೈದ್ಯರ ಅಧಿಕೃತ ಸಲಹೆ ಇಲ್ಲದೆ ಇಂತಹ ಸೌಲಭ್ಯ ನೀಡುವುದು ಸೂಕ್ತವಲ್ಲ ಎಂದು ಅಭಿಪ್ರಾಯಪಟ್ಟಿದೆ.

ನ್ಯಾಯಾಲಯದ ಕಳವಳ: ವಿಚಾರಣೆ ವೇಳೆ ನ್ಯಾಯಾಲಯವು ಒಂದು ಪ್ರಮುಖ ಅಂಶವನ್ನು ಎತ್ತಿ ತೋರಿಸಿದ್ದು, ಜೈಲಿನಲ್ಲಿರುವ ಕೆಲವು ಪ್ರಭಾವಿ ಕೈದಿಗಳಿಗೆ ಮಾತ್ರ ಮನೆಯೂಟದ ಅವಕಾಶ ನೀಡಿದರೆ, ಅದು ಇತರ ಸಾಮಾನ್ಯ ಕೈದಿಗಳ ನಡುವೆ ತಾರತಮ್ಯ ಎಸಗಿದಂತೆ ಆಗುತ್ತದೆ. ಜೈಲು ನಿಯಮಾವಳಿಗಳು ಎಲ್ಲರಿಗೂ ಸಮಾನವಾಗಿರಬೇಕು ಎಂದು ನ್ಯಾಯಾಧೀಶರು ಸ್ಪಷ್ಟಪಡಿಸಿದ್ದಾರೆ. ಅಂತೆಯೇ ವೈದ್ಯರ ಶಿಫಾರಸು ಇದ್ದಲ್ಲಿ ಮಾತ್ರ ಜೈಲು ಅಧಿಕಾರಿಗಳಿಗೆ ಮನೆಯೂಟಕ್ಕಾಗಿ ಮತ್ತೆ ಮನವಿ ಸಲ್ಲಿಸಲು ಅವಕಾಶವಿದೆ ಎಂದು ಕೋರ್ಟ್ ತಿಳಿಸಿದೆ.

ಜೈಲು ಊಟದ ಗುಣಮಟ್ಟದ ಮೇಲೆ ಹೈಕೋರ್ಟ್ ಕಣ್ಣು: ಅಂತೆಯೇ ಜೈಲಿನಲ್ಲಿ ಕೈದಿಗಳಿಗೆ ನೀಡುವ ಊಟದ ಗುಣಮಟ್ಟದ ಬಗ್ಗೆಯೂ ಹೈಕೋರ್ಟ್ ಗಂಭೀರವಾಗಿ ಚರ್ಚಿಸಿದ್ದು, ಈ ಹಿಂದೆ ಒಬ್ಬ ಕೈದಿಯ ದಿನದ ಊಟದ ವೆಚ್ಚ 82 ರೂ. ಇತ್ತು. ಈಗ ಅದನ್ನು 125 ರೂ.ಗೆ ಏರಿಸಲಾಗಿದೆ ಎಂದು ಎಸ್‌ಪಿಪಿ ಜಗದೀಶ್ ಮಾಹಿತಿ ನೀಡಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಕೋರ್ಟ್, ವೆಚ್ಚವನ್ನು 125 ರೂ.ಗೆ ಹೆಚ್ಚಿಸಿದರೂ ಊಟದ ಗುಣಮಟ್ಟದ ಪರಿಶೀಲನೆ ಅತ್ಯಗತ್ಯ ಎಂದು ಹೇಳಿದೆ.

ಮೈಸೂರಲ್ಲಿ ಗಾಂಜಾ ನಶೆಯಲ್ಲಿ ಸಾರ್ವಜನಿಕರಿಗೆ ಉಪಟಳ ; ವ್ಯಸನಿಗಳ ವಿರುದ್ಧ ಪ್ರಕರಣ ದಾಖಲು

ಮೈಸೂರು,ಮಾ.4(ಪಿಎಂ)– ಮಾದಕ ವಸ್ತು ಸೇವಿಸಿದ ನಶೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ದುರ್ವರ್ತನೆ ತೋರಿದ ಸಂಬಂಧ ಹಲವರ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

ಲಷ್ಕರ್ ಠಾಣೆ ಪೊಲೀಸರು ಮಾ.2ರಂದು ಸಂಜೆ ಗಸ್ತು ತಿರುಗುತ್ತಿದ್ದ ವೇಳೆ ಗುಜರಿ ರಸ್ತೆಯಲ್ಲಿ ಮೈಸೂರಿನ ವಿದ್ಯಾನಗರದ ನಿವಾಸಿ ಎಂ.ಸಿ.ಸಚಿನ್ (32) ಎಂಬಾತ ಕೂಗಾಡುತ್ತಾ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದ. ಈತನನ್ನು ವಶಕ್ಕೆ ಪಡೆದು ವಿಚಾರಣೆ ಮಾಡಿದಾಗ, ಗಾಂಜಾವನ್ನು ಸಿಗರೇಟ್‌ನಲ್ಲಿ ಸೇರಿಸಿ ಸೇವನೆ ಮಾಡಿರುವುದು ಗೊತ್ತಾಗಿದೆ. ಬಳಿಕ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಮಾದಕ ವಸ್ತುವನ್ನು ಈತ ಸೇವನೆ ಮಾಡಿರುವುದು ದೃಢಪಟ್ಟಿದೆ.

ಮತ್ತೊಂದು ಪ್ರಕರಣದಲ್ಲಿ ಇದೇ ಲಷ್ಕರ್ ಪೊಲೀಸರು ಗಸ್ತಿನಲ್ಲಿದ್ದಾಗ, ಮಾ.3ರಂದು ಕೇಶವ ಅಯ್ಯಂಗಾರ್ ರಸ್ತೆಯಲ್ಲಿ ತೂರಾಡುತ್ತಾ ಬರುತ್ತಿದ್ದ ಶ್ರೀರಂಗಪಟ್ಟಣ ತಾಲೂಕಿನ ಕಿರಂಗೂರು ಗ್ರಾಮದ ಅಂತೋಣಿ ಸಂತೋಷ್ (26) ಎಂಬ ಆಟೋ ಚಾಲಕನನ್ನು ವಶಕ್ಕೆ ಪಡೆದು ಪರಿಶೀಲಿಸಿದಾಗ, ಈತನು ಗಾಂಜಾವನ್ನು ಸಿಗರೇಟಿನಲ್ಲಿ ಸೇರಿಸಿ ಸೇವನೆ ಮಾಡಿರುವುದು ಖಾತ್ರಿಪಟ್ಟಿದೆ.

ಇನ್ನೊಂದು ಪ್ರಕರಣದಲ್ಲಿ ಫೆ.27ರಂದು ಮಧ್ಯಾಹ್ನ ಹೆಬ್ಬಾಳ ಪೊಲೀಸರು ಗಸ್ತಿನಲ್ಲಿದ್ದಾಗ ಮಾದೇಗೌಡ ಸರ್ಕಲ್ ಬಳಿ ಇಲ್ಲಿನ ನಿವಾಸಿ ಪವನ್ (18) ಗಾಂಜಾವನ್ನು ಸಿಗರೇಟ್‌ನಲ್ಲಿ ಹಾಕಿಕೊಂಡು ಸೇವನೆ ಮಾಡಿ ಸಿಕ್ಕಿ ಬಿದಿದ್ದಾನೆ. ವೃತ್ತಿಯಲ್ಲಿ ಕೂಲಿ



ಕೆಲಸಗಾರನಾದ ಈತನ ವಿರುದ್ಧ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ದೇವರಾಜ ಮೊಹಲ್ಲಾದ ದಿವಾನ್ಸ್ ರಸ್ತೆಯಲ್ಲಿ ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದ್ದ ಪಿರಿಯಾಪಟ್ಟಣ ತಾಲೂಕಿನ ಆಲನಹಳ್ಳಿ ಗ್ರಾಮದ ನಿವಾಸಿ ವಿ.ಉದಯಕುಮಾರ್ (23) ಎಂಬಾತನನ್ನು ದೇವರಾಜ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿ, ಆತನು ಗಾಂಜಾವನ್ನು ಬೀಡಿಯಲ್ಲಿ ಸೇರಿಸಿ ಸೇವನೆ ಮಾಡಿದ ಪರಿಣಾಮ ಅನಾಗರಿಕ ರೀತಿ ವರ್ತಿಸುತ್ತಿರುವುದು ದೃಢಪಟ್ಟಿದೆ.

ಮಾ.2ರಂದು ಭಾತ್ಮೀದಾರರಿಂದ ಬಂದ ಮಾಹಿತಿ ಮೇರೆಗೆ ದೇವರಾಜ ಮೊಹಲ್ಲಾದ ಜೆ.ಕೆ ಮೈದಾನದ ಸಮೀಪ ಹೋಗಿ ಪರಿಶೀಲಿಸಿದ ದೇವರಾಜ ಠಾಣೆ ಪೊಲೀಸರಿಗೆ ಗಾಂಜಾ ಸೇವಿಸಿದ್ದ ಮೈಸೂರಿನ ದೇವರಾಜ ಮೊಹಲ್ಲಾದ ಕೊತ್ವಾಲ್ ರಾಮಯ್ಯ ಸ್ಟ್ರೀಟ್ 4ನೇ ಕ್ರಾಸ್ ನಿವಾಸಿ ಜಯಂತ್ (23) ಸಿಕ್ಕಿಬಿದ್ದಿದ್ದಾನೆ. ಆಟೋ ಚಾಲಕನಾದ ಈತ ಬೀಡಿಯಲ್ಲಿ ಗಾಂಜಾ ಹಾಕಿಕೊಂಡು ಸೇವನೆ ಮಾಡಿದ್ದು ತಪಾಸಣೆ ವೇಳೆ ಖಾತ್ರಿಯಾಗಿದೆ.

ಪರಿಶಿಷ್ಟ ಜಾತಿ, ಪಂಗಡಗಳಿಗೆ ಮೀಸಲಾತಿಯಲ್ಲಿ ಅನ್ಯಾಯ

ಮಾಜಿ ಸಚಿವ ಶ್ರೀರಾಮುಲು ಆರೋಪ

ಬೆಂಗಳೂರು, ಮಾ.4(ಕೆಎಂಶಿ)– ರಾಜ್ಯ ಸರ್ಕಾರ ಮೀಸಲಾತಿಯನ್ನು ಸರಿಯಾಗಿ ಅನುಷ್ಠಾನ ಮಾಡದೆ ಗೊಂದಲ ಸೃಷ್ಟಿಸಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಸಮುದಾಯಕ್ಕೆ ಅನ್ಯಾಯ ಮಾಡುತ್ತಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಇಂದಿಲ್ಲಿ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ನೀತಿ ಖಂಡಿಸಿ ಭಾರತೀಯ ಜನತಾ ಪಕ್ಷ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಮಾಡಲಿದೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮೊದಲು ನೀಡಿದ ಭರವಸೆ, ಆಶ್ವಾಸನೆಗಳನ್ನು ಜಾರಿ ಮಾಡಲಿಲ್ಲ. ಒಂದು ವರ್ಷದಲ್ಲಿ ಒಂದು ಲಕ್ಷ ಹುದ್ದೆ ಭರ್ತಿ ಮಾಡುತ್ತೇವೆ ಎಂದಿದ್ದರು. ಇದುವರೆಗೂ ಕ್ರಮ ಕೈಗೊಂಡಿಲ್ಲ. ರಾಜ್ಯದಲ್ಲಿ ಸುಮಾರು 2.85 ಲಕ್ಷ ಸರ್ಕಾರಿ ಹುದ್ದೆ ಖಾಲಿ ಇವೆ. ಉದ್ಯೋಗಕ್ಕಾಗಿ ಯುವಜನರು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ.



ಅವರ ನೋವನ್ನು ಆಲಿಸಲಿಲ್ಲ. ದಪ್ಪ ಚರ್ಮದ ಸರ್ಕಾರಕ್ಕೆ ಯುವಜನರು ಪ್ರತಿಭಟನೆ ನಡೆಸಿದ ನಂತರ ಜ್ಞಾನೋದಯವಾಗಿ ಐವತ್ತು ಸಾವಿರ ಹುದ್ದೆಗಳ ಭರ್ತಿಗೆ ಮುಂದಾಗಿದೆ. ಮೀಸಲಾತಿ ಸಮಸ್ಯೆ ಎಂಬ ಕುಂಟುನೆಪ ಹೇಳುತ್ತಿತ್ತು.

ಮೀಸಲಾತಿ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿದ ಹಕ್ಕು ಬಸವರಾಜ ಬೊಮ್ಮಾಯಿ ಅಧಿಕಾರಾವಧಿಯಲ್ಲಿ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಕೊಡಬೇಕು ಎಂಬ ತೀರ್ಮಾನ ಮಾಡಿದ್ದವು.

ಮೀಸಲಾತಿಗೆ ಮೂರು ದಶಕಗಳಿಂದ ಹೋರಾಟ ನಡೆಯುತ್ತಿದೆ. ಸರ್ಕಾರ ಮಾನವೀಯತೆಯಿಂದ ಉದ್ಯೋಗ ಕಾಂಕ್ಷಿಗಳ ಬೇಡಿಕೆ ಪರಿಗಣಿಸಲಿಲ್ಲ. ಈಗ ನ್ಯಾಯಾಲಯದಿಂದ ತಾತ್ಕಾಲಿಕ ತಡೆ ಬಂದಿದೆ. ಡಾ.ಅಂಬೇಡ್ಕರ್ ನೀಡಿದ ಹಕ್ಕನ್ನೇ ಕಾಂಗ್ರೆಸ್ ಕಸಿಯುತ್ತಿದೆ. ಇದರ ವಿರುದ್ಧ ಬಿಜೆಪಿ ಹೋರಾಟ ನಡೆಸಲಿದೆ. ಪಕ್ಷದ ಎಲ್ಲಾ ಸಂಸದರು, ಶಾಸಕರು, ಮಾಜಿ ಸಚಿವರು ಈ ತೀರ್ಮಾನ ಕೈಗೊಂಡಿದ್ದಾರೆ.

ಸರ್ಕಾರ ಎಸ್‌ಸಿಪಿ–ಟಿಎಸ್‌ಪಿ ಹಣವನ್ನೂ ಬೇರೆ ಉದ್ದೇಶಗಳಿಗೆ ಬಳಸಿಕೊಂಡು ಅನ್ಯಾಯ ಮಾಡಿದೆ. ಈಗ ಮೀಸಲಾತಿ ವಿಷಯದಲ್ಲೂ ಗೊಂದಲ ಸೃಷ್ಟಿಸಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಶೋಭೆ ತರುವುದಿಲ್ಲ. ಈ ಅನ್ಯಾಯ ಖಂಡಿಸಿ ಮುಂದಿನ ದಿನಗಳಲ್ಲಿ ಜನರೇ ಉಗ್ರ ಹೋರಾಟ ಮಾಡಲಿದ್ದಾರೆ ಎಂದು ಎಚ್ಚರಿಸಿದರು.

ಮಾ.8ರಂದು ಸ್ವಚ್ಛತಾ ರೋಡ್ ಶೋ

ಮೈಸೂರು,ಮಾ.4–ಮೈಸೂರು ಮಹಾನಗರಪಾಲಿಕೆ ವತಿಯಿಂದ ಮಾ.8ರಂದು ಮೈಸೂರು ಅರಮನೆ ಆವರಣದಿಂದ ಓವಲ್ ಮೈದಾನದವರೆಗೆ 'ಸ್ವಚ್ಛ ಮೈಸೂರು ನನ್ನಿಂದ ಪ್ರಾರಂಭ' ಎಂಬ ಧ್ಯೇಯ ವಾಕ್ಯದೊಂದಿಗೆ ಸ್ವಚ್ಛತಾ ರೋಡ್ ಶೋ ಆಯೋಜಿಸಲಾಗಿದೆ ಎಂದು ಮೈಸೂರು ಪ್ರಾದೇಶಿಕ ಆಯುಕ್ತ ನಿತೀಶ್ ಪಟೇಲ್ ತಿಳಿಸಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಲು ಮುಖ್ಯಮಂತ್ರಿಗಳನ್ನು ಸಹ ಆಹ್ವಾನಿಸಲಾಗುವುದು. ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿರುವ ಸಂಘ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕಾರ್ಯಕ್ರಮವನ್ನು ಆಯೋಜಿಸಿ ಎಂದರು.

ಮೈಸೂರು ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ರೋಡ್ ಶೋನಲ್ಲಿ ವಿಂಟೇಜ್ ಕಾರ್, ಮಹಿಳಾ ದಿನಾಚರಣೆ ಮಾ.8ರಂದು ಇರುವ ಹಿನ್ನಲೆಯಲ್ಲಿ ಮಹಿಳೆಯರ ಬೈಕ್ ರ್‍ಯಾಲಿ, ಸೈಕಲ್ ರ್‍ಯಾಲಿ, ಮೌಂಟೆಡ್ ತಂಡದಿಂದ ಕುದುರೆಗಳು, ಟಾಂಗಾಗಳು ಇನ್ನಿತರೆ ತಂಡಗಳು ಭಾಗವಹಿಸುವ ರೀತಿ ಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ರೋಡ್ ಶೋ ಕೊನೆಗೊಳ್ಳುವ ಓವಲ್ ಮೈದಾನದಲ್ಲಿ ಕಟ್ಟಡ ನಿರ್ಮಾಣ ತ್ಯಾಜ್ಯ ವಸ್ತುಗಳಿಂದ ಉಪಯುಕ್ತ ವಸ್ತುಗಳ ತಯಾರಿಕೆ, ಇ.ವೇಸ್ಟ್, ಪ್ಲಾಸ್ಟಿಕ್, ಬಯೋ ಮೆಡಿಕಲ್ ವೇಸ್ಟ್‌ಗಳ ನಿರ್ವಹಣೆ ಕುರಿತು ಪ್ರಾತ್ಯಕ್ಷಿಕೆ ಆಯೋಜಿಸಿ ಸಾರ್ವಜನಿಕರಿಗೆ ಸ್ವಚ್ಛ ಮೈಸೂರು ನಿರ್ಮಾಣದ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಉಪಾಯುಕ್ತೆ ವೀಣಾ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕ್ಲೀನ್ ಫೌಂಡೇಶನ್ ಮೈಸೂರ್‌ನ ನಿರ್ದೇಶಕರಾದ ಲೀಲಾ ವೆಂಕಟೇಶ್, ಸೆಲ್ಕೋ ಫೌಂಡೇಶನ್ ನ ಪ್ರಕಾಶ್ ಮೇಟಿ, ಪರಿಸರ ವಿಜ್ಞಾನ ಸಂಶೋಧಕರಾದ ಗೋಪಿ ಕಿರಣ್ ಹೆಚ್, ಜಿ.ಎಸ್.ಎಸ್ ಪ್ರಾಜೆಕ್ಟ್ ಟ್ರೈನ ಶ್ರೀ ರಾಮ್ ಡಿ, ಶ್ರೀಧರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಎಚ್‌ಐವಿ, ಏಡ್ಸ್ ಜಾಗೃತಿ ಕಾರ್ಯಕ್ರಮ



ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನಲ್ಲಿ ಎಚ್‌ಐವಿ/ಏಡ್ಸ್ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮೈಸೂರು,ಮಾ.4–ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿನ (ಸ್ವಾಯತ್ತ) ಎನ್‌ಎಸ್‌ಎಸ್ ಘಟಕವು ಚಾಪೆಲ್ ಹಾಲ್ 1ರಲ್ಲಿ ಎಚ್‌ಐವಿ/ಏಡ್ಸ್ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಕಾರ್ಯಕ್ರಮವನ್ನು ಮೈಸೂರಿನ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕ ಮತ್ತು ಐಸಿಟಿಸಿ ವಿಭಾಗ, ಪಿಕೆ ಟಿಬಿ ಮತ್ತು ಸಿ.ಡಿ. ಆಸ್ಪತ್ರೆ ಮೈಸೂರು ಇವರ ಸಹಯೋಗದೊಂದಿಗೆ ನಡೆಸಲಾಯಿತು.

ಎಚ್‌ಐವಿ/ಏಡ್ಸ್ ತಡೆಗಟ್ಟುವಿಕೆ, ಆರಂಭಿಕ ಪತ್ತೆ, ಚಿಕಿತ್ಸೆಯ ಆಯ್ಕೆಗಳು ಮತ್ತು ರೋಗಕ್ಕೆ ಸಂಬಂಧಿಸಿದ ಕಳಂಕವನ್ನು ನಿವಾರಿಸುವ ಮಹತ್ವದ ಬಗ್ಗೆ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಉದ್ದೇಶವನ್ನು ಈ ಕಾರ್ಯಕ್ರಮ ಹೊಂದಿದೆ.

ಮೈಸೂರಿನ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಪ್ರಶಾಂತ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಎಚ್‌ಐವಿ ಹರಡುವುದನ್ನು ತಡೆಗಟ್ಟುವಲ್ಲಿ ಸರಿಯಾದ ಜ್ಞಾನ, ಸುರಕ್ಷಿತ ಅಭ್ಯಾಸಗಳು, ನಿಯಮಿತ ಪರೀಕ್ಷೆ ಮತ್ತು ಜವಾಬ್ದಾರಿಯುತ ನಡವಳಿಕೆಯ ಮಹತ್ವವನ್ನು ಅವರು ಒತ್ತಿ ಹೇಳಿದರು. ಎಚ್‌ಐವಿ–ಪಾಸಿಟಿವ್ ವ್ಯಕ್ತಿಗಳು ಆರೋಗ್ಯಕರ ಮತ್ತು ಉತ್ಪಾದಕ ಜೀವನ ನಡೆಸಲು ಅನುವು ಮಾಡಿಕೊಡುವ ಚಿಕಿತ್ಸೆಯಲ್ಲಿನ ಪ್ರಗತಿಯನ್ನು ತಿಳಿಸಿಕೊಟ್ಟರು.

ಮೈಸೂರಿನ ಲಯನ್ಸ್ ಜೀವಧಾರ ಬ್ಲಡ್ ಬ್ಯಾಂಕಿನ ವ್ಯವಸ್ಥಾಪಕ ನಿರ್ದೇಶಕ ಗಿರೀಶ್, ರಕ್ತದಾನ, ತಪಾಸಣೆ ವಿಧಾನಗಳ ಮಹತ್ವದ ಬಗ್ಗೆ ಮಾತನಾಡಿದರು. ಪಿಕೆಟಿಬಿ ಆಸ್ಪತ್ರೆಯ ಕೌನ್ಸೆಲರ್ ನಾಗೇಂದ್ರ ಪ್ರಸಾದ್, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಸಮಾಲೋಚನೆ ಸೇವೆಗಳು, ಮಾನಸಿಕ ಆರೋಗ್ಯ ಬೆಂಬಲ ಮತ್ತು ಎಚ್‌ಐವಿ/ಏಡ್ಸ್ ಸುತ್ತಲಿನ ಪುರಾಣಗಳು ಮತ್ತು ತಪ್ಪು ಕಲ್ಪನೆಗಳನ್ನು ಮುರಿಯುವ ಅಗತ್ಯತೆ ಬಗ್ಗೆ ಮಾತನಾಡಿದರು. ಆಡಳಿತಾಧಿಕಾರಿ ರೆ. ಫಾದರ್ ಜ್ಞಾನ ಪ್ರಗಾಸಂ, ಆಡಳಿತ ಉಪಪ್ರಾಂಶುಪಾಲ ರೊನಾಲ್ಡ್ ಪ್ರಕಾಶ್ ಕುಟಿನ್ಹಾ ಅಧ್ಯಕ್ಷತೆ ವಹಿಸಿದ್ದರು.

ತಿಳುವಳಿಕೆಯೊಂದೇ ಏಡ್ಸ್‌ಗೆ ಬಲವಾದ ಮದ್ದು



ಮಹಾಜನ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಏಡ್ಸ್ ಅರಿವು ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಜೆಎಸ್‌ಎಸ್ ಆಸ್ಪತ್ರೆ ಐಸಿಟಿಸಿ ಸೆಂಟರ್‌ನ ಆಪ್ತಸಮಾಲೋಚಕಿ ಬಿ.ನಂದಿನಿ ಮಾತನಾಡಿದರು.

ಮೈಸೂರು,ಮಾ.4–ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕಗಳು ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಮೈಸೂರು ಸಹಯೋಗದಲ್ಲಿ ಹೆಚ್‌ಐವಿ/ಏಡ್ಸ್ ಅರಿವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜೆ.ಎಸ್.ಎಸ್. ಆಸ್ಪತ್ರೆಯ ಐಸಿಟಿಸಿ ಸೆಂಟರ್‌ನ ಆಪ್ತಸಮಾಲೋಚಕರಾದ ಬಿ.ನಂದಿನಿ ಸಂಪನ್ಮೂಲ ವ್ಯಕ್ತಿ ಯಾಗಿ ಆಗಮಿಸಿ, ವಿದ್ಯಾರ್ಥಿಗಳಿಗೆ ಹೆಚ್.ಐ.ವಿ. ಹರಡುವ ವಿಧಾನಗಳು, ಮುನ್ನೆಚ್ಚರಿಕಾ ಕ್ರಮಗಳು ಮತ್ತು ಸಮಾಜ ದಲ್ಲಿ ಏಡ್ಸ್ ಪೀಡಿತರ ಕುರಿತು ಇರ ಬೇಕಾದ ಮಾನವೀಯ ದೃಷ್ಟಿಕೋನದ ಬಗ್ಗೆ ಸವಿಸ್ತಾರವಾಗಿ ಮಾಹಿತಿ ನೀಡುತ್ತಾ, ಯುವಜನತೆ ಈ ಕಾಯಿಲೆಯ ಬಗ್ಗೆ ಸರಿಯಾದ ಮಾಹಿತಿ ಹೊಂದುವುದು, ಹೆಚ್.ಐ.ವಿ. ಹರಡುತ್ತಿರುವ ಪ್ರಮಾಣ ಮತ್ತು ಅದನ್ನು ತಡೆಗಟ್ಟುವಲ್ಲಿ ಯುವಜನತೆಯ ಪಾತ್ರವನ್ನು ವಿವರಿಸಿದರು.

ಸುರಕ್ಷಿತ ಜೀವನಶೈಲಿಯ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಮುಕ್ತವಾಗಿ ಮಾತನಾಡುತ್ತಾ, ಹೆಚ್.ಐ.ವಿ–ಏಡ್ಸ್ ತಡೆಗಟ್ಟಲು ಒಬ್ಬರಿಗೆ ಒಬ್ಬರೇ ಸಂಗಾತಿ ಎಂಬ ಮಾರ್ಗಸೂಚಿಯನ್ನು ಪಾಲಿಸುವುದು ಅಗತ್ಯ ಎಂದು ತಿಳಿಸಿದರು.

ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ ಅವರು ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ, ಯುವಜನತೆ ಇಂತಹ ಮಾರಕ ರೋಗಗಳ ಬಗ್ಗೆ ಜಾಗೃತರಾಗಬೇಕು ಮತ್ತು ಅರಿವು ಮೂಡಿಸುವ ಕೆಲಸ ಮಾಡಬೇಕು, ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಹೆಚ್.ಐ.ವಿ ಬಗ್ಗೆ ಇದ್ದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವಲ್ಲಿ ಮತ್ತು ಆರೋಗ್ಯಕರ ಜೀವನ ಶೈಲಿಯ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಬಹಳ ಸಹಕಾರಿಯಾಗಿದೆ ಎಂದು ಅಭಿಪ್ರಾಯಪಟ್ಟರು.

ಇದೇ ಸಂದರ್ಭದಲ್ಲಿ ಹೆಚ್.ಐವಿ–ಏಡ್ಸ್ ಕುರಿತ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಡಾ.ದೊಡ್ಡರಸಯ್ಯ ಜಿ., ನಿರಂಜನ್ ಎಲ್, ಲಕ್ಷ್ಮಿದೇವಮ್ಮ ಆಸ್ಪತ್ರೆಯ ಕೌನ್ಸೆಲರ್ ಜ್ಯೋತಿ, ಎನ್.ಎಸ್.ಎಸ್. ಸ್ವಯಂ ಸೇವಕ–ಸೇವಕಿಯರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಮಿತ್ರ ಗುರುವಾರ 5 ಮಾರ್ಚ್ 2026

ಮದ್ದೂರು ಶಾಸಕರಿಂದ ಅಭಿವೃದ್ಧಿ ಹೆಸರಲ್ಲಿ ಮರಳು ದಂಧೆ

ದೇವೇಗೌಡರು, ಕುಮಾರಸ್ವಾಮಿ ಹೆಸರೇಳಲು ಉದಯ್‌ಗೆ ನೈತಿಕತೆ ಇಲ್ಲ. ಜನಾಭಿಪ್ರಾಯ ಸಂಗ್ರಹಿಸದೇ ಮದ್ದೂರನ್ನು ನಗರಸಭೆಯಾಗಿ ಮೇಲ್ದರ್ಜೆಗೇರಿಸಲಾಗಿದೆ : ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಕಿಡಿ

ಮಂಡ್ಯ,ಮಾ.4– ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಬಗ್ಗೆ ಲಘುವಾಗಿ ಮಾತನಾಡಿ, ನನ್ನ ಅವಧಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪ ಮಾಡಿರುವ ಶಾಸಕ ಕೆ.ಎಂ.ಉದಯ್ ಕೆ.ಎಂ.ದೊಡ್ಡಿ–ಮದ್ದೂರು ನೀರು ಪೂರೈಕೆ ಕಾಮಗಾರಿಯ ಪೈಪ್‌ಲೈನ್ ಅಳವಡಿಕೆಯಲ್ಲಿ ಭ್ರಷ್ಟಾಚಾರ ಎಸಗುತ್ತಿದ್ದಾರೆ ಎಂದು ಆರೋಪಿಸಿರುವ ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಸೂಳೆಕೆರೆ ಅಭಿವೃದ್ಧಿ ಮಾಡುವುದಾಗಿ ಹೇಳಿ ಅಕ್ರಮ ಮರಳು ದಂಧೆಯಲ್ಲಿ ಭಾಗಿಯಾಗಿದ್ದಾರೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜವಾಬ್ದಾರಿಯುತ ಸ್ಥಾನದಲ್ಲಿರುವ ಶಾಸಕ ಉದಯ್, ಮುತ್ಸದ್ದಿ ರಾಜಕಾರಣಿ ಎಚ್.ಡಿ.ದೇವೇಗೌಡರ ಬಗ್ಗೆ ಲಘುವಾಗಿ ಮಾತನಾಡುವುದು ಹೊಣೆಗೇಡಿತನ. ದೇವೇಗೌಡರು ತಮ್ಮ ಸುದೀರ್ಘ 60 ವರ್ಷದ ರಾಜಕಾರಣದಲ್ಲಿ ಸೇವೆ ಮಾಡಿದ್ದಾರೆ. ಒಬ್ಬ ಕನ್ನಡಿಗನಾಗಿ ದೇಶದ ಅತ್ಯುನ್ನತ ಹುದ್ದೆ ಪ್ರಧಾನಿ ಪಟ್ಟ ಅಲಂಕರಿಸಿದ್ದರು. ಮತ್ತೊಬ್ಬ ಕನ್ನಡಿಗ ಪ್ರಧಾನಿಯಾಗಲು ಸಾಧ್ಯವಿಲ್ಲ. ಅಂಥ ನಾಯಕರ ವಿರುದ್ಧ ಮಾತನಾಡುವ ನೈತಿಕತೆ ಉದಯ್‌ಗಿಲ್ಲ ಎಂದು ಟೀಕಿಸಿದರು.

ದೇವೇಗೌಡರು ನೀರಾವರಿ ಹಾಗೂ ಕಾವೇರಿಗಾಗಿ ಹಲವು ಹೋರಾಟ ಮಾಡಿದ್ದಾರೆ. ಜೊತೆಗೆ ಪ್ರಾದೇಶಿಕ ಪಕ್ಷ ಕಟ್ಟಿ ಯಶಸ್ವಿಯಾಗಿ ಮುನ್ನಡೆಸಿದ್ದಾರೆ. ರಾಜ್ಯದ ಯಾವುದೇ ನಾಯಕ ಕಟ್ಟಿದ ಪ್ರಾದೇಶಿಕ ಪಕ್ಷ ಯಶಸ್ವಿಯಾಗಿಲ್ಲ. ಆದರೆ ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್ ಪಕ್ಷವು ಎಲ್ಲ ವರ್ಗದ ಜನರ ದನಿಯಾಗಿದೆ. ಉದಯ್ ಜೆಡಿಎಸ್ ಪಕ್ಷವನ್ನು ಕುಟುಂಬದ ಪಕ್ಷ ಎಂದು ಟೀಕಿಸುತ್ತಾರೆ. ಆದರೆ ಕಾಂಗ್ರೆಸ್ ಸಹ ಒಂದು ಕುಟುಂಬಕ್ಕೆ ಸೇರಿದ ಪಕ್ಷವಲ್ಲವೇ? ಎಂದು ಪ್ರಶ್ನಿಸಿದರು.

ನಾನು ಶಾಸಕನಾಗಿದ್ದ ಅವಧಿಯಲ್ಲಿ ನೀರು ಪೂರೈಕೆ ಒಳಚರಂಡಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪ ಮಾಡುತ್ತಾರೆ. ಪ್ರಸ್ತುತ ಅವರೇ ಶಾಸಕರಾಗಿದ್ದು, ಭ್ರಷ್ಟಾಚಾರ ನಡೆದಿದ್ದರೆ ತನಿಖೆ ಮಾಡಲಿ. ಕೆ.ಎಂ. ದೊಡ್ಡಿ–ಮದ್ದೂರು ನೀರು ಪೂರೈಕೆ ಕಾಮಗಾರಿ ಆರಂಭಗೊಂಡು 3 ವರ್ಷವಾಗಿದ್ದರೂ ಪೈಪ್‌ಲೈನ್ ಅಳವಡಿಸಿಲ್ಲ. ಪೈಪ್‌ಲೈನ್ ಅಳವಡಿಸಲು ಶೇ.10ರಷ್ಟು ಕಮೀಷನ್ ಕೇಳುತ್ತಾರೆ. ಈ ಬಗ್ಗೆಯೂ ತನಿಖೆ ನಡೆಯಲಿ ಎಂದು ಸವಾಲು ಹಾಕಿದರು.


ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿದರು.

45 ಕೋಟಿ ರೂ. ವೆಚ್ಚದಲ್ಲಿ ಮದ್ದೂರು ತಾಲೂಕಿನ ಸೂಳೆಕೆರೆ ಅಭಿವೃದ್ಧಿ ಮಾಡಲು ಶಾಸಕರು ಮುಂದಾಗಿದ್ದಾರೆ. ಆದರೆ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಅಕ್ರಮವಾಗಿ ಮರಳನ್ನು ತೆಗೆದು ಮಾರಾಟ ಮಾಡುತ್ತಿದ್ದಾರೆ. ಹೂಳು ತೆಗೆಯಲು ಮರಳನ್ನು ಹೊರಗೆ ತೆಗೆಯಲಿ. ಆದರೆ ಮಾರಾಟ ಮಾಡಲು ಇವರಿಗೆ ಅನುಮತಿ ಕೊಟ್ಟಿರುವವರು ಯಾರು? ಎಂದು ಪ್ರಶ್ನಿಸಿದ ಅವರು, ಇದುವರೆಗೂ ಕೆರೆ ಅಭಿವೃದ್ಧಿ ಹೆಸರಿನಲ್ಲಿ 3500 ಟನ್ ಮರಳನ್ನು ಅಕ್ರಮವಾಗಿ ಮಾರಾಟ ಮಾಡಿದ್ದಾರೆ. ಜೊತೆಗೆ ಕೆರೆ ಅಭಿವೃದ್ಧಿ ನೆಪದಲ್ಲಿ ಬಿಡುಗಡೆಯಾಗುವ 45 ಕೋಟಿ ರೂ. ಅನುದಾನದಲ್ಲಿ ಶೇ.40ರಷ್ಟು ಕಮೀಷನ್ ಹೊಡೆಯಲು ಮುಂದಾಗಿದ್ದಾರೆ ಎಂದು ದೂರಿದರು.

ಇವರಿಗೆ ಮದ್ದೂರು ತಾಲೂಕಿನಲ್ಲಿ ಶಾಸಕರಾದವರು ಯಾವ ಅಭಿವೃದ್ಧಿ ಕೆಲಸ ಮಾಡಿಲ್ಲ ನಾನೊಬ್ಬನೇ ಅಭಿವೃದ್ಧಿ ಮಾಡಿದ್ದೇನೆ ಎಂದು ಕೊಚ್ಚಿಕೊಳ್ಳುವ ಉದಯ್, ಎಚ್.ಕೆ.ವೀರಣ್ಣಗೌಡ, ಎಸ್.ಎಂ.ಕೃಷ್ಣ, ಮಂಚೇಗೌಡ, ಸಿದ್ದರಾಜು ಅವರಂಥ ಮಹನೀಯರು ಕ್ಷೇತ್ರದ ಶಾಸಕರಾಗಿ ಉತ್ತಮ ಕೆಲಸ ಮಾಡಿದ್ದಾರೆ. ನಾನೂ ಸಹ ಮೂರು ಬಾರಿ ಶಾಸಕರಾಗಿ ಕ್ಷೇತ್ರದಲ್ಲಿ ಕೆಲಸ ಮಾಡಿಲ್ಲವೇ?. ಇದಕ್ಕೆ ಕ್ಷೇತ್ರದ ಜನ ಉತ್ತರ ಕೊಡುತ್ತಾರೆ ಎಂದರು.

ಮದ್ದೂರು ನಗರಸಭೆ ಆಗಬಾರದು ಎಂದು ನಾವು ಎಂದೂ ಹೇಳಿಲ್ಲ. ಗೆಜ್ಜಲಗೆರೆ ಗ್ರಾಪಂನಲ್ಲಿ 1500 ಎಕರೆ ಕೃಷಿ ಜಮೀನಿದ್ದು, ರೈತರು ತೆಂಗು ಬೆಳೆಯುತ್ತಾ, ಜಾನುವಾರು ಸಾಕಿಕೊಂಡು ಹಾಲು ಪೂರೈಕೆ ಮಾಡುತ್ತಾ ನೆಮ್ಮದಿ ಜೀವನ ನಡೆಸುತ್ತಿದ್ದಾರೆ. ಗೆಜ್ಜಲಗೆರೆ ನಗರಸಭೆಯಾದರೆ ಇಲ್ಲಿನ ಕೃಷಿ ಭೂಮಿ ಭೂಮಾಫಿಯಾದವರಿಗೆ ಮಾರಾಟವಾದರೆ ಇಲ್ಲಿನ ಕೃಷಿಕರು ಪಾಡೇನು?, ಇಲ್ಲಿನ ಜನ ನಗರಸಭೆಗೆ ನಮ್ಮ ಗ್ರಾಮಗಳ ಸೇರ್ಪಡೆ ಬೇಡ ಎನ್ನುತ್ತಿದ್ದಾರೆ. ಇದಕ್ಕೆ ಶಾಸಕರು ಬೆಲೆ ಕೊಡಬೇಕು. ಜನಾಭಿಪ್ರಾಯದಂತೆ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ನಾನು ನಮ್ಮ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಪ್ರತಿಭಟನಾನಿರತರ ಸಮಸ್ಯೆ ಕೇಳಲು ಹೋಗಿದ್ದೇ ತಪ್ಪಾಯಿತೇ?, ನಾವು ಅಲ್ಲಿಗೆ ಹೋಗಿದ್ದಕ್ಕೆ ನಮ್ಮ ವಿರುದ್ಧ ಟೀಕಿಸುವ ಉದಯ್ ಜನರ ಅಭಿಲಾಷೆಯಂತೆ ನಡೆದುಕೊಳ್ಳಲಿ. ಈ ಹಿಂದೆ ಮದ್ದೂರನ್ನು ನಗರಸಭೆ ಮಾಡಲು ಕೆ.ಎಂ.ದೊಡ್ಡಿ ಹಾಗೂ ಬೆಸಗರಹಳ್ಳಿ ಗ್ರಾಮ ಪಂಚಾಯ್ತಿಯನ್ನು ಪಟ್ಟಣ ಪಂಚಾಯಿತಿ ಮಾಡಲು ಮುಂದಾಗಿದ್ದೆ. ಸ್ಥಳೀಯ ಆಡಳಿತ ವಿರೋಧ ಮಾಡಿದ ಪರಿಣಾಮ ಸ್ಥಳೀಯ ಜನರ ಅಭಿಪ್ರಾಯಕ್ಕೆ ಬೆಲೆ ಕೊಟ್ಟು ಕೆಲಸ ನಿಲ್ಲಿಸಿದ್ದೆ ಎಂದರು.

ಗೋಷ್ಠಿಯಲ್ಲಿ ಮನ್‌ಮುಲ್ ನಿರ್ದೇಶಕ ಬಿ.ಆರ್.ರಾಮಚಂದ್ರು, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಯುವ ಘಟಕದ ಜಿಲ್ಲಾಧ್ಯಕ್ಷ ಕಂಸಾಗರ ರವಿ, ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಸಾತನೂರು ಜಯರಾಂ, ಮುಖಂಡ ರಾಜಣ್ಣ ಇದ್ದರು.

ವಿಜೃಂಭಣೆಯ ಶ್ರೀ ಲಕ್ಷ್ಮೀದೇವಿ ಬಂಡಿ ಉತ್ಸವ


ಕೆಬೆಟ್ಟಹಳ್ಳಿ ಗ್ರಾಮದಲ್ಲಿ ಬುಧವಾರ ನಡೆದ ಶ್ರೀ ಲಕ್ಷ್ಮೀದೇವಿ ಜಾತ್ರೆಯಲ್ಲಿ ಬಂಡಿ ಉತ್ಸವವು ಸಂಭ್ರಮದಿಂದ ಜರುಗಿತು.

ಪಾಂಡವಪುರ: ತಾಲೂಕಿನ ಕೆಬೆಟ್ಟಹಳ್ಳಿ ಗ್ರಾಮದ ಪ್ರಸಿದ್ಧ ಶ್ರೀಲಕ್ಷ್ಮೀದೇವಿಯ 'ಬಂಡಿ ಉತ್ಸವ'ದ ಜಾತ್ರಾ ಮಹೋತ್ಸವವು ಬುಧವಾರ ಸಾವಿರಾರು ಭಕ್ತ ಸಮೂಹದಲ್ಲಿ ವಿಜೃಂಭಣೆಯಿಂದ ನಡೆಯಿತು.

ಪ್ರತಿ ವರ್ಷ ನಡೆಯುವ ಐತಿಹಾಸಿಕ ಶ್ರೀಲಕ್ಷ್ಮೀದೇವಿ ಬಂಡಿಉತ್ಸವದ ಜಾತ್ರಾ ಮಹೋತ್ಸವದಲ್ಲಿ ಹಾರೋಹಳ್ಳಿ-ಶಂಭೂವಿನಹಳ್ಳಿ, ಕೆ.ಬೆಟ್ಟಹಳ್ಳಿ, ಡಾಮಡಹಳ್ಳಿ, ಹುಲ್ಕೆರೆ ಗ್ರಾಮದ ಎತ್ತಿನ ಬಂಡಿಗಳ ಉತ್ಸವಗಳು ಪಾಲ್ಗೊಂಡು ಉತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ಬಂಡಿ ಉತ್ಸವ ನಡೆಯುವಂತಹ ಸಂದರ್ಭದಲ್ಲಿ ಭಾಗವಹಿಸಿದ್ದಂತಹ ನೂರಾರು ಭಕ್ತರು ಉತ್ಸವ ನಡೆಯುವ ಸಂದರ್ಭದಲ್ಲಿ ಉತ್ಸವದ ವೈಭವವನ್ನು ಕಂಡು ಚಪ್ಪಾಳೆ ತಟ್ಟಿ, ಶಿಳ್ಳೆ ಹೊಡೆದು ಸಂಭ್ರಮಿಸಿದರು.

ಕೆ.ಬೆಟ್ಟಹಳ್ಳಿಯ ಬಂಡಿಉತ್ಸವಕ್ಕೆ ಗ್ರಾಮ ಸೇರಿದಂತೆ ಅಕ್ಕ-ಪಕ್ಕದ ಗ್ರಾಮಗಳಾದ ಹಾರೋಹಳ್ಳಿ, ಶಂಭೂನಹಳ್ಳಿ, ಡಾಮಡಹಳ್ಳಿ, ಹುಲ್ಕೆರೆ, ಹುಲ್ಕೆರೆಕೊಪ್ಪಲು, ಶ್ಯಾದನಹಳ್ಳಿ, ಎಂ.ಬೆಟ್ಟಹಳ್ಳಿ, ಹಾಗನಹಳ್ಳಿ, ವಡ್ಡರಹಳ್ಳಿ, ಹರವು, ಅರಳಕುಪ್ಪೆ ಗ್ರಾಮಗಳು ಸೇರಿದಂತೆ ಸುಮಾರು 15ಕ್ಕೂ ಹೆಚ್ಚು ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ಜಾತ್ರೆಯನ್ನು ಯಶಸ್ವಿಗೊಳಿಸಿದರು.

ಹೂ ಹೊಂಬಾಳೆಯಿಂದ ಸಿದ್ಧಗೊಂಡಿದ್ದ ಐದು ಗ್ರಾಮಗಳ 'ಕನ್ನಂಕಾಡಿ' ಹಾಗೂ 'ಪೂಜೆ ಕುಣಿತ'ಗಳು ಮೆರವಣಿಗೆಯಲ್ಲಿ ಸಾಗಿದ್ದವು. 'ಈರಮಕ್ಕಳು' ಹಾಗೂ 'ದೇವರ ಗುಡ್ಡರು'ಗಳು ಚಕ್ರಬಳೆ ಬಡಿದು 'ಒಲಿದು ಬಾರೆ ಒಲಿದು ಬಾರೆ ತಾಯಿಲಕ್ಷ್ಮಿದೇವಿ ಒಲಿದು ಬಾರೆ......' ಎಂದು ಹಾಡಿ ಓಲೈಸಿದರು. ಇದರೊಂದಿಗೆ ಗೊರವರ ಕುಣಿತ, ತಮಟೆಯ ಮೇಳಗಳು ಮೇಳೈಸಿದವು. ಹರಕೆ ಹೊತ್ತ ಹೆಣ್ಣುಮಕ್ಕಳು ಬಾಯಿಬೀಗ ಹಾಕಿಸಿಕೊಂಡು ದೇವಸ್ಥಾನದ ಸುತ್ತ ಸುತ್ತಿ ಭಕ್ತಿ ಪ್ರದರ್ಶಿಸಿದರು.

ಪೂಜಾಕುಣಿತ, ಪೂಜಾ ವಿಧಾನಗಳು ಮುಗಿಯುತ್ತಿದ್ದಂತೆಯೇ ಬಂಡಿಯ ಮುಖ್ಯ ಭಾಗವಾದಲ್ಲಿ 'ಎತ್ತಿನ ಬಂಡಿ ಉತ್ಸವ' ವನ್ನು ದೇವರಗುಡ್ಡರು ಮುನ್ನಡೆಸಿದಾಗ ಯುವಕರು ಜೋರಾಗಿ ಸಿಳ್ಳೆ ಉಘೇ ಉಘೇ ಎಂದು ಕೂಗಿ ಜಯಘೋಷಿಸಿದರು. ಎತ್ತುಗಳು ಬಂಡಿಯನ್ನು ಹೊತ್ತು ಲಕ್ಷ್ಮೀದೇವಿ ದೇವಸ್ಥಾನದ ಸುತ್ತ ಮೂರು ಸುತ್ತಿದವು. ಬಂಡಿ ಉತ್ಸವದ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಮುನ್ನೆಚ್ಚರಿಕೆ ಕ್ರಮವಹಿಸಿದ್ದರು. ಸಹಸ್ರಾರು ಭಕ್ತರು ಮುನ್ನುಗ್ಗಿ ಬಂಡಿ ಉತ್ಸವವನ್ನು ನೋಡಲು ಮುಗಿಬಿದ್ದರು.

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಚಾಲನೆ

ಶ್ರೀರಂಗಪಟ್ಟಣ: ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ ಸುಮಾರು 5 ಕೋಟಿ ರೂ. ವೆಚ್ಚದ ವಿವಿಧ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧ್ಯಕ್ಷರೂ ಆದ ಶಾಸಕ ರಮೇಶ ಬಂಡಿಸಿದ್ದೇಗೌಡ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಶಾಸಕರು, "ಶ್ರೀರಂಗಪಟ್ಟಣವು ಪ್ರಮುಖ ಪ್ರವಾಸಿ ತಾಣವಾಗಿರುವುದರಿಂದ ಇದನ್ನು ಮಾದರಿ ನಗರವಾಗಿ ಅಭಿವೃದ್ಧಿಪಡಿಸಲು ಆದ್ಯತೆ ನೀಡಲಾಗುತ್ತಿದೆ. ಪುರಸಭೆ ವ್ಯಾಪ್ತಿಯಲ್ಲಿ ಒಳಚರಂಡಿ ಯೋಜನೆ ಹಾಗೂ ಮನೆ ಮನೆಗೆ ನೀರು ಸರಬರಾಜು ಮಾಡುವ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿವೆ. ಗುಂಬಜ್‌ನಿಂದ ಹಂಗರಹಳ್ಳಿ ಮಾರ್ಗವಾಗಿ ಶ್ರೀ ನಿಮಿಷಾಂಬ ದೇವಾಲಯ ಸಂಪರ್ಕಿಸುವ ರಸ್ತೆಗೂ ಅನುದಾನ ಬಿಡುಗಡೆಯಾಗಿದೆ. ಸರ್ಕಾರದ ಗ್ಯಾರಂಟಿ ಯೋಜನೆಗಳ ಜೊತೆಗೆ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ" ಎಂದರು.

ಶಾಸಕರು ಪಟ್ಟಣದ ವಿವಿಧೆಡೆ ಸಂಚರಿಸಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಗಂಜಾಂನ ವಾರ್ಡ್ ನಂ. 16ರಲ್ಲಿ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ 275ರಿಂದ ಗೋರಿ ಸರ್ಕಲ್‌ವರೆಗೆ ರಸ್ತೆ ಅಭಿವೃದ್ಧಿ, ವಾರ್ಡ್ ನಂ. 18ರಲ್ಲಿ ಕೆ.ಜಿ. ರಸ್ತೆಯಿಂದ ಗ್ಯಾಸ್ ಗೋಡಾನ್ ರಸ್ತೆ ಹಾಗೂ ಒಲೆ ಕುಯುವ ಬೀದಿಯ ಮಸೀದಿ ಬಳಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಚಾಲನೆ ನೀಡಲಾಯಿತು.



ತಹಶೀಲ್ದಾರ್ ಚೇತನ್ ಯಾದವ್, ಪುರಸಭೆ ಮುಖ್ಯಾಧಿಕಾರಿ ಎಂ.ರಾಜಣ್ಣ, ಮಾಜಿ ಅಧ್ಯಕ್ಷರಾದ ಎಂ.ಎಲ್. ದಿನೇಶ್, ಎಲ್. ನಾಗರಾಜು, ರಾಧಾ ಶ್ರೀಕಂಠು, ಮಾಜಿ ಉಪಾಧ್ಯಕ್ಷ ಚನ್ನಪ್ಪ ಇದ್ದರು.

ಸಾರ್ವಜನಿಕ ಆಸ್ಪತ್ರೆಗೆ ಮಹಿಳಾ ಆಯೋಗದ ಅಧ್ಯಕ್ಷೆ ಭೇಟಿ

ನಾಗಮಂಗಲ: ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಿದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮಿ ಚೌದರಿ ವೈದ್ಯರಿಂದ ಅಗತ್ಯ ಮಾಹಿತಿ ಪಡೆದರು.

ತಾಯಿ ಮಗುವಿನ ವಾರ್ಡ್ ಪರಿಶೀಲಿಸಿ ರೋಗಿಗಳ ಆರೋಗ್ಯ ವಿಚಾರಿಸಿ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು.

ಆಸ್ಪತ್ರೆಗೆ ದಿಢೀರ್ ಭೇಟಿ ನೀಡುತ್ತಿದ್ದಂತೆ ಪ್ರಭಾರ ತಾಲೂಕು ಆರೋಗ್ಯಾಧಿಕಾರಿ ಡಾ. ನಾರಾಯಣ ಹಾಗೂ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿಗಳು, ಸಿಬ್ಬಂದಿ ಹೂಗುಚ್ಚ ನೀಡಿ ಸ್ವಾಗತಿಸಿದರು. ವಿಷಯ ತಿಳಿಯುತ್ತಿದ್ದಂತೆ ಸಾರ್ವಜನಿಕರು ಆಸ್ಪತ್ರೆಯ ಅವ್ಯವಸ್ಥೆಗಳ ಕುರಿತು ದೂರುಗಳನ್ನು ಹೇಳಿದರು.

ಆಸ್ಪತ್ರೆಯಲ್ಲಿ ರೋಗಿಗಳಿಗೆ ಸರಿಯಾದ ಚಿಕಿತ್ಸೆ ಸೌಲಭ್ಯ ಸಿಗುತ್ತಿಲ್ಲ. ಜ್ವರ, ಕೆಮ್ಮು ಹಾಗೂ ಸಣ್ಣಪುಟ್ಟ ಕಾಯಿಲೆಗಳಿಗೂ ಮಾತ್ರೆ ಔಷಧಿ ನೀಡದೆ ವೈದ್ಯರು ಖಾಸಗಿ ಮೆಡಿಕಲ್ ಸ್ಟೋರ್‌ಗಳಿಗೆ ಚೀಟಿ ಬರೆಯುತ್ತಾರೆ ಎಂದು ಸ್ಥಳೀಯ ಜನರು ದೂರಿದಾಗ ಡಾ. ನಾಗಲಕ್ಷ್ಮಿ ಚೌದರಿ ಅವರು ಕನಿಷ್ಠ ಪ್ರಮಾಣದ ಔಷಧಿಗಳು ಕೂಡ ಆಸ್ಪತ್ರೆಯಲ್ಲಿ ಲಭ್ಯವಿಲ್ಲವೇ ಎಂದು ವೈದ್ಯರು ಹಾಗೂ ಫಾರ್ಮಸಿಸ್ಟ್‌ರವರನ್ನು ಪ್ರಶ್ನಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಡಾ. ಆದಿತ್ಯ ರೋಗಿಗಳಿಗೆ ಗುಣಮಟ್ಟದ ಸೇವೆ ನೀಡಲಾಗುತ್ತಿದೆ. ಆದರೆ ನಮ್ಮಲ್ಲಿ ಬೇಡಿಕೆ ಅನುಗುಣವಾಗಿ ಮಾತ್ರೆ, ಔಷಧಿಗಳು ಪೂರೈಕೆಯಾಗುತ್ತಿಲ್ಲ. ನಮಗೆ 258 ಬಗೆಯ ಮಾತ್ರೆ ಔಷಧಿಗಳ ಅಗತ್ಯವಿದ್ದು ಅದರಲ್ಲಿ 24 ಬಗೆಯ ಮಾತ್ರೆಗಳು ಔಷಧಿಗಳು ಮಾತ್ರ ಲಭ್ಯವಿದೆ ಹಾಗಾಗಿ ಲಭ್ಯವಿರುವ ಮಾತ್ರೆಗಳನ್ನು ಮಾತ್ರ ರೋಗಿಗಳಿಗೆ ನೀಡಲಾಗುತ್ತಿದೆ ಎಂದರು.



ನೀರಿನ ಟ್ಯಾಂಕ್ ಹಾಗೂ ಸಂಪುಗಳನ್ನು ಎಷ್ಟು ವರ್ಷವಾಗಿದೆ ಸ್ವಚ್ಛಗೊಳಿಸಿ, ಇಷ್ಟೊಂದು ಗಲೀಜು ತುಂಬಿರುವ ನೀರನ್ನು ಬಳಸುತ್ತಿದ್ದೀರಾ ಎಂದು ಪ್ರಶ್ನಿಸಿದರು. ವಾರ್ಡ್‌ಗಳಲ್ಲಿರುವ ಶೌಚಾಲಯ ಸ್ವಚ್ಛಗೊಳಿಸಬೇಕು ರೋಗಿಗಳಿಗೆ ನೀಡುತ್ತಿರುವ ವಿವಿಧ ಬಗ್ಗೆ ತಪಾಸಣೆ, ಸಮಗ್ರ ವರದಿ ನೀಡುವಂತೆ ಸೂಚಿಸಿದರು.

ಒಂದನೇ ಪುಟದಿಂದ

ಬರ ಬಿಸಿಲು, ಹುಷಾರ್...!?

ಎದುರಾದ ಸಂದರ್ಭ ದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳನ್ನು ತಕ್ಷಣದಿಂದಲೇ ಕೈಗೆತ್ತಿ ಕೊಂಡರೆ ಮುಂದೆ ಎದುರಾಗಬಹುದಾದ ಸಮಸ್ಯೆಗಳನ್ನು ನಿವಾರಿಸಬಹುದಾಗಿದೆ ಎಂದು ತಿಳಿಸಿದೆ. ರಾಜ್ಯದಲ್ಲಿ ಬೇಸಿಗೆಯ ತೀವ್ರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದಂತೆ ಗ್ರಾಮೀಣ ಪ್ರದೇಶಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಕೊರತೆ ಭೀತಿ ಹೆಚ್ಚಾಗಿದೆ. ಸದ್ಯ 36 ತಾಲೂಕುಗಳ 102 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದ್ದು ಇದರಲ್ಲಿ 23 ಗ್ರಾಮಗಳಿಗೆ ಟ್ಯಾಂಕರ್‌ನಲ್ಲಿ ನೀರು ಪೂರೈಕೆ ಮಾಡಲಾಗುತ್ತಿದೆ. ಬೇಸಿಗೆ ಪ್ರಾರಂಭದಲ್ಲೇ ಈ ಸ್ಥಿತಿ ಎದುರಾಗಿದ್ದರೂ ಸರ್ಕಾರ ಇನ್ನೂ ಯಾವುದೇ ಮುನ್ನೆಚ್ಚರಿಕಾ ಸಭೆಗಳನ್ನು ನಡೆಸದೆ, ಮುಂಗಡಪತ್ರ ತಯಾರಿಕೆಯಲ್ಲಿ ತಲ್ಲೀನವಾಗಿದೆ.

ಪಂಪ್‌ಸೆಟ್‌ಗಳ ವಿದ್ಯುತ್ ದರ ಕಡಿತ

ವ್ಯಾಪ್ತಿಯಲ್ಲಿ ಕಡಿಮೆ ವಿದ್ಯುತ್ ದರವನ್ನು ಕೃಷಿ ಪಂಪ್ ಸೆಟ್‌ಗಳಿಗೆ ನಿಗದಿ ಮಾಡುವ ಮೂಲಕ ರಾಜ್ಯ ಸರ್ಕಾರ ಕೃಷಿ ಪಂಪ್ ಸೆಟ್ ವಿದ್ಯುತ್ ಗೆ ನೀಡುವ ಸಬ್ಸಿಡಿ ಪ್ರಮಾಣ ಕಡಿಮೆಯಾಗುವಂತೆ ಚಾಣಾಕ್ಷ ತಂತ್ರ ಅನುಸರಿಸಿದೆ.

ವಾಣಿಜ್ಯ, ಕೈಗಾರಿಕಾ ಬಳಕೆದಾರರಿಗೆ ದರ ಏರಿಕೆ ಶಾಕ್: ಕೆಇಆರ್‌ಸಿ ಆಯ್ದ ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ವಿದ್ಯುತ್ ದರವನ್ನು ಪ್ರತಿ ಯೂನಿಟ್‌ಗೆ 10 ಪೈಸೆಯಿಂದ ಗರಿಷ್ಠ 95 ಪೈಸೆಯವರೆಗೆ ಹೆಚ್ಚಿಸಿದೆ. ಪರಿಷ್ಕೃತ ಸುಂಕಗಳು ಏಪ್ರಿಲ್ 2025 ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಗೆ ಬರಲಿದೆ.

ಆಯೋಗದ ಆದೇಶದ ಪ್ರಕಾರ, ಪರಿಷ್ಕೃತ ದರಗಳು: ಪ್ರತಿ ಕಿಲೋವ್ಯಾಟ್‌ಗೆ ರೂ. 235 ಸ್ಥಿರ ಶುಲ್ಕದೊಂದಿಗೆ ಎಲ್‌ಟಿ–3ಎ ವಾಣಿಜ್ಯ ಸುಂಕಗಳನ್ನು ಪ್ರತಿ ಯೂನಿಟ್‌ಗೆ ರೂ. 7 ರಿಂದ ರೂ. 7.10 ಕ್ಕೆ ಹೆಚ್ಚಿಸಲಾಗಿದೆ. ಎಲ್‌ಟಿ–5 ಕೈಗಾರಿಕಾ ಸುಂಕಗಳು ಪ್ರತಿ ಯೂನಿಟ್‌ಗೆ ರೂ. 4.50 ರಿಂದ ರೂ. 5.20ಕ್ಕೆ ಏರಿದ್ದು, ಪ್ರತಿ ಅಶ್ವಶಕ್ತಿಗೆ ರೂ. 165 ಸ್ಥಿರ ಶುಲ್ಕವಾಗಿದೆ.

ಹೆಚ್‌ಟಿ–2ಎ ಕೈಗಾರಿಕಾ ಗ್ರಾಹಕರು ಈಗ ಪ್ರತಿ ಯೂನಿಟ್‌ಗೆ 6.70 ರೂ. ಪಾವತಿಸಲಿದ್ದಾರೆ, ಇದು ಪ್ರತಿ ಕೆವಿಎಗೆ 365 ರೂ. ಡಿಮ್ಯಾಂಡ್ ಶುಲ್ಕ ವಿಧಿಸಲಾಗುತ್ತದೆ. ವಾಣಿಜ್ಯ ಸಂಕೀರ್ಣಗಳು, ಚಿತ್ರಮಂದಿರಗಳು ಮತ್ತು ಹೋಟೆಲ್‌ಗಳಂತಹ ಹೆಚ್‌ಟಿ–2ಬಿ ವಾಣಿಜ್ಯ ಗ್ರಾಹಕರು ಪ್ರತಿ ಯೂನಿಟ್‌ಗೆ ರೂ. 5.95 ರಿಂದ ರೂ. 6.90ಕ್ಕೆ ತೀವ್ರ ಏರಿಕೆ ಕಾಣಲಿದ್ದಾರೆ ಮತ್ತು ಪ್ರತಿ ಕೆವಿಎಗೆ ರೂ. 390 ಡಿಮ್ಯಾಂಡ್ ಶುಲ್ಕ ವಿಧಿಸಲಾಗುತ್ತದೆ.

ನಿತೀಶ್‌ಕುಮಾರ್ ರಾಜೀನಾಮೆ?

ಸುಮಾರು ಎರಡು ದಶಕಗಳ ಕಾಲ ಅವರು ಹೊಂದಿದ್ದ ಗೃಹ ಇಲಾಖೆಯನ್ನು ಸಹ ಅವರು ಹಸ್ತಾಂತರಿಸಬೇಕಾಯಿತು. ಗೃಹ ಇಲಾಖೆಯನ್ನು ತ್ಯಜಿಸುವುದರೊಂದಿಗೆ, ಬಿಜೆಪಿ ಬಿಹಾರದಲ್ಲಿ ಪ್ರಭಾವ ಬೀರುತ್ತದೆ ಎಂಬುದು ಸ್ಪಷ್ಟವಾಯಿತು. ನವೆಂಬರ್ 2005ರಲ್ಲಿ ನಿತೀಶ್ ಕುಮಾರ್ ಗೃಹ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡರು. ಜೆಡಿಯು ಚುನಾವಣಾ ಸೋಲಿನ ನಂತರ ಅವರು ರಾಜೀನಾಮೆ ನೀಡಿದ ಮೇ 2014 ಮತ್ತು ಫೆಬ್ರವರಿ 2015 ರ ನಡುವೆ ಮಾತ್ರ ಅವರು ಇಲಾಖೆಯ ಉಸ್ತುವಾರಿ ವಹಿಸಿಕೊಂಡಿದ್ದರು.

ಮೊಜ್ತಬಾ ಮೇಲೆ ಇಸ್ರೇಲ್ ಭೀಕರ ದಾಳಿ!

ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್, ಎಕ್ಸ್–ಪೋಸ್ಟ್ ಮೂಲಕ ಕಠಿಣ ಎಚ್ಚರಿಕೆ ನೀಡಿದರು. ಸರ್ವೋಚ್ಚ ನಾಯಕನ ಸ್ಥಾನಕ್ಕೆ ಆಯ್ಕೆಯಾದ ವ್ಯಕ್ತಿ 'ಹತ್ಯೆಯೇ ನಮ್ಮ ಗುರಿ' ಎಂದು ಹೇಳಿದ್ದಾರೆ.

ಇಸ್ರೇಲ್ ಕಾಟ್ಜ್ ಎಕ್ಸ್‌ನಲ್ಲಿ ಹೇಳಿಕೆ ನೀಡಿದ್ದು, ಇಸ್ರೇಲ್ ಅನ್ನು ನಾಶಮಾಡಲು ಪ್ರಯತ್ನಿಸುವುದು, ಅಮೆರಿಕ ಮತ್ತು ಇತರ ದೇಶಗಳಿಗೆ ಬೆದರಿಕೆ ಒಡ್ಡುವ ಅಥವಾ ಇರಾನಿನ ಜನರನ್ನು ದಮನಿಸುವ ಕಾರ್ಯವನ್ನು ಮುಂದುವರಿಸುವ ಇರಾನ್‌ನ ಭಯೋತ್ಪಾದಕ ಸರ್ಕಾರವು ಯಾರನ್ನೇ ತನ್ನ ಮುಂದಿನ ಸರ್ವೋಚ್ಚ ನಾಯಕನನ್ನಾಗಿ ನೇಮಿಸಿದರೂ, ಅವರು ನಿರ್ಮೂಲನೆಗೆ ಗುರಿಯಾಗುತ್ತಾರೆ ಎಂದು ಅವರು ಬರೆದಿದ್ದಾರೆ. ಅವನ ಹೆಸರು ಏನೇ ಇರಲಿ ಅಥವಾ ಅವನು ಎಲ್ಲಿಯೇ ಅಡಗಿರಲಿ, ಅವನನ್ನು ಹೊಡೆದು ಉರುಳಿಸುತ್ತೇವೆ ಎಂದಿದ್ದಾರೆ.

ಲಯನ್ಸ್ ರೋರ್ ಎಂಬ ಮಿಲಿಟರಿ ಕಾರ್ಯಾಚರಣೆಯ ಭಾಗವಾಗಿ ಯಾವುದೇ ಅಗತ್ಯ ವಿಧಾನಗಳನ್ನು ಬಳಸಿಕೊಂಡು ಕ್ರಮ ಕೈಗೊಳ್ಳಲು ಎಲ್ಲ ರೀತಿಯಿಂದಲೂ ಸಿದ್ಧತೆ ಮತ್ತು ಕಾರ್ಯನಿರ್ವಹಿಸುವಂತೆ ಪ್ರಧಾನ ಮಂತ್ರಿ ಮತ್ತು ನಾನು ಐಡಿಎಫ್‌ಗೆ (ಇಸ್ರೇಲ್ ರಕ್ಷಣಾ ಪಡೆಗಳು) ಸೂಚನೆ ನೀಡಿದ್ದೇವೆ ಎಂದಿದ್ದಾರೆ. ಮುಂದುವರಿದು, ಇರಾನ್ ಸರ್ಕಾರದ ಮಿಲಿಟರಿ ಮತ್ತು ಕಾರ್ಯತಂತ್ರದ ಸಾಮರ್ಥ್ಯಗಳನ್ನು ದುರ್ಬಲಗೊಳಿಸುವುದು ಅಥವಾ ನಾಶಮಾಡಲು, ಇರಾನಿನ ಜನರು ತಮ್ಮ ಸದ್ಯದ ಸರ್ಕಾರವನ್ನು ಉರುಳಿಸಲು ಮತ್ತು ಅದನ್ನು ಬದಲಾಯಿಸಲು ಅನುವು ಮಾಡಿಕೊಡುವ ಪರಿಸ್ಥಿತಿಗಳನ್ನು ಸೃಷ್ಟಿಸಲು ನಾವು ಅಮೆರಿಕನ್ ಪಾಲುದಾರರೊಂದಿಗೆ ಪೂರ್ಣ ಬಲದಿಂದ ಕಾರ್ಯನಿರ್ವಹಿಸುವುದನ್ನು ಮುಂದುವರಿಸುತ್ತೇವೆ ಎಂದು ತಿಳಿಸಿದ್ದಾರೆ.

10 ದಿನಕ್ಕಷ್ಟೇ ಮಿಸೈಲ್‌ಗಳ ಸ್ಟಾಕ್: ಪೆಂಟಗಾನ್ ಎಚ್ಚರಿಕೆ

ಶಾಶ್ವತವಾಗಿ ಹೋರಾಡಲು ಸಹಾಯ ಮಾಡುತ್ತದೆ ಎಂದು ಬರೆದಿದ್ದಾರೆ. ಯುನೈಟೆಡ್ ಸ್ಟೇಟ್ಸ್ ಯುದ್ಧ ಸಾಮಗ್ರಿಗಳ ಸ್ಟಾಕ್‌ಪೈಲ್‌ಗಳು, ಮಧ್ಯಮ ಮತ್ತು ಉನ್ನತ ಮಧ್ಯಮ ದರ್ಜೆಯಲ್ಲಿ, ಎಂದಿಗೂ ಹೆಚ್ಚಿನ ಅಥವಾ ಉತ್ತಮವಾಗಿಲ್ಲ.

ಇಂದು ನನಗೆ ಹೇಳಿದಂತೆ, ನಮಗೆ ಈ ಶಸ್ತ್ರಾಸ್ತ್ರಗಳ ವಾಸ್ತವಿಕವಾಗಿ ಅನಿಯಮಿತ ಪೂರೈಕೆ ಇದೆ. ಯುದ್ಧಗಳನ್ನು 'ಶಾಶ್ವತವಾಗಿ' ಹೋರಾಡಬಹುದು ಮತ್ತು ಈ ಸರಬರಾಜುಗಳನ್ನು ಮಾತ್ರ ಬಳಸಿಕೊಂಡು ಬಹಳ ಯಶಸ್ವಿಯಾಗಿ ಹೋರಾಡಬಹುದು ಅವರು ಬರೆದಿದ್ದಾರೆ. ಇರಾನ್ ಮೇಲಿನ ದಾಳಿಯನ್ನು ನಾಲ್ಕರಿಂದ ಐದು ವಾರಗಳವರೆಗೆ ಮುಂದುವರಿಸಲು ಯೋಜಿಸಲಾಗಿದೆ ಎಂದು ಟ್ರಂಪ್ ಸೋಮವಾರ ಹೇಳಿದ್ದರೂ, ಅದು ಅದಕ್ಕಿಂತ ಹೆಚ್ಚು ಕಾಲ ಮುಂದುವರಿಯಬಹುದು ಎಂದು ಅವರು ಹೇಳಿದರು.

ಅಮೆರಿಕದ ಯಾವೆಲ್ಲಾ ಯುದ್ಧ ಸಾಮಗ್ರಿಗಳ ದಾಸ್ತಾನು ಕಡಿಮೆಯಾಗಿದೆ: ಅಲ್ ಜಜೀರಾ ವರದಿ ಮಾಡಿರುವಂತೆ ಅಮೆರಿಕದ ಬತ್ತಳಿಕೆಯಲ್ಲಿ ಲಕ್ಷಾಂತರ ಯುದ್ಧ ಸಾಮಗ್ರಿಗಳು ಇವೆಯಾದರೂ ಈ ಪೈಕಿ ಹಾಲಿ ನಡೆಯುತ್ತಿರುವ ಯುದ್ಧದಿಂದಾಗಿ ಪ್ರಮುಖವಾಗಿ ಇಂಟರ್‌ಸೆಪ್ಟರ್ ಕ್ಷಿಪಣಿಗಳ ಸಂಖ್ಯೆ ಕಡಿಮೆಯಾಗಿದೆ ಎಂದು ವರದಿಯಾಗಿದೆ.

ಇದಲ್ಲದೆ ಅಮೆರಿಕ ತನ್ನ ಸುಧಾರಿತ ನಿಖರ ಯುದ್ಧಸಾಮಗ್ರಿಗಳು ಮತ್ತು THAAD ವ್ಯವಸ್ಥೆ ಸೇರಿದಂತೆ ಪ್ರಮುಖ ಪ್ರತಿಬಂಧಕಗಳ ಪೂರೈಕೆಯನ್ನು ಖಾಲಿ ಮಾಡುವ ಅಪಾಯವಿದೆ.

ಜಂಟಿ ನೇರ ದಾಳಿ ಯುದ್ಧಸಾಮಗ್ರಿಗಳು– ಸಾಮಾನ್ಯ ಮಾರ್ಗದರ್ಶಿಸದ ಬಾಂಬ್‌ಗಳನ್ನು ಹೆಚ್ಚು ನಿಖರವಾದ 'ಸ್ಮಾರ್ಟ್' ಆಯುಧಗಳಾಗಿ ಪರಿವರ್ತಿಸುವ GPS–ಮಾರ್ಗದರ್ಶಿತ ಕಿಟ್‌ಗಳು ಹೆಚ್ಚು ಪರಿಣಾಮ ಬೀರುತ್ತವೆ. ಈ ಅತ್ಯಾಧುನಿಕ ಕ್ಷಿಪಣಿ ಗುರಾಣಿಗಳನ್ನು ಮುಖ್ಯವಾಗಿ ರಷ್ಯಾ, ಚೀನಾ ಅಥವಾ ಉತ್ತರ ಕೊರಿಯಾದಂತಹ ಪ್ರಮುಖ ಶಕ್ತಿಗಳಿಂದ ಸಣ್ಣ, ತೀವ್ರವಾದ ದಾಳಿಗಳನ್ನು ಎದುರಿಸಲು ನಿರ್ಮಿಸಲಾಗಿದೆಯೇ ಹೊರತು ಈಗ ಎದುರಿಸುತ್ತಿರುವ ನಿರಂತರ, ಕಡಿಮೆ ವೆಚ್ಚದ ರಾಕೆಟ್ ದಾಳಿಗಳನ್ನು ಎದುರಿಸಲು ಅಲ್ಲ ಎಂದು ಅಮೆರಿಕದ ರಕ್ಷಣಾ ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ.

ಕಳೆದ ವರ್ಷದ ಇರಾನ್‌ನೊಂದಿಗಿನ ಯುದ್ಧದಲ್ಲಿ, ಅಮೆರಿಕವು ತನ್ನ THAAD ಪ್ರತಿಬಂಧಕಗಳಲ್ಲಿ 25 ಪ್ರತಿಶತವನ್ನು ಬಳಸಿತ್ತು, ಅವುಗಳಲ್ಲಿ 150 ಅನ್ನು ಇರಾನಿನ ಕ್ಷಿಪಣಿಗಳನ್ನು ಪ್ರತಿಬಂಧಿಸಲು ಬಳಸಿತ್ತು. ಕಳೆದ ವರ್ಷದ ಯುದ್ಧದ ಸಮಯದಲ್ಲಿ ಅಮೆರಿಕವು ಹಡಗಿನಲ್ಲಿ ಸಾಗಿಸುವ ಪ್ರತಿಬಂಧಕಗಳ ಕೊರತೆಯನ್ನು ಅನುಭವಿಸಿತ್ತು ಎಂದು ಮಾಧ್ಯಮಗಳು ವರದಿ ಮಾಡಿದ್ದವು.

ಅಮೆರಿಕಕ್ಕಿಂತ ಇರಾನ್ ಬಳಿಯೇ ಹೆಚ್ಚು ಕ್ಷಿಪಣಿಗಳಿವೆ: ಸೋಮವಾರ, ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ವರದಿಗಾರರೊಂದಿಗೆ ಮಾತನಾಡುತ್ತಾ, ಇರಾನ್‌ನ ಉತ್ಪಾದನಾ ಸಾಮರ್ಥ್ಯವು ಅಮೆರಿಕ ಮತ್ತು ಅದರ ಪಾಲುದಾರರು ರಕ್ಷಣಾತ್ಮಕ ಪ್ರತಿಬಂಧಕಗಳಲ್ಲಿ ತಯಾರಿಸಬಹುದಾದ ಸಾಮರ್ಥ್ಯಕ್ಕಿಂತ ಹೆಚ್ಚಿನದಾಗಿದೆ ಎಂದು ಹೇಳಿದ್ದಾರೆ.

ಕೆಲವು ಅಂದಾಜಿನ ಪ್ರಕಾರ, ಇರಾನ್ ತಿಂಗಳಿಗೆ 100 ಕ್ಕೂ ಹೆಚ್ಚು ಕ್ಷಿಪಣಿಗಳನ್ನು ಉತ್ಪಾದಿಸುತ್ತಿದೆ. ಅದನ್ನು ತಿಂಗಳಿಗೆ ನಿರ್ಮಿಸಬಹುದಾದ ಆರು ಅಥವಾ ಏಳು ಪ್ರತಿಬಂಧಕಗಳಿಗೆ ಹೋಲಿಸಿ ಎಂದು ರುಬಿಯೊ ಹೇಳಿದರು. ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುವ ಅಂಶ ಎಂದರೆ ಹಡಗು–ಉಡಾವಣೆ ಮಾಡಬಹುದಾದ ಸ್ಟ್ಯಾಂಡರ್ಡ್ ಕ್ಷಿಪಣಿ–3 (SM–3), ಮುಂದುವರಿದ ಬ್ಯಾಲಿಸ್ಟಿಕ್ ವಿರೋಧಿ ಕ್ಷಿಪಣಿ ಪ್ರತಿಬಂಧಕಗಳ ಉತ್ಪಾದನೆ ದರ ಅಮೆರಿಕದಲ್ಲಿ ಕಡಿಮೆ ಇದೆ.

ಯೆಮೆನ್‌ನ ಹೌತಿ ಉಗ್ರಗಾಮಿಗಳ ವಿರುದ್ಧ ಪುನರಾವರ್ತಿತ ಕಾರ್ಯಾಚರಣೆಗಳು ಮತ್ತು ಇರಾನ್‌ನೊಂದಿಗಿನ ಹಿಂದಿನ ಮುಖಾಮುಖಿಗಳಿಂದಾಗಿ ಈ ಪ್ರಮಾಣ ಬಳಕೆಗಿಂತ ಉತ್ಪಾದನೆ ಕಡಿಮೆಯಾಗಿದೆ ಎಂದು ವರದಿ ಉಲ್ಲೇಖಿಸಿದೆ.

ಇಸ್ರೇಲ್ ಮತ್ತು ಉಕ್ರೇನ್‌ನಂತಹ ಮಿತ್ರರಾಷ್ಟ್ರಗಳಿಗೆ ಮಿಲಿಟರಿ ನೆರವಿನ ನಂತರ ಅಮೆರಿಕದ ಶಸ್ತ್ರಾಸ್ತ್ರಗಳು ಮತ್ತು ಯುದ್ಧಸಾಮಗ್ರಿ ನಿಕ್ಷೇಪಗಳು, ಕ್ಷಿಪಣಿ ರಕ್ಷಣಾ ವ್ಯವಸ್ಥೆಗಳಿಗೆ ಪ್ರಮುಖ ದಾಸ್ತಾನು ಸೇರಿದಂತೆ, ಈಗ ತೀವ್ರವಾಗಿ ಖಾಲಿಯಾಗಿವೆ ಎಂದು ವರದಿ ಬಹಿರಂಗಪಡಿಸುತ್ತದೆ.

ಕಚ್ಚಾ ಸಾಮಗ್ರಿ ವಶಕ್ಕೆ

ರಾಜೇಂದ್ರ ಪ್ರಸಾದ್ ವಿರುದ್ಧ ಸಿಸಿಬಿ ಪೊಲೀಸರು ನೀಡಿದ ದೂರಿನನ್ವಯ ವಿವಿ ಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 50 ಸಾವಿರ ರೂ. ಬೆಲೆಬಾಳುವ ಹುಕ್ಕಾ ಪಾಟ್‌ಗಳು, ಕಚ್ಚಾ ವಸ್ತುಗಳು, ಡಿವಿಆರ್ ಸಾಮಗ್ರಿಗಳನ್ನು ವಶಪಡಿಸಿಕೊಂಡಿದ್ದು, ಎಸ್.ಸಂಜಯ್ (25) ಹಾಗೂ ದಾಳಿ ವೇಳೆ ಹುಕ್ಕಾ ಸೇವನೆ ಮಾಡುತ್ತಿದ್ದ ಇಬ್ಬರು ಯುವಕರನ್ನು ವಶಕ್ಕೆ ಪಡೆದಿದ್ದ ಪೊಲೀಸರು, ವಿಚಾರಣೆಗೊಳಪಡಿಸಿದ್ದರು. ರಾಜೇಂದ್ರ ಪ್ರಸಾದ್‌ಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಸರ್ಕಾರ ನಿಷೇಧಿಸಿದ್ದರೂ ರಾಜೇಂದ್ರ ಪ್ರಸಾದ್ ಹಾಗೂ ಸಂಜಯ್ ಕದ್ದುಮುಚ್ಚಿ ಹುಕ್ಕಾ ಬಾರ್ ನಡೆಸುತ್ತಿದ್ದರು. ನಿಷೇಧಕ್ಕೂ ಮುನ್ನ ಹುಕ್ಕಾ ಬಾರ್‌ಗಾಗಿ ಕೆಫೆ ಬೈಟ್ ಹೆಸರಿನಲ್ಲಿ ಪರವಾನಗಿ ಪಡೆದಿದ್ದರು. ಹೊರಗೆ ಬಾಗಿಲಿಗೆ ಸದಾ ಬೀಗ ಹಾಕಿದಂತಿದ್ದು, ಒಳಗಡೆ ಬರೀ ಕಾಲೇಜು ವಿದ್ಯಾರ್ಥಿಗಳಿಗೆ ಹುಕ್ಕಾ ಸೇವನೆಗೆ ಅವಕಾಶ ಮಾಡಿಕೊಡಲಾಗುತ್ತಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಉಪ ಆಯುಕ ಸುಂದರರಾಜ್ ಹಾಗೂ ಸಿಸಿಬಿ ಘಟಕದ ಎಸಿಪಿ ಮಹಮ್ಮದ್ ಶರೀಫ್ ರಾಹುತರ್ ಮಾರ್ಗ ದರ್ಶನದಲ್ಲಿ ಸಿಸಿಬಿ 2 ಘಟಕದ ಪಿಎಸ್‌ಐ ಕೆ.ಲೇಪಾಕ್ಷ ಹಾಗೂ ಸಿಬ್ಬಂದಿ ಈ ದಾಳಿ ನಡೆಸಿದರು.

ಅಮೆರಿಕ ದಾಳಿ: 87 ಮಂದಿ ಸಾವು



ಟಾರ್ಪಿಡೊ ಮುಳುಗಿಸಿದೆ ಎಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ವಾಷಿಂಗ್ಟನ್‌ನಲ್ಲಿ ತಿಳಿಸಿದ್ದಾರೆ. ಪೀಟ್ ಹೆಗ್ಸೆತ್ ಅವರು ಈ ದಾಳಿಯನ್ನು "ಮೌನ ಸಾವು" ಎಂದು ಕರೆದಿದ್ದು, ಎರಡನೇ ಮಹಾಯುದ್ಧದ ನಂತರ ಅಮೆರಿಕವು ಟಾರ್ಪಿಡೊದಿಂದ ಶತ್ರು ಹಡಗನ್ನು ಮುಳುಗಿಸಿದ ಮೊದಲ ಘಟನೆ ಇದಾಗಿದೆ. 'ಆ ಯುದ್ಧದಂತೆ ಈ ಯುದ್ಧ' "ನಾವು ಗೆಲ್ಲಲು ಹೋರಾಡುತ್ತಿದ್ದೇವೆ" ಎಂದು ಹೇಳಿದ್ದಾರೆ.

ಶ್ರೀಲಂಕಾ ನೌಕಾಪಡೆಯು ದಕ್ಷಿಣ ನಗರದ ಗಾಲೆ ಬಳಿ ನೀರಿನಿಂದ 87 ನಾವಿಕರ ಶವಗಳನ್ನು ಹೊರ ತೆಗೆದಿದೆ. ಆದರೆ 61 ಮಂದಿ ಇನ್ನೂ ಕಾಣೆಯಾಗಿದ್ದಾರೆ ಎಂದು ಪೊಲೀಸರು ಮತ್ತು ರಕ್ಷಣಾ ಅಧಿಕಾರಿಗಳು ತಿಳಿಸಿದ್ದಾರೆ.

ನಾಳೆ ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ ವಿಶೇಷ ವಿಚಾರ ಸಂಕಿರಣ

ಮೈಸೂರು, ಮಾ.4– ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ನ್ಯಾಷನಲ್ ಇನ್ಸ್‌ಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಡೈಮಂಡ್‌ಜೂಬ್ಲಿ ಸಭಾಂಗಣದಲ್ಲಿ ಮಾ.6ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಬೆಂಗಳೂರಿನ ಚಾಣಕ್ಯ ವಿಶ್ವವಿದ್ಯಾಲಯದ ಸುಸ್ಥಿರತ ಕೇಂದ್ರ ಹಾಗೂ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘಗಳ ಒಕ್ಕೂಟದ ಸಹಯೋಗದೊಂದಿಗೆ ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ ಸಂಬಂಧ ಒಂದು ದಿನದ ವಿಶೇಷ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ವಿಶೇಷವಾಗಿ ಮಂಡಿಸಲಾಗುವ ವಿಷಯಗಳೆಂದರೆ ಮೈಸೂರಿನ ಸುಸ್ಥಿರ ನಗರಾಭಿವೃದ್ಧಿ ತಂತ್ರ ಗಳು, ನಗರ ಯೋಜನೆ, ಮೂಲ ಸೌಕರ್ಯ ಗಳ ನಿರ್ವಹಣೆ, ಆಧುನಿಕ ತಂತ್ರಜ್ಞಾನಗಳನ್ನು ಸಂಯೋಜಿಸುವ ವಿಚಾರ, ಗ್ರೇಟರ್ ಮೈಸೂರಿನತ್ತ ಪರಿವರ್ತನೆಗೆ ರಚನಾತ್ಮಕ ಯೋಜನೆಗಳು, ಸ್ಮಾರ್ಟ್ ಮೊಬಿಲಿಟಿ ಪರಿಹಾರಗಳು, ಜಲಸಂಪನ್ಮೂಲ ನಿರ್ವಹಣೆ, ಪರಿಸರ ಸಂರಕ್ಷಣೆ, ಸ್ಥಿತಿಸ್ಥಾಪಕ ನಗರ ವ್ಯವಸ್ಥೆಗಳ ಕುರಿತು ಶಿಕ್ಷಣ ತಜ್ಞರು, ವಿಷಯ ಸಂಪನ್ಮೂಲ ವ್ಯಕ್ತಿಗಳು, ಖ್ಯಾತ ಉದ್ಯಮಿಗಳು, ಪಾಲುದಾರರು ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಲಿದ್ದಾರೆ. ಮೈಸೂರು ನಗರದ ಭವಿಷ್ಯದ ಅಭಿವೃದ್ಧಿಗಾಗಿ ಸಾಮೂಹಿಕವಾಗಿ ಸುಸ್ಥಿರ ಮಾರ್ಗಸೂಚಿಯನ್ನು ರೂಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಜಿಲ್ಲಾಧಿಕಾರಿಗಳಾದ ಲಕ್ಷ್ಮಿಕಾಂತರೆಡ್ಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಮುಖ್ಯ ಅತಿಥಿಗಳಾಗಿ ರಂಗಭೂಮಿ ನಟರು, ನಿರ್ದೇಶಕರು ಆದ ಪ್ರಕಾಶ್ ಬೆಳವಾಡಿ, ಕರ್ನಾಟಕ ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಮುಖ್ಯಸ್ಥರಾದ ಶಾಜೂ ಮಂಗಳಂ, ಟ್ರೈಟಾನ್ ವ್ಯಾಲ್ಯೂಸ್‌ನ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಆದಿತ್ಯ ಎಂ.ಗೋಕರ್ಣ, ಎನ್‌ಐಇ ಸಂಸ್ಥೆಯ ಅಧ್ಯಕ್ಷ ಡಾ.ಎಂ.ಎಸ್. ರಂಗನಾಥ್, ಗೌರವ ಕಾರ್ಯದರ್ಶಿ ಉದಯಶಂಕರ್ ಎಸ್.ಬಿ, ಕಾಲೇಜಿನ ಪ್ರಾಂಶುಪಾಲರಾದ ಡಾ.ಬಿ.ಎಸ್. ನಾಗೇಂದ್ರ ಪರಶರ್, ಸಂಚಾಲಕರಾದ ಡಾ. ಸಂಜಿತ್ ಎಸ್.ಅಂಚನ್ ಭಾಗವಹಿಸಲಿದ್ದಾರೆ.

ವಿವಿಧ ವಿಷಯಗಳನ್ನು ಕುರಿತು ಸರ್ಕಾರಿ ಇಲಾಖೆಯ ಅಧಿಕಾರಿಗಳು, ನಗರ ಯೋಜನಾ ಪ್ರಾಧಿಕಾರದ ವಿಷಯ ತಜ್ಞರು, ಕೈಗಾರಿಕಾ ಮತ್ತು ಶೈಕ್ಷಣಿಕ ಕ್ಷೇತ್ರದ ಪ್ರಮುಖರು ಭಾಷಣಕಾರರಾಗಿ ಮಾಜಿ ಇಸ್ರೋ ವಿಜ್ಞಾನಿ ಹಾಗೂ ನಿರ್ದೇಶಕರಾದ ಪ್ರೊ.ಪಿ.ಜಿ.ದಿವಾಕರ್, ಡಾ.ಚಿನ್ಮಯ್‌ಹೆಗ್ಡೆ, ಪ್ರಭಾತ್ ಯಾದವ್, ಮೈಸೂರಿನ ಗ್ರಾಹಕ ಪರಿಷತ್‌ನ ಮುಖ್ಯಸ್ಥ ರಾದ ಡಾ.ಭಾಮಿಶೆಣೈ, ಪ್ರೊ.ಶ್ಯಾಮ್ ಸುಂದರ್ ವಿಚಾರವನ್ನು ಮಂಡಿಸಲಿದ್ದಾರೆ. ಫ್ಯಾನಲಿಸ್ಟ್ ತಜ್ಞರಾಗಿ ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಆಯುಕ್ತರಾದ ಶೇಖ್ ತನ್ವೀರ್ ಆಸಿಫ್, ಮುಡಾ ಆಯುಕ್ತರಾದ ರಕ್ಷಿತ್ ಕೆ.ಆರ್, ನಗರ ಯೋಜಕರಾದ ವಿ.ಎಸ್. ಪ್ರಸಾದ್, ಡಾ.ಮಹೇಶ್, ಡಾ.ಕೆ.ಸಿ. ಮಂಜುನಾಥ್ ಭಾಗವಹಿಸಲಿದ್ದಾರೆ.

ನಮಗೆ ಯುದ್ಧ ಬೇಡ: ಟ್ರಂಪ್‌ಗೆ ತಿರುಗೇಟು ಕೊಟ್ಟ ಸ್ಪೇನ್ ಪ್ರಧಾನಿ ಸ್ಯಾಂಚೆಜ್

ಮ್ಯಾಡ್ರಿಡ್: ಇರಾನ್ ಮೇಲಿನ ಅಮೆರಿಕ ದಾಳಿಗೆ ನಾವು ಸಹಾಯ ಮಾಡುವುದಿಲ್ಲ. ನಮಗೆ ಯುದ್ಧ ಬೇಡ ಎಂದು ಸ್ಪೇನ್ ಪ್ರಧಾನಿ ಪೆಡ್ರೊ ಸ್ಯಾಂಚೆಜ್ ಬುಧವಾರ ಹೇಳಿದ್ದಾರೆ. ಇರಾನ್ ಮೇಲಿನ ವಾಯುದಾಳಿಗಾಗಿ ಸ್ಪೇನ್‌ನ ವಾಯುನೆಲೆಗಳನ್ನು ಬಳಸಿಕೊಳ್ಳಲು ಅಮೆರಿಕ ಮುಂದಾಗಿತ್ತು. ಆದರೆ, ಸ್ಪೇನ್ ಇದಕ್ಕೆ ನಿರಾಕರಿಸಿತ್ತು. ಅದನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಟೀಕಿಸಿದ್ದರು. ಅವರೊಂದಿಗಿನ ಎಲ್ಲಾ ರೀತಿಯ ವ್ಯಾಪಾರ ಒಪ್ಪಂದವನ್ನು ರದ್ದುಗೊಳಿಸುತ್ತೇವೆ ಎಂದು ಬೆದರಿಕೆ ಹಾಕಿದ್ದರು.

ಟ್ರಂಪ್ ಟೀಕೆಗೆ ಉತ್ತರಿಸಿರುವ ಪೆಡ್ರೊ ಸ್ಯಾಂಚೆಜ್, ಯುದ್ಧದ ಕುರಿತು ಸ್ಪೇನ್ ಸರ್ಕಾರದ ನಿರ್ಧಾರವು ಒಂದೇ ಆಗಿದೆ. ನಮಗೆ ಯುದ್ಧ ಬೇಡ ಎನ್ನುವುದೇ ನಮ್ಮ ನಿಲುವುವಾಗಿದೆ ಎಂದು ಟಿವಿ ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಜಗತ್ತಿಗೆ ಹಾನಿಯಾಗುವ ಯಾವುದರಲ್ಲೂ ನಾವು ಕೈಜೋಡಿಸುವುದಿಲ್ಲ. ಪ್ರತೀಕಾರದ ಭಯದಲ್ಲಿ ನಾವು ನಮ್ಮ ನಂಬಿಕೆ ಮತ್ತು ಮೌಲ್ಯಗಳನ್ನು ಬಲಿಕೊಡುವುದಿಲ್ಲ ಎಂದು ಹೇಳಿದ್ದಾರೆ. ಅಮೆರಿಕದ ಈ ನಿರ್ಧಾರವನ್ನು ನಾವು ವಿರೋಧಿಸುತ್ತೇವೆ. ಇದು ಜಗತ್ತಿಗೆ ವಿಪತ್ತಾಗಿದೆ. ನಾವು ಈ ಕುರಿತು ಹಲವು ಸರ್ಕಾರಗಳೊಂದಿಗೆ ಮಾತುಕತೆ ನಡೆಸಿದ್ದೇವೆ. ಯುರೋಪ್, ಉತ್ತರ ಅಮೆರಿಕ ಹಾಗೂ ಪಶ್ಚಿಮ ಏಷ್ಯಾದ ಕೋಟ್ಯಾಂತರ ನಾಗರಿಕರು ಯುದ್ಧವನ್ನು ವಿರೋಧಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಗಾಜಾ ಮೇಲಿನ ಇಸ್ರೇಲ್ ದಾಳಿ ಸೇರಿದಂತೆ ಹಲವು ಬಾರಿ ಪೆಡ್ರೊ ಸ್ಯಾಂಚೆಜ್ ನೇತೃತ್ವದ ಎಡಪಂಥೀಯ ಸರ್ಕಾರವು ಅಮೆರಿಕದ ನಿಲುವುಗಳನ್ನು ವಿರೋಧಿಸಿದೆ.

ಕಾಮಗಾರಿಗೆ ಶಾಸಕ ಶ್ರೀವತ್ಸ ಗುದ್ದಲಿಪೂಜೆ...



ಕೆ.ಆರ್.ಕ್ಷೇತ್ರದ ವಾರ್ಡ್ ನಂ.59ರಲ್ಲಿ ಶ್ರೀರಾಂಪುರದ ಎಲ್ಐಜಿ ಮನೆಗಳ ಮುಂಭಾಗ ಹಾಗೂ 807 ಹುಡ್ಕೋ ಬಡಾವಣೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹತ್ತಿರ ರಸ್ತೆ ಹಾಗೂ ಬಾಕ್ಸ್ ಡ್ರೈನ್ ಅಭಿವೃದ್ಧಿಗೆ ಅಂದಾಜು 72 ಲಕ್ಷ ರೂ. ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಗುದ್ದಲಿಪೂಜೆ ನೆರವೇರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ರಾಜೇಶ್, ಜಾದವ್, ಹೇಮಂತ್‌ಕುಮಾರ್, ಮಂಜುನಾಥ್, ಪ್ರಸನ್ನ, ಸಚಿನ್, ರೂಪ, ಮಂಜುಳಾ, ನಗರಪಾಲಿಕೆ ಅಧಿಕಾರಿಗಳಾದ ಚೇತನ್ ಬಾಬು, ಇಂಜನಿಯರ್ ಶಿವಮೂರ್ತಿ ಹಾಗೂ ಸ್ಥಳೀಯ ನಿವಾಸಿಗಳು ಉಪಸ್ಥಿತರಿದ್ದರು.

ಪರಿಶಿಷ್ಟರಿಗೆ ಮೀಸಲಾದ ಅನುದಾನವನ್ನು ಆಯಾಯ ವರ್ಗದ ಬಡಾವಣೆ ಅಭಿವೃದ್ಧಿಗೆ ಬಳಸಿ

ಇದರ ಬಗ್ಗೆ ಕ್ರಿಯಾ ಯೋಜನೆ ಸಮಯದಲ್ಲೇ ಖಚಿತಪಡಿಸಿಕೊಳ್ಳಿ: ಡಿಸಿ ಲಕ್ಷ್ಮೀಕಾಂತರೆಡ್ಡಿ ಸೂಚನೆ

ಮೈಸೂರು, ಮಾ.4(ಎಂಟಿವೈ)– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಿಡುವ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ಆಯಾ ಸಮಾಜದ ಬಡಾವಣೆಗಳ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆ ರೂಪಿಸಿ, ಪೂರ್ಣ ಪ್ರಮಾಣದಲ್ಲಿ ಬಳಕೆಯಾಗುವಂತೆ ಕ್ರಮಕೈಗೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸಲಹೆ ನೀಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಾನಸ ಗಂಗೋತ್ರಿಯ ವಿಜ್ಞಾನ ಭವನದ ಸಭಾಂಗಣದಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳ ಉಪ ಹಂಚಿಕೆ ಮತ್ತು ಬುಡ ಕಟ್ಟು ಉಪ ಹಂಚಿಕೆ ಅಧಿನಿಯಮ, 2013 ಮತ್ತು ನಿಯಮ 2017 ಕುರಿತು ಜಿಲ್ಲಾ, ತಾಲೂಕು ಮತ್ತು ನಗರಪಾಲಿಕೆ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಿಗೆ ಆಯೋಜಿಸಿದ್ದ ಒಂದು ದಿನದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತ ನಾಡಿದ ಅವರು, ವೈಯಕ್ತಿಕ ಫಲಾನು ಭವಿಗಳನ್ನು ಆಯ್ಕೆ ಮಾಡುವಾಗ ಯಾವುದೇ ಸಮಸ್ಯೆ ಉಂಟಾಗುವುದಿಲ್ಲ. ಜಾತಿಪ್ರಮಾಣ ಇರುವುದನ್ನು ಗಮನಿಸ ಲಾಗುತ್ತದೆ. ಆದರೆ, ಲೋಕೋಪಯೋಗಿ, ನೀರಾವರಿ, ವಿದ್ಯುತ್ ಇಲಾಖೆಯಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಾಗ ಸಾಮಾನ್ಯ ಜನರು ವಾಸಿಸುವ ಬಡಾವಣೆಗಳಿಗೆ ಕ್ರಿಯಾ ಯೋಜನೆ ರೂಪಿಸುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಹಾಗಾಗಿ ಕ್ರಿಯಾ ಯೋಜನೆ ರೂಪಿಸಿದ ಬಳಿಕ ಸಂಶಯಾಸ್ಪದ ಕಾಮಗಾರಿಗಳ ಕುರಿತಾಗಿ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಿಂದ ದೃಢೀ ಕರಣ ಪಡೆಯುವಂತೆ ಸೂಚನೆ ನೀಡ ಲಾಗಿದೆ ಎಂದು ತಿಳಿಸಿದರು.



ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಜಿಲ್ಲಾಡಳಿತದ ವತಿಯಿಂದ ಅಧಿಕಾರಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಡಾ.ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಉದ್ಘಾಟಿಸಿದರು.

ಕಾಮಗಾರಿ ಅನುಷ್ಠಾನಗೊಂಡ ಮೇಲೆ ಕ್ರಮಕೈಗೊಳ್ಳುವ ಬದಲಿಗೆ ಕ್ರಿಯಾ ಯೋಜನೆ ಹಂತದಲ್ಲಿ ಪರಿಶೀಲನೆ ನಡೆಸಿ ದೃಢೀಕರಣ ಪಡೆದರೆ ಸಮಸ್ಯೆಯಾಗುವುದಿಲ್ಲ. ಒಂದು ವೇಳೆ ಸಾಮಾನ್ಯ ಜನರ ಬಡಾವಣೆಗಳಲ್ಲಿ ಕ್ರಿಯಾ ಯೋಜನೆ ರೂಪಿಸಿದ್ದರೆ ಅಂತಹದ್ದನ್ನು ತಿರಸ್ಕರಿಸಿ ಬೇರೆ ಕಾಮಗಾರಿಗೆ ಬದಲಿಸಿಕೊಳ್ಳಬಹುದು. ಪ್ರತಿ ಮೂರು ತಿಂಗಳಿಗೊಮ್ಮೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಭೆ ನಡೆಸಲಾಗುತ್ತದೆ. ಈ ಸಭೆಯಲ್ಲಿ ಕುಂದು ಕೊರತೆ, ಸಮಸ್ಯೆ ಹೇಳುತ್ತಾರೆ. ಅದರಲ್ಲಿ ಪ್ರಮುಖವಾಗಿ ಪೋಡಿ ದುರಸ್ತಿ, ನಿವೇಶನ, ಮನೆ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಇತ್ತೀಚಿಗೆ ಎಸ್‌ಸಿ, ಎಸ್‌ಟಿ ಸಮುದಾಯದ ಕಲ್ಯಾಣಕ್ಕೆ ವಿವಿಧ ಇಲಾಖೆಗಳಲ್ಲಿ ಮೀಸಲಿಟ್ಟಿರುವ ಅನುದಾನ ಹೆಸರಿಗಷ್ಟೇ ಇದೆ. ಈ ಜನರಿಗೆ ಬಳಕೆಯಾಗುತ್ತಿಲ್ಲ ಎನ್ನುವ ದೂರುಗಳು ಬರುತ್ತಿವೆ. ಹೀಗಾಗಿ ಪರಿಶೀಲನೆ ನಡೆಸಿದಾಗ ಮೂರ್ನಾಲ್ಕು ಕಡೆಗಳಲ್ಲಿ ಸಾಮಾನ್ಯ ಜನರ ಬೀದಿಗಳಲ್ಲಿ ರಸ್ತೆ, ಚರಂಡಿ, ಯುಜಿಡಿ ನಿರ್ಮಾಣ ಮಾಡಿರುವುದರಿಂದ ಇಲಾಖಾ ವಿಚಾರಣೆ ನಡೆಯುತ್ತಿದೆ. ಆದ್ದರಿಂದ ಈ ವರ್ಗದ ಜನರು ಇರುವ ಕಡೆಗಳಲ್ಲಿ ಮಾತ್ರ ಕಾಮಗಾರಿ ಕೈಗೆತ್ತಿಗೊಳ್ಳಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಹೊರ ಗುತ್ತಿಗೆಯಲ್ಲೂ ಮೀಸಲಾತಿ: ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೌಕರರನ್ನು ನೇಮಿಸಿಕೊಳ್ಳುವಾಗ ಮೀಸಲಾತಿ ಪ್ರಕಾರ ನೇಮಕ ಮಾಡಬೇಕು. ಆಯಾಯ ವರ್ಗಕ್ಕೆ ರೋಸ್ಟರ್ ಪದ್ಧತಿ ಪ್ರಕಾರ ಮೀಸಲಿಡುವಂತೆ ಮಾಡಬೇಕು. ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುತ್ತಿದ್ದರೂ ಒಂದೇ ಏಜೆನ್ಸಿಯಲ್ಲಿ ಕೆಲಸ ಮಾಡುವವರೇ ಮುಂದುವರೆದುಕೊಂಡು ಬರುವುದರಿಂದ ಹೊಸಬರಿಗೆ ಅವಕಾಶ ಸಿಗದಂತಾಗಿದೆ. ಮೈಸೂರು ವಿವಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಸೇರಿದಂತೆ ಬೇರೆ ಬೇರೆ ಕಡೆಗಳಲ್ಲಿ ಈ ಪರಿಸ್ಥಿತಿ ಇರುವುದರ ಬಗ್ಗೆ ಕಂಡುಬಂದಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಹೊರಗುತ್ತಿಗೆಯ ನೇಮಕದಲ್ಲೂ ಕಡ್ಡಾಯವಾಗಿ ಮೀಸಲಾತಿ ಪ್ರಕಾರ ನೇಮಕಕ್ಕೆ ಗಮನಹರಿಸಬೇಕು. ಇಲಾಖೆಗಳಲ್ಲಿ ಹೊರಗುತ್ತಿಗೆ ಏಜೆನ್ಸಿಯನ್ನು ಮುಂದುವರಿಸುವಾಗ ಅಧಿಕಾರಿಗಳು ಸೂಕ್ಷ್ಮತೆ ಅರಿಯಬೇಕು. ಕಾನೂನಿನ ಉದ್ದೇಶ ಗಮನಿಸಬೇಕು. ಬಹಳ ವರ್ಷಗಳಿಂದ ಹಿಂದುಳಿದ ಈ ಸಮಾಜವನ್ನು ಮೇಲೆತ್ತಲು ತಂದಿರುವ ಕಾಯಿದೆಯನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತರುವಂತಾಗಬೇಕು ಎಂದರು. ಇದೇ ವೇಳೆ ಸಂಪನ್ಮೂಲ ವ್ಯಕ್ತಿ ಕೆ.ಆರ್.ಶಂಕರ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಮಾತನಾಡಿದರು.

ನೇರ ಪಾವತಿ ಅಡಿಯಲ್ಲಿ ಪೌರಕಾರ್ಮಿಕರು, ಸ್ವಚ್ಛತಾ ಕಾರ್ಮಿಕರು, ವಾಹನ ಚಾಲಕರನ್ನು ಖಾಯಂಗೊಳಿಸಿ

ಮೈಸೂರು, ಮಾ.4(ಜಿಎ)–ರಾಜ್ಯ ಬಜೆಟ್‌ನಲ್ಲಿ ರಾಜ್ಯದಾದ್ಯಂತ ನೇರ ಪಾವತಿ ಅಡಿಯಲ್ಲಿ ಪೌರ ಕಾರ್ಮಿಕರು, ಒಳಚರಂಡಿ ಸ್ವಚ್ಛತಾ ಕಾರ್ಮಿಕರು ಹಾಗೂ ಮನೆ ಮನೆ ಕಸ ಸಂಗ್ರಹಿಸುವ ವಾಹನ ಚಾಲಕರನ್ನು ವಿಲೀನಗೊಳಿಸಿ ಕಾಯಂಗೊಳಿಸಬೇಕೆಂದು ರಾಜ್ಯ ಪೌರ ಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಡಿ.ಆರ್.ರಾಜು ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ವರದಿಯಂತೆ 700 ಮಂದಿಗೆ ಓರ್ವ ಪೌರಕಾರ್ಮಿಕರನ್ನು ಜನಸಂಖ್ಯೆಗೆ ಅನುಗುಣವಾಗಿ ನೇಮಕ ಮಾಡುವ ಬದಲು 500 ಮಂದಿಗೆ ಓರ್ವರಂತೆ ನೇಮಕ ಮಾಡಬೇಕು, ಸರ್ಕಾರಿ ನೌಕರರಿಗೆ ನೀಡುವ ರೀತಿ ಜ್ಯೋತಿ ಸಂಜೀವಿನಿ, ಆರೋಗ್ಯ ವಿಮೆ ಹಣರಹಿತ ಚಿಕಿತ್ಸೆ ಸೌಲಭ್ಯ ವಿಮೆ ಜಾರಿಗೊಳಿಸಬೇಕು ಎಂಬಿವೇ ಮೊದಲಾದ ಬೇಡಿಕೆ ಈಡೇರಿಕೆಗೆ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಪಿ.ಮಂಜುನಾಥ್, ಶ್ರೀನಿವಾಸ್, ಬ್ಯಾಂಕ್ ರಂಗಣ್ಣ, ವಿಜಿ, ಮಂಚಯ್ಯ, ಕುಮಾರಸ್ವಾಮಿ, ದಿನೇಶ್‌ಕುಮಾರ್, ಎಲ್‌ಐಸಿ ಮುರುಗೇಶ್, ಟೈಗರ್ ಶ್ರೀನಿವಾಸ್, ಸೋಮಯ್ಯ ಉಪಸ್ಥಿತರಿದ್ದರು.



ಶಿಕ್ಷಣ ಸಚಿವ ಮಧು ಬಂಗಾರಪ್ಪರ ಹುಟ್ಟುಹಬ್ಬಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್, ಸಚಿವರ ಬೆಂಗಳೂರು ನಿವಾಸದಲ್ಲಿ ಪೇಟ ತೊಡಿಸಿ, ಶಾಲು ಹೊದಿಸಿ, ಸ್ಮರಣಿಕೆ ನೀಡಿ ಆತ್ಮೀಯವಾಗಿ ಅಭಿನಂದಿಸಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಕೋಣನೂರು ಶಿವಕುಮಾರ್ ಹಾಜರಿದ್ದರು.

ವೈದ್ಯಕೀಯ ಪದವಿ ವಿದ್ಯಾರ್ಥಿಗಳ 33.34 ಕೋಟಿ ಸ್ಟೈಫಂಡ್ ಕಬಳಿಕೆ

ಬೆಂಗಳೂರು: ವೈದ್ಯಕೀಯ ಪದವಿ ವಿದ್ಯಾರ್ಥಿಗಳ 33.34 ಕೋಟಿ ಮೊತ್ತದಷ್ಟು ಸ್ಟೈಫಂಡ್ ಕಬಳಿಸಿದ್ದ ಪ್ರಕರಣದಲ್ಲಿ ಹೈದರಾಬಾದ್ ಎಜುಕೇಶನ್ ಸೊಸೈಟಿಯ ಭೀಮಾಶಂಕರ್ ಬಿಳಗುಂಡಿ, ಮಲ್ಲಣ್ಣ ಎಸ್.ಮದ್ದಾರ್ಕಿ ವಿರುದ್ಧ ಜಾರಿ ನಿರ್ದೇಶನಾಲಯವು ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ.

ಮಂಗಳೂರಿನ ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ) ಮಂಗಳವಾರ ಪ್ರಾಸಿಕ್ಯೂಷನ್ ದೂರು ದಾಖಲಿಸಿದೆ. ಹೈದರಾಬಾದ್ ಎಜುಕೇಶನ್ ಸೊಸೈಟಿಯ 'ಮಹದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜ್'ನ ವಿದ್ಯಾರ್ಥಿಗಳಿಗೆ ಸಿಗಬೇಕಾಗಿದ್ದ ಸ್ಟೈಫಂಡ್ ಅನ್ನು ಆರೋಪಿಗಳು ಕಬಳಿಸಿದ್ದರು. 2018ರಿಂದ 2024ರ ಅವಧಿಯಲ್ಲಿ ತಮ್ಮ ಕಾಲೇಜಿಗೆ ದಾಖಲಾದ ವಿದ್ಯಾರ್ಥಿಗಳಿಂದ, ಪ್ರವೇಶಾತಿ ಸಂದರ್ಭದಲ್ಲಿಯೇ ಖಾಲಿ ಚೆಕ್‌ಗಳಿಗೆ ಸಹಿ ಮಾಡಿಸಿಕೊಂಡಿದ್ದರು. ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಬಂದಾಗ, ಆ ಚೆಕ್‌ಗಳನ್ನು ಬಳಸಿಕೊಂಡು ತಾವೇ ಹಣ ಪಡೆದುಕೊಂಡಿದ್ದರು ಎಂದು ಇ.ಡಿ ವಿವರಿಸಿದೆ. ವಿದ್ಯಾರ್ಥಿಗಳ ಹಣವನ್ನು ಅಕ್ರಮವಾಗಿ ಡ್ರಾ ಮಾಡಿಕೊಳ್ಳುವಲ್ಲಿ ಕೆನರಾ ಬ್ಯಾಂಕ್‌ನ ನೌಕರ ಎಸ್.ಎಂ.ಪಾಟೀಲ ಸಹಕರಿಸಿದ್ದರು. ಮೂವರು ಸೇರಿಯೇ ಈ ಅಕ್ರಮ ಎಸಗಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ, ಮೂವರು ಆರೋಪಿಗಳಿಗೆ ಸೇರಿದ 6.72 ಕೋಟಿ ಮೌಲ್ಯದ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದಿದೆ.

ಸಾಂಸ್ಕೃತಿಕ, ಸ್ಪರ್ಧಾ ಉತ್ಸವ 'ಸ್ಪೆಕ್ಟ್ರಾ'

ಮೈಸೂರು, ಮಾ.4(ಜಿಎ)–ಮೈಸೂರಿನ ಹಿಂದುಸ್ತಾನ್ ಕಾಲೇಜಿನಲ್ಲಿ ಸಾಂಸ್ಕೃತಿಕ, ವಿವಿಧ ಸ್ಪರ್ಧಾ ಉತ್ಸವ 'ಸ್ಪೆಕ್ಟ್ರಾ'ವನ್ನು ಮಾ.6 ಮತ್ತು 7ರಂದು ಆಯೋಜಿಸಲಾಗಿದೆ ಎಂದು ಪ್ರಾಚಾರ್ಯರಾದ ಡಾ.ಸಿ.ಜೆ.ಪ್ರಿಯಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.6ರಂದು ಬೆಳಗ್ಗೆ 10.30ಕ್ಕೆ ಇನ್ಫೋಸಿಸ್‌ನ ಅಭಿವೃದ್ಧಿ ಕೇಂದ್ರದ ಮುಖ್ಯಸ್ಥ ವಿನಾಯಕ ಪಿ. ಹೆಗ್ಡೆ ಕಾರ್ಯಕ್ರಮವನ್ನು ಉದ್ಘಾಟಿಸುವರು. ಮೈಸೂರು ವಿವಿ ಬಿಎಂ ಬಹದ್ದೂರ್ ಸಂಸ್ಥೆಯ ಅಧ್ಯಕ್ಷ ಪ್ರೊ.ಆರ್.ಮಹೇಶ್, ನಟ ಅಶ್ವಿನ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಉತ್ಸವದಲ್ಲಿ 14 ವಿವಿಧ ಸ್ಪರ್ಧೆಗಳಿರುತ್ತವೆ. ವೈಮಾನಿಕ ನಿರ್ವಹಣೆ, ಕಂಪ್ಯೂಟರ್ ವಿಜ್ಞಾನ, ಟ್ರೆಷರ್ ಹಂಟ್, ನೃತ್ಯ, ಸಮೂಹ ನೃತ್ಯಗಳು, ದೇಹಧಾರ್ಢ್ಯ ಇದರಲ್ಲಿ ಸೇರಿವೆ. ವಿಜೇತರಿಗೆ ಒಟ್ಟಾರೆ ಸುಮಾರು ಒಂದೂವರೆ ಲಕ್ಷ ರೂ ನಗದು ಬಹುಮಾನ, ಟ್ರೋಫಿಗಳನ್ನು ನೀಡಲಾಗುವುದು. ಈಗಾಗಲೇ ಚೆನ್ನೈ, ಕೊಡಗು, ಚಿತ್ರದುರ್ಗ ಮೊದಲಾದ ಕಡೆಗಳಿಂದ ನೋಂದಣಿ ಆಗುತ್ತಿವೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಜಿ.ಹೆಚ್.ರಘುನಂದನ್, ವಿ.ಈಶ್ವರ್, ಎಸ್.ವಿನಂತಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಸುಗಮ ಸಂಚಾರ ದೃಷ್ಟಿಯಿಂದ ನಗರ, ಗ್ರಾಮಾಂತರ ಸಾರಿಗೆ ವ್ಯವಸ್ಥೆ ಬಲವರ್ಧನೆಗೆ ಆಗ್ರಹ

ಮೈಸೂರು,ಮಾ.4–ಮೈಸೂರು ಮಹಾನಗರ ದಿನೇ ದಿನೇ ಬೆಳೆಯುತ್ತಿದ್ದು ಪ್ರವಾಸಿ–ಜನದಟ್ಟಣೆ ಹೆಚ್ಚುತ್ತಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಆರಂಭವಾದ ಬಳಿಕವಂತೂ ಎರಡು ಮಹಾನಗರಗಳ ಮಧ್ಯೆ ಜನ–ವಾಹನ ಸಂಚಾರ ಗಣನೀಯ ಪ್ರಮಾಣದಲ್ಲಿ ಹೆಚ್ಚಿದೆ.

ಅದರಲ್ಲೂ ವಾರಾಂತ್ಯ, ದೀರ್ಘ ರಜೆಯ ಸಮಯ ಮತ್ತು ದಸರೆಯ ದಿನಗಳಲ್ಲಿ ನಗರ ಕೇಂದ್ರ ಸ್ಥಾನದಲ್ಲಿ ಜನ–ವಾಹನ ದಟ್ಟಣೆ ವಿಪರೀತ ಹೆಚ್ಚಿ, ಸುಗಮ ಸಂಚಾರಕ್ಕೆ ತೊಡಕಾಗುತ್ತಿದೆ. ಬೆಂಗಳೂರು ಮಹಾನಗರದ ದಟ್ಟಣೆ ಮತ್ತು ಒತ್ತಡದ ಬದುಕಿನಿಂದ ರೋಸಿಹೋಗಿ ತುಸು ವಿಶ್ರಾಂತಿಗೆ ಮೈಸೂರಿನತ್ತ ಬರುವ ಪ್ರವಾಸಿಗರು ಈಗ ಇಲ್ಲಿಯೂ ಅಂತದೇ ಸ್ಥಿತಿ ಅನುಭವಿಸುವಂತಾಗಿದೆ.

ಆದ್ದರಿಂದ ಮೈಸೂರು ನಗರದ ಹೃದಯ ಭಾಗದ ಸಂಚಾರ ದಟ್ಟಣೆಯನ್ನು ತಪ್ಪಿಸಲು ಹಲವು ಹಂತದ ಕ್ರಮಗಳಾಗಬೇಕಿದೆ. ಮುಖ್ಯವಾಗಿ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್‌ಟಿಸಿ)ಯ ನಗರ ಮತ್ತು ಗ್ರಾಮಾಂತರ ವಿಭಾಗಗಳು ಈ ನಿಟ್ಟಿನಲ್ಲಿ ದೂರದೃಷ್ಟಿಯ ಕ್ರಮಗಳನ್ನು ಕೈಗೊಳ್ಳುವಂತೆ ಅನಿಕೇತನ ಸೇವಾ ಟ್ರಸ್ಟ್ ಅಧ್ಯಕ್ಷರೂ ಆದ ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್ ಆಗ್ರಹಿಸಿದ್ದಾರೆ.

ನಗರದ ನಾಲ್ಕೂ ದಿಕ್ಕಿನಲ್ಲಿ ನಿರ್ಮಿಸಿರುವ ಸ್ಯಾಟಲೈಟ್ ಬಸ್ ನಿಲ್ದಾಣಗಳನ್ನು ಇದುವರೆಗೂ ಸಂಚಾರ–ಸಾರಿಗೆ ಅನುಕೂಲಕ್ಕಾಗಿ ಪೂರ್ಣ ಪ್ರಮಾಣದಲ್ಲಿ; ಸಮರ್ಪಕವಾಗಿ ಬಳಸಿಕೊಂಡಿಲ್ಲ. ಕೆಲವು ನಿಲ್ದಾಣಗಳಲ್ಲಿನ ಕಟ್ಟಡಗಳ ಶಾಪಿಂಗ್ ಮಾಲ್, ಶೈಕ್ಷಣಿಕ ಸಂಸ್ಥೆ ಮತ್ತಿತರ ವಹಿವಾಟುಗಳಿಗೆ ಬಾಡಿಗೆಗೆ ನೀಡಲಾಗಿದೆ. ಕುವೆಂಪುನಗರ, ಸಾತಗಳ್ಳಿ, ಇಲವಾಲ, ಬನ್ನಿಮಂಟಪ ಮತ್ತಿತರ ಕಡೆ ನಿರ್ಮಿಸಿರುವ ಸುಸಜ್ಜಿತ ಬಸ್ ನಿಲ್ದಾಣಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಹೊರಗಿನಿಂದ ನಗರಕ್ಕೆ ಸಂಪರ್ಕ ಬೆಸೆಯುವ ಉಳಿದೆಲ್ಲ ಮಾರ್ಗಗಳಲ್ಲಿಯೂ ಒಂದೊಂದು ಸುಸಜ್ಜಿತ ಸ್ಯಾಟಲೈಟ್ ಬಸ್ ನಿಲ್ದಾಣ ನಿರ್ಮಿಸಬೇಕು.



ಕೆ.ವಿ.ಮಲ್ಲೇಶ್

ಅಂತಾರಾಜ್ಯ ಅಥವಾ ಹೊರ ಜಿಲ್ಲೆ, ಗ್ರಾಮಾಂತರ ಪ್ರದೇಶಗಳಿಂದ ಬರುವ ಬಸ್‌ಗಳು ಸ್ಯಾಟಲೈಟ್ ನಿಲ್ದಾಣಗಳಿಂದಲೇ ಕಾರ್ಯಾಚರಿಸುವುದಾದರೆ ನಗರ ಕೇಂದ್ರ ಬಸ್ ನಿಲ್ದಾಣದ ಮೇಲಿನ ಒತ್ತಡ ತಪ್ಪುತ್ತದೆ. ಸ್ಯಾಟಲೈಟ್ ನಿಲ್ದಾಣಗಳಿರುವ ಸುತ್ತಲಿನ ಪ್ರದೇಶಗಳಲ್ಲಿ ವಾಣಿಜ್ಯ–ವಹಿವಾಟು ಬೆಳೆದರೆ, ಬೇರೆ ಬೇರೆ ಉದ್ದೇಶಕ್ಕೆ ಗ್ರಾಮಾಂತರ ಪ್ರದೇಶ, ತಾಲೂಕು ಕೇಂದ್ರಗಳಿಂದ ಮೈಸೂರಿಗೆ ಬರುವವರ ಸಂಖ್ಯೆ ಕಡಿಮೆ ಆಗುತ್ತದೆ. ಇದರಿಂದ ನಗರವು 'ಉಪನಗರ' ಕೇಂದ್ರಿತವಾಗಿ ಬೆಳೆಯುವುದೂ ಸಾಧ್ಯವಾಗುತ್ತದೆ.


ಸ್ಯಾಟಲೈಟ್ ನಿಲ್ದಾಣಗಳಿಂದ ನಗರದ ಪ್ರಮುಖ ಸ್ಥಳಗಳು ಮತ್ತು ಹೊಸ ಬಡಾವಣೆಗಳಿಗೆ ನಗರ ಸಾರಿಗೆ ಸಂಪರ್ಕ ಜಾಲವನ್ನು ಬಲಗೊಳಿಸಿದರೆ ನಗರದ ಒಳಗೆ ಉದ್ಭವಿಸುತ್ತಿರುವ ವಾಹನ ದಟ್ಟಣೆ ಸ್ಥಿತಿಯನ್ನು ನಿಯಂತ್ರಿಸಬಹುದು.

ಬನ್ನಿಮಂಟಪದಲ್ಲಿ ನಿರ್ಮಾಣ ಹಂತದಲ್ಲಿರುವ ಬಸ್ ನಿಲ್ದಾಣವನ್ನೂ ಭವಿಷ್ಯದ ನಗರ ಬೆಳವಣಿಗೆ ಮತ್ತು ಸಂಚಾರ ದಟ್ಟಣೆಯನ್ನು ಗಮನದಲ್ಲಿಟ್ಟುಕೊಂಡು, ವ್ಯವಸ್ಥಿತವಾಗಿ ನಿರ್ಮಾಣ ಮಾಡಬೇಕು. ನಗರ ಮತ್ತು ಗ್ರಾಮಾಂತರ ಸಾರಿಗೆ ವಿಭಾಗಗಳೆರಡೂ ಸಮನ್ವಯದಿಂದ ತೊಡಗಿಸಿಕೊಂಡು ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಬಲವರ್ಧನೆಗೆ ಪ್ರಯತ್ನಿಸಬೇಕು.

ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಮೈಸೂರು ನಗರಕ್ಕೆ 'ಭವಿಷ್ಯದ ಸಾರಿಗೆ' ವ್ಯವಸ್ಥೆಯ ಅಭಿವೃದ್ಧಿಗೆ ಅಗತ್ಯ ಮೂಲಭೂತ ಸೌಲಭ್ಯ ಮತ್ತು ಹೆಚ್ಚುವರಿ ಬಸ್ ಗಳ ವ್ಯವಸ್ಥೆ ಮಾಡುವಂತೆ ಸಾರಿಗೆ ಇಲಾಖೆಯನ್ನು, ಸಾರಿಗೆ ಸಚಿವರನ್ನು ಮತ್ತು ರಾಜ್ಯ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ. ಈ ಬಜೆಟ್‌ನಲ್ಲಿಯೇ ಇದಕ್ಕೆ ಆದ್ಯತೆ ನೀಡುವಂತೆ ಕೆ.ವಿ.ಮಲ್ಲೇಶ್ ಪತ್ರಿಕಾ ಪ್ರಕಟಣೆ ಮೂಲಕ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿದ್ದಾರೆ.

ಮಾ.5, 6ರಂದು ಮಾಜಿ ಸಿಎಂ ಯಡಿಯೂರಪ್ಪ ಮೈಸೂರು, ಚಾಮರಾಜನಗರ ಪ್ರವಾಸ

ಮೈಸೂರು, ಮಾ.4– ಮಾಜಿ ಮುಖ್ಯಮಂತ್ರಿ, ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ ಮತ್ತು ಕೇಂದ್ರ ಚುನಾವಣಾ ಸಮಿತಿಯ ಸದಸ್ಯರೂ ಆದ ಬಿ.ಎಸ್.ಯಡಿಯೂರಪ್ಪ ಮಾ.5 ಮತ್ತು 6ರಂದು ಮೈಸೂರು, ಚಾಮರಾಜನಗರ ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ.



ಮಾ.5ರ ಗುರುವಾರದಂದು ಬೆಳಗ್ಗೆ 9 ಗಂಟೆಗೆ ಬೆಂಗಳೂರಿನಿಂದ ರಸ್ತೆ ಮೂಲಕ ಹೊರಟು, ಮಧ್ಯಾಹ್ನ 12ಕ್ಕೆ ಗುಂಡ್ಲುಪೇಟೆ ತಾಲೂಕಿನ ಸೋಮಹಳ್ಳಿಯ ಶ್ರೀ ವೀರಸಿಂಹಾಸನ ಶಿಲಾ ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2ಕ್ಕೆ ಅಲ್ಲಿಂದ ಹೊರಟು ಮೈಸೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಮಾ.6ರ ಶುಕ್ರವಾರದಂದು ಬೆಳಿಗ್ಗೆ 10ಕ್ಕೆ ಮೈಸೂರಿನಿಂದ ಹೊರಟು, ಹುಣಸೂರು ತಾಲೂಕಿನ ಮಾದಹಳ್ಳಿ ಶ್ರೀ ಉಕ್ಕಿನಕಂತೆ ಮಠದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಬಳಿಕ ಅಲ್ಲಿಂದ ರಸ್ತೆ ಮಾರ್ಗವಾಗಿ ಬೆಂಗಳೂರು ಸ್ವಸ್ಥಾನಕ್ಕೆ ತೆರಳಲಿದ್ದಾರೆ ಎಂದು ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳಾ ದಿನಾಚರಣೆ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಮಾ.4(ಜಿಎ)–ಮೈಸೂರಿನ ಲಕ್ಷ್ಮಿಪುರಂನಲ್ಲಿರುವ ಅಶ್ವಿನಿ ಆಸ್ಪತ್ರೆ ವತಿಯಿಂದ ಮಹಿಳಾ ದಿನಾಚರಣೆ ಅಂಗವಾಗಿ ಮಾ.7 ಮತ್ತು 8ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ಸಾಮಾನ್ಯ ಶಸ್ತ್ರಚಿಕಿತ್ಸಾ ಸಮಾಲೋಚಕರಾದ ಡಾ. ಶ್ರೀರಕ್ಷ ಈ ವಿಷಯ ತಿಳಿಸಿ, ಮಹಿಳೆಯರಿಂದ ಮಹಿಳೆಯರಿಗಾಗಿ ಈ ಶಿಬಿರವನ್ನು ಆಯೋಜಿಸಿದ್ದು, ಪ್ರಮುಖವಾಗಿ ಸ್ತ್ರೀರೋಗ ಮತ್ತು ಪ್ರಸೂತಿ ತಪಾಸಣೆ, ಸಾಮಾನ್ಯ ಶಸ್ತ್ರ ಚಿಕಿತ್ಸೆ, ಸ್ತನ ಸಂಬಂಧಿಸಿದ ಚಿಕಿತ್ಸೆ ನಡೆಯಲಿದೆ. ಶಿಬಿರಲ್ಲಿ ವಿಶೇಷವಾಗಿ ಲ್ಯಾಬ್ ಪರೀಕ್ಷೆ ಮತ್ತು ಔಷಧಿಯಲ್ಲಿ ಶೇ.20 ರಷ್ಟು ರಿಯಾಯಿತಿ ನೀಡಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಗೌರಿ ಎಸ್.ಹುಕ್ಕೇರಿ, ಡಾ.ಎಸ್.ಅಶ್ವಿನ್ ಉಪಸ್ಥಿತರಿದ್ದರು.

ವಿಶ್ವ ಮಹಿಳಾ ದಿನಾಚರಣೆ; ಬೆಂಕಿರಹಿತ ಅಡುಗೆ ಸ್ಪರ್ಧೆ

ಮೈಸೂರು,ಮಾ.4–ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಪೂರ್ವಭಾವಿಯಾಗಿ ಬೆಂಕಿರಹಿತ ಅಡುಗೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಕುಟುಂಬದ ಎಲ್ಲಾ ಸದಸ್ಯರನ್ನು ಬೆಸೆಯುವ ಕೋಣೆ ಅಡುಗೆ ಮನೆ. ಅವಳ ಪ್ರೀತಿಯ ಹೆಗ್ಗುರುತು ಎಂದು ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ವಿನೋದ ಅಭಿಪ್ರಾಯಪಟ್ಟರು.

ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ವತಿಯಿಂದ ಮಹಿಳಾ ದಿನಾಚರಣೆ ಪ್ರಯುಕ್ತ ಮುಂಚಿತವಾಗಿ ನಡೆಸಿದ ಬೆಂಕಿರಹಿತ ಅಡುಗೆ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಪೂರ್ವಭಾವಿಯಾಗಿ ಬೆಂಕಿರಹಿತ ಅಡುಗೆ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಸ್ಪರ್ಧೆಯಲ್ಲಿ ಭಾಗವಹಿಸಿದ 25ಕ್ಕೂ ಹೆಚ್ಚು ಮಹಿಳೆಯರು ಸುಮಾರು 40 ರೀತಿಯ ವೈವಿದ್ಯಮಯ ಅಡುಗೆ ತಯಾರಿಸಿ ಎಲ್ಲರ ಗಮನ ಸೆಳೆದರು. ಅಲ್ಲಿ ಸೇರಿದ್ದ ಸಂಘದ ಮಹಿಳೆಯರನ್ನುದ್ದೇಶಿಸಿ ಪ್ರಸ್ತುತ ಕಾಲದಲ್ಲಿ ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಆರ್ಥಿಕ ಭದ್ರತೆ ಸಿಗುತ್ತಿದೆ ಆದರೂ ಅಡುಗೆ ಮನೆಯಲ್ಲಿ ರುಚಿ ಶುಚಿಯಾದ ತಿಂಡಿ ಹೊಸ ತರದ ಅಡುಗೆಗಳನ್ನು ಮಾಡುತ್ತಾ ಹೆಚ್ಚು ಆರೋಗ್ಯಕರ ತಿಂಡಿಗಳ ಬಗ್ಗೆ ಒಲವು ತೋರುತ್ತಿದ್ದಾಳೆ. ಹೊರಗಡೆ ನಮಗೆ ಆರ್ಡರ್ ಮಾಡಿದರೆ ಯಾವ ಕಷ್ಟವೂ ಇಲ್ಲದೆ ಕೆಲವೇ ಕ್ಷಣಗಳಲ್ಲಿ ಮನೆಗೆ ಬರುತ್ತದೆ ಎಂದು ಈಗಿನವರು ಆಲೋಚಿಸುವುದು ಆತಂಕಕಾರಿ ವಿಷಯವಾಗಿದೆ. ಮಹಿಳೆಗೆ ಅಡುಗೆ ಮನೆ ಅವಳ ಪ್ರೀತಿಯ ಹೆಗ್ಗುರುತು ಮತ್ತು ಕುಟುಂಬದ ಎಲ್ಲಾ ಸದಸ್ಯರನ್ನು ಬೆಸೆಯುವ ಕೋಣೆ. ಹಾಗಾಗಿ ಹೆಣ್ಣು ಮಕ್ಕಳು ಏನೇ ಸಾಧನೆ ಮಾಡಿದರೂ ಅಡುಗೆ ಮನೆಯನ್ನು ಮರೆಯಬಾರದು ಎಂದು ಅಭಿಪ್ರಾಯಪಟ್ಟರು. ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಅಧ್ಯಕ್ಷೆ ಜೆ.ಶೋಭ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ರಾಣಿ ಮಹೇಶ್, ಪದಾಧಿಕಾರಿಗಳಾದ ಸುನಂದ, ಯೋಗಾವತಿ, ಸೀತಮ್ಮ, ಶೋಭ ಧನಂಜಯ್, ಅನಿತ, ವಿಜಯಲಕ್ಷ್ಮಿ, ಲಾವಣ್ಯ, ಚಂದ್ರಕಲಾ ಮತ್ತಿತರರು ಉಪಸ್ಥಿತರಿದ್ದರು.

ಮಾ.14ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಮೈಸೂರು, ಮಾ.4–ಮೈಸೂರಿನ ರಾಮಕೃಷ್ಣನಗರದಲ್ಲಿರುವ ಬಡಗನಾಡು ಬಳಗದ ವತಿಯಿಂದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಮಾ.14ರಂದು ರಾಮಕೃಷ್ಣನಗರದ ವಾಸು ಬಡಾವಣೆಯಲ್ಲಿರುವ ಬಡಗನಾಡು ಭವನದಲ್ಲಿ ಬೆಳಗ್ಗೆ 10 ಗಂಟೆಗೆ ಆಯೋಜಿಸಲಾಗಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಮಹಿಳೆಯರು ಮಾ.11ರೊಳಗೆ ಹೆಸರು ನೋಂದಾಯಿಸಬೇಕು. ಮಾಹಿತಿಗೆ ವಸಂತ ವೆಂಕಟೇಶ್: 9986197263, ಕೃಪಾಮೂರ್ತಿ: 9552344046, ಸಾವಿತ್ರಿ ಅಡಿಗ: 8971818103 ಮೂಲಕ ಸಂಪರ್ಕಿಸಲು ಸಂಘದ ಕಾರ್ಯದರ್ಶಿ ರಾಮಕೃಷ್ಣ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಬಣ್ಣಗಳಲ್ಲಿ ಮಿಂದೆದ್ದ ಭಾರತ–ಜಪಾನ್ ಯೋಧರು

ಡೆಹ್ರಾಡೂನ್: ಉತ್ತರಾಖಂಡದಲ್ಲಿ ಭಾರತ ಮತ್ತು ಜಪಾನ್ ನಡುವಿನ ಜಂಟಿ ಸಮರಾಭ್ಯಾಸ 'ಧರ್ಮ ಗಾರ್ಡಿಯನ್' 7ನೇ ಆವೃತ್ತಿ ಪ್ರಗತಿಯಲ್ಲಿದ್ದು, ಬುಧವಾರ ಈ ಯೋಧರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು. ಇದೇ ವೇಳೆ ಎರಡೂ ಪಡೆಗಳ ಯೋಧರು ಪರಸ್ಪರ ಬಣ್ಣ ಎರಚಿ ಸಂಭ್ರಮದಿಂದ ಹೋಳಿ ಹಬ್ಬ ಆಚರಿಸಿದ್ದಾರೆ. ಯೋಧರು ಪರಸ್ಪರ ಬಣ್ಣ ಎರಚಿಕೊಂಡು ಸಂಭ್ರಮದಿಂದ ಹೋಳಿ ಆಚರಿಸುವ ಮೂಲಕ ಶುಭಾಶಯ ಕೋರಿದ್ದಾರೆ. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಫೆ.24ರಿಂದ ಆರಂಭವಾಗಿರುವ ಜಂಟಿ ಸಮರಾಭ್ಯಾಸ ಮಾ.9ರವರೆಗೆ ನಡೆಯಲಿದೆ. ಜಪಾನ್ ಮತ್ತು ಭಾರತದ ರಕ್ಷಣಾ ಪಡೆಗಳ ನಡುವೆ ಪರಸ್ಪರ ರಕ್ಷಣಾ ಸಹಕಾರಕ್ಕೆ ಸಂಬಂಧಿಸಿದಂತೆ 'ಧರ್ಮ ಗಾರ್ಡಿಯನ್', 'ಮಲಬಾರ್', 'ಮಿಲಾನ್' ಕಾರ್ಯಾಚರಣೆಯ ಭಾಗವಾಗಿ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ಸಮರಾಭ್ಯಾಸ ನಡೆಸಲಾಗುತ್ತದೆ.



ಭಾರತೀಯ ಸೇನೆ ಹಾಗೂ ಜಪಾನ್ ಸೇನೆ ನಡುವಿನ ರಕ್ಷಣಾ ಸಹಕಾರ ಮತ್ತು ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ವೃದ್ಧಿಸುವ ಉದ್ದೇಶ ಈ ಸಮರಾಭ್ಯಾಸದ್ದಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಕತಾರ್‌ನಲ್ಲಿ 10 ಮಂದಿ ಶಂಕಿತ ಐಆರ್‌ಜಿಸಿ ಗೂಢಚಾರರ ಬಂಧನ

ಕತಾರ್: ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ (ಐಆರ್‌ಜಿಸಿ) ಗೂಢಚಾರರು ಎಂಬ ಶಂಕೆ ಮೇಲೆ 10 ಮಂದಿಯನ್ನು ಕತಾರ್‌ನಲ್ಲಿ ಬಂಧಿಸಲಾಗಿದೆ. ದೇಶದ ನಿರ್ಣಾಯಕ ಮತ್ತು ಮಿಲಿಟರಿ ಮೂಲ ಸೌಕರ್ಯದ ಬಗ್ಗೆ ಗುಪ್ತಚರ ಮಾಹಿತಿ ಸಂಗ್ರಹಿಸಲು ಏಳು ಶಂಕಿತರಿಗೆ ಬೇಹುಗಾರಿಕೆ ಕಾರ್ಯಾಚರಣೆಗಳನ್ನು ವಹಿಸಲಾಗಿತ್ತು. ಬೇಹುಗಾರಿಕೆ ಆರೋಪ ಹೊತ್ತಿರುವ ಇತರ ಮೂವರು ಡ್ರೋನ್‌ಗಳನ್ನು ನಿರ್ವಹಿಸುವಲ್ಲಿ ತರಬೇತಿ ಪಡೆದಿದ್ದರು ಎಂದು ವರದಿಯಾಗಿದೆ. 1979ರ ಇಸ್ಲಾಮಿಕ್ ಕ್ರಾಂತಿಯ ನಂತರ ಇರಾನ್‌ನ ಮೊದಲ ಸರ್ವೋಚ್ಚ ನಾಯಕ ರುಹೊಲ್ಲಾ ಖೊಮೇನಿ ಈ ಪಡೆಯನ್ನು ಸ್ಥಾಪಿಸಿದರು. ಕೇವಲ ದೇಶದ ಗಡಿ ಕಾಯುವುದು ಇದರ ಕೆಲಸವಲ್ಲ, ಬದಲಿಗೆ ಇರಾನ್‌ನ ಇಸ್ಲಾಮಿಕ್ ವ್ಯವಸ್ಥೆಯನ್ನು ರಕ್ಷಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಇದು ತನ್ನದೇ ಆದ ಭೂಸೇನೆ, ವಾಯುಪಡೆ ಮತ್ತು ನೌಕಾಪಡೆ ಹೊಂದಿದೆ.



ಹುಟ್ಟುಹಬ್ಬದ ಔತಣಕೂಟದಲ್ಲಿ ಆಕಸ್ಮಿಕ ಗುಂಡೇಟು: ಬಾಲಕ ಸಾವು

ಲಕ್ನೋ: ಹುಟ್ಟುಹಬ್ಬದ ಔತಣಕೂಟದಲ್ಲಿ 13 ವರ್ಷದ ಬಾಲಕನೊಬ್ಬ ಆಕಸ್ಮಿಕವಾಗಿ ಗುಂಡೇಟಿಗೆ ಗುರಿಯಾಗಿ ಮೃತಪಟ್ಟಿರುವ ಘಟನೆ ಉತ್ತರ ಪ್ರದೇಶದ ಲಕ್ನೋದ ಕೃಷ್ಣನಗರ್‌ನಲ್ಲಿ ನಡೆದಿದೆ. ಔತಣಕೂಟದಲ್ಲಿ ಪಾಲ್ಗೊಂಡಿದ್ದ ಮೂವರು ಅಪ್ರಾಪ್ತ ಬಾಲಕರನ್ನು ಪೊಲೀಸರು ವಶಕ್ಕೆ ಪಡೆದು, ಘಟನಾ ಸನ್ನಿವೇಶಗಳ ಕುರಿತು ವಿಚಾರಣೆ ಕೈಗೊಂಡಿದ್ದಾರೆ. ಕೃಷ್ಣನಗರ್‌ನಲ್ಲಿರುವ ರಿಯಲ್ ಎಸ್ಟೇಟ್ ಏಜೆಂಟ್ ಒಬ್ಬರ ಮನೆಯಲ್ಲಿ ಈ ಘಟನೆ ನಡೆದಿದೆ. ಈ ಕುರಿತು ಪ್ರತಿಕ್ರಿಯಿಸಿದ ಕೃಷ್ಣನಗರ್ ಸಹಾಯಕ ಪೊಲೀಸ್ ಆಯುಕ್ತ ರಜನೀಶ್ ವರ್ಮಾ, ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಸರೋಜಿನಿನಗರ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಯಾದ ಮೃತ ಬಾಲಕನು ತನ್ನ ತರಗತಿಯಲ್ಲೇ ಓದುತ್ತಿದ್ದ ಸ್ನೇಹಿತನ ಹುಟ್ಟುಹಬ್ಬದ ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳಲು ತೆರಳಿದ್ದ ಎಂದು ತಿಳಿಸಿದ್ದಾರೆ. ಈ ಸಂಬಂಧ ಮೃತ ಬಾಲಕನ ಪೋಷಕರು ಪೊಲೀಸರಿಗೆ ದೂರು ನೀಡಿದ್ದು, ಉದ್ದೇಶಪೂರ್ವಕವಾಗಿ ಗುಂಡು ಹಾರಿಸಲಾಗಿದೆ. ಈ ಸಂಬಂಧ ಬಾಲಕ ಹಾಗೂ ಆತನ ತಂದೆಯ ವಿರುದ್ಧ ಹತ್ಯೆ ಪ್ರಕರಣ ದಾಖಲಿಸಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ ಎಂದು ಕೃಷ್ಣನಗರ್ ಉಪ ಪೊಲೀಸ್ ಆಯುಕ್ತ ನಿಪುಣ್ ಅಗರ್ವಾಲ್ ತಿಳಿಸಿದ್ದಾರೆ. ಆದರೆ, ಇದು ಆಕಸ್ಮಿಕ ಗುಂಡೇಟಿನ ಘಟನೆ ಎಂದು ತೋರುತ್ತಿದೆ ಎಂದು ಅವರು ಹೇಳಿದ್ದಾರೆ.

ಇರಾನ್ ಡ್ರೋನ್ ದಾಳಿಯಲ್ಲಿ ಅಮೆರಿಕದ 6 ಸೈನಿಕರು ಸಾವು

ವಾಷಿಂಗ್ಟನ್: ಕುವೈತ್‌ನ 'ಟ್ಯಾಕ್ಟಿಕಲ್ ಆಪರೇಷನ್ ಸೆಂಟರ್' ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ನಮ್ಮ ದೇಶದ 6 ಸೈನಿಕರು ಮೃತಪಟ್ಟಿದ್ದಾರೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ. ಈ ಕೇಂದ್ರವು ಶುಐಬಾ ಬಂದರಿನ ಹೃದಯ ಭಾಗದಲ್ಲಿದ್ದು, ಅಮೆರಿಕದ ಮುಖ್ಯ ಸೇನಾ ನೆಲೆ 'ಕ್ಯಾಂಪ್ ಅರಿಫ್ಜಾನ್'ನಿಂದ ಹಲವು ಮೈಲಿ ದೂರದಲ್ಲಿದೆ ಎಂದು ವರದಿಯಾಗಿದೆ. ಇಸ್ರೇಲ್ ಜೊತೆಗೂಡಿ ಅಮೆರಿಕವು ಇರಾನ್ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ಕುವೈತ್, ಬಹ್ರೇನ್, ಯುಎಇ ಮತ್ತು ಸೌದಿ ಅರೇಬಿಯಾದಲ್ಲಿ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ಪ್ರತೀಕಾರದ ದಾಳಿ ನಡೆಸುತ್ತಿದೆ. ಸೈನಿಕರ ಸಾವಿನ ವರದಿ ಬೆನ್ನಲ್ಲೇ, ಅಮೆರಿಕ ಸೇನೆಯ ಸುರಕ್ಷತಾ ಮುನ್ನೆಚ್ಚರಿಕೆಗಳ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದಿವೆ. ಈ ನಡುವೆ, ಸಾವು–ನೋವುಗಳ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಧ್ಯಕ್ಷ ಟ್ರಂಪ್ ಹೇಳಿದ್ದಾರೆ. ವೈಮಾನಿಕ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ಬಂದ ಕ್ಷಿಪಣಿಯಿಂದ ಟ್ಯಾಕ್ಟಿಕಲ್ ಆಪರೇಷನ್ ಸೆಂಟರ್‌ನಲ್ಲಿದ್ದ 6 ಸೈನಿಕರು ಹತರಾಗಿದ್ದಾರೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಿಳಿಸಿದ್ದಾರೆ.



ಬೆಂಗಳೂರಿಂದ ತಿರುಪತಿಗೆ ಹೊರಟಿದ್ದ ಕಾರು ಅಪಘಾತ: ಐವರು ಸಾವು

ಚಿತ್ತೂರು: ಬೆಂಗಳೂರಿನಿಂದ ತಿರುಪತಿಗೆ ಹೊರಟಿದ್ದ ಕಾರು ಆಂಧ್ರದ ಚಿತ್ತೂರು ಬಳಿ ಅಪಘಾತಕ್ಕೀಡಾಗಿದ್ದು, ಕರ್ನಾಟಕದ ಐವರು ಸಾವನ್ನಪ್ಪಿದ್ದಾರೆ. ಚಿತ್ತೂರು ಜಿಲ್ಲೆಯ ಪಲಮನೇರು ಬಳಿ ಈ ಘಟನೆ ವರದಿಯಾಗಿದೆ. ಲಾರಿಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಎಲ್ಲರೂ ಪ್ರಾಣ ಕಳೆದುಕೊಂಡಿದ್ದಾರೆ. ಅತಿ ವೇಗದಲ್ಲಿ ಬಂದ ಕಾರು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ವಾಹನದಲ್ಲಿ ಸಿಲುಕಿದ್ದ ಶವಗಳನ್ನು ಹೊರತರುವುದು ಕಷ್ಟಕರವಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.



ಮಾಹಿತಿ ತಿಳಿದ ತಕ್ಷಣ ಪಲಮನೇರು ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಕೈಗೊಂಡರು. ಚಾಲಕ ನಿದ್ದೆ ಮಂಪರಿನಲ್ಲಿದ್ದನೋ ಅಥವಾ ಕಾರಿನ ವೇಗದಿಂದಾಗಿ ನಿಯಂತ್ರಣ ತಪ್ಪಿದ್ದನೋ ಎಂದು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಮೃತ ದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಯುವ ಪೀಳಿಗೆಗೆ ಧಾರ್ಮಿಕ ಚಿಂತನೆಯ ಅರಿವು ಅಗತ್ಯ

ನಾಪೋಕ್ಲು, ಮಾ.4(ದುಗ್ಗಳ)–ಇಂದಿನ ಯುವ ಪೀಳಿಗೆಗೆ ಹಿಂದೂ ಧರ್ಮದ ಚಿಂತನೆಯ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಹಸಂಪರ್ಕ ಸಂಚಾಲಕ ಕುಟ್ಟಂಡ ಪ್ರಿನ್ಸ್ ಬೋಪಣ್ಣ ಅಭಿಪ್ರಾಯಪಟ್ಟಿದ್ದಾರೆ.

ಸಮೀಪದ ಪಾರಾಣೆ ಪ್ರಾಥಮಿಕ ಶಾಲಾ ಮೈದಾನದಲ್ಲಿ ನಡೆದ ಹಿಂದೂ ಸಂಗಮ ಸಭಾ ಕಾರ್ಯಕ್ರಮವನ್ನು ಉದ್ಘಾಟಿಸಿ, ಗ್ರಾಮ ಮಂಡಲಗಳಲ್ಲಿನ ಹಿಂದೂ ಧರ್ಮೀಯರನ್ನು ಜೊತೆಗೂಡಿಸಿಕೊಂಡು ಇಂದಿನ ಯುವ ಪೀಳಿಗೆಗೆ ಧರ್ಮದ ಮಹತ್ವದ ಬಗ್ಗೆ ಅರಿವು ಮೂಡಿಸುವ ಕೆಲಸವನ್ನು ಹಿಂದೂ ಸಂಘಟನೆಗಳು ಮಾಡುತ್ತಿವೆ ಎಂದರು.

ಪಾರಾಣೆ ಹಿಂದೂ ಸಂಗಮ ಮಂಡಲ ಅಧ್ಯಕ್ಷ ಎಳ್ತಂಡ ಬೋಪಣ್ಣ ಮುಂದಿನ ಯುವ ಪೀಳಿಗೆಗೆ ಧರ್ಮ ಮತ್ತು ಸಂಸ್ಕೃತಿ ಮಹತ್ವದ ಅರಿವು ಮೂಡಿಸಿ ಎಲ್ಲರನ್ನೂ ಒಗ್ಗೂಡಿಸುವಂತಾಗಬೇಕು ಎಂದರು.



ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಹಿಂದೂ ಸಂಗಮದ ಶೋಭಾ ಯಾತ್ರೆ.

ಕದ್ದಣಿಯಂಡ ವಂದನಾ ಚಿಣ್ಣಪ್ಪ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ನಮ್ಮ ಹೆಣ್ಣು ಮಕ್ಕಳ ರಕ್ಷಣೆ ಆಗಬೇಕಾಗಿದೆ. ಹೆಣ್ಣುಮಕ್ಕಳು ಮತಾಂತರಕ್ಕೆ ಒಳಗಾಗದಂತೆ ಅರಿವು ಮೂಡಿಸಬೇಕು ಎಂದರು.

ಕೋಣಂಜಗೇರಿ ಗ್ರಾಮದ ಪೊಂಜಂಡ ಮಂದಣ್ಣ ಅಧ್ಯಕ್ಷತೆ ವಹಿಸಿದ್ದರು ಹಿಂದೂ ಸಂಘದ ಉಪಾಧ್ಯಕ್ಷೆ ಬೊಳ್ಳಚೆಟ್ಟಿರ ಜಯಂತಿ, ಕಾರ್ಯದರ್ಶಿ ಪಳಗಂಡ ಬೆಳ್ಳಿಯಪ್ಪ , ವಿಶ್ವ ಹಿಂದೂ ಪರಿಷತ್ ಜಿಲ್ಲಾ ಪ್ರಚಾರ ಪ್ರಮುಖ ಬೊಳಕಾರಂಡಶ್ಯಾನ್ ಮತ್ತಿತರೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಪಾರಾಣೆ ಮೂಲೆ ಅಂಗಡಿಯಿಂದ ಆರಂಭವಾದ ಶೋಭಾ ಯಾತ್ರೆಯ ಮೆರವಣಿಗೆಗೆ ಭಾರತೀಯ ಸೇನೆಯ ನಿವೃತ್ತ ಯೋಧ ಕಿರುಂದಾಡು ಗ್ರಾಮದ ಬಿಟ್ಟಿರ ಮನು ಕುಮಾರ್ ಚಾಲನೆ ನೀಡಿದರು. ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ಶೋಭಾ ಯಾತ್ರೆ ಮೆರವಣಿಗೆ ಪಾರಾಣೆ ಕೃಷಿ ಪತ್ತಿನ ಸಹಕಾರ ಸಂಘದ ರಸ್ತೆ ಮೂಲಕ ತೆರಳಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಸಮಾಪನಗೊಂಡಿತು. ವಿವಿಧ ವೇಷಧಾರಿ ಮಕ್ಕಳು, ಭಾರತಾಂಬೆ ಭಾವಚಿತ್ರ ಒಳಗೊಂಡ ವಾಹನದೊಂದಿಗೆ ಕಳಸ ಹೊತ್ತ ಮಹಿಳೆಯರು, ಕೊಡಗಿನ ವಾಲಗ ಡೊಳ್ಳು ಕುಣಿತ ಚಂಡೆ ವಾದ್ಯ ದೇಶಭಕ್ತಿಯನ್ನು ಸಾರುವ ಪೋಸ್ಟರ್‌ಗಳು, ವಿವಿಧ ಕಲಾ ತಂಡಗಳು ಮೆರವಣಿಗೆಯಲ್ಲಿ ಭಾಗಿಯಾಗಿ ಶೋಭಾಯಾತ್ರೆಯ ಮೆರುಗನ್ನು ಹೆಚ್ಚಿಸಿದವು. ಅಧಿಕ ಸಂಖ್ಯೆಯ ಹಿಂದೂ ಬಾಂಧವರು ಕೇಸರಿ ಶಲ್ಯ ಧರಿಸಿ ಬಾವುಟ ಹಿಡಿದು ಮೆರವಣಿಗೆಯಲ್ಲಿ ಸಾಗಿದರು ಮೆರವಣಿಗೆ ಉದ್ದಕ್ಕೂ ನಾಟ್ಯಾಂಜಲಿ ಮಕ್ಕಳಿಂದ ಸಾಂಪ್ರದಾಯಿಕ ಭಜನೆ ನೃತ್ಯ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಪಡಿತರ ಅಕ್ಕಿ ಸಂಗ್ರಹಿಸುತ್ತಿದ್ದವನ ಬಂಧನ; ಅಕ್ಕಿ ವಶಕ್ಕೆ

ಮಡಿಕೇರಿ, ಮಾ.4–ಸರ್ಕಾರ ಉಚಿತವಾಗಿ ವಿತರಿಸುವ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಕುಶಾಲನಗರ ಗ್ರಾಮಾಂತರ ಪೊಲೀಸರು ಹಾಗೂ ಆಹಾರ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ಅಕ್ಕಿ ಸಹಿತ ಕಣಿವೆ ಹೆಬ್ಬಾಲೆ ಗ್ರಾಮದಲ್ಲಿ ವಶಕ್ಕೆ ಪಡೆದಿದ್ದಾರೆ.

ಆಟೋದಲ್ಲಿ ಗುಜರಿ ವ್ಯಾಪಾರ ಮಾಡಿಕೊಂಡಿದ್ದ ಆರೋಪಿ ಕೆಳಗಡೆ ಅಕ್ಕಿ ಚೀಲವನ್ನು ಇಟ್ಟು, ಯಾರಿಗೂ ಸಂಶಯ ಬಾರದ ರೀತಿಯಲ್ಲಿ ಗುಜರಿ ಸಾಮಾನುಗಳನ್ನು ಮೇಲೆ ಹಾಕಿ ಪ್ರತಿ ಮನೆಗಳಿಗೆ ತೆರಳಿ ವಿನೋದ್ ಅಕ್ಕಿಯನ್ನು ಸಂಗ್ರಹಿಸುತ್ತಿದ್ದ. ಬುಧವಾರ ಮಧ್ಯಾಹ್ನ ಅಕ್ಕಿಯನ್ನು ಸಂಗ್ರಹಿಸುತ್ತಿದ್ದ ಸಂದರ್ಭದಲ್ಲಿಯೇ ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆ ನಿರೀಕ್ಷಕಿ ಸ್ವಾತಿ ಹಾಗೂ ಕುಶಾಲನಗರ ಗ್ರಾಮಾಂತರ ಠಾಣಾಧಿಕಾರಿ ರಾಮಚಂದ್ರ ಹಾಗೂ



ಸಿಬ್ಬಂದಿಗಳು ದಾಳಿ ಮಾಡಿ ಸರ್ಕಾರದ ಯಾವುದೇ ಅನುಮತಿ ಇಲ್ಲದೆ ಅಕ್ಕಿಯನ್ನು ತೆಗೆದುಕೊಳ್ಳುತ್ತಿದ್ದ ವಿನೋದ್ ಹಾಗೂ ಅಕ್ಕಿ ಸಂಗ್ರಹಕ್ಕೆ ಬಳಸಿದ ಗೂಡ್ಸ್ ಆಟೋವನ್ನು ವಶಕ್ಕೆ ಪಡೆದಿದ್ದಾರೆ.

ಹಲವು ತಿಂಗಳಿನಿಂದ ಕಣಿವೆ–ಹೆಬ್ಬಾಲೆ ವ್ಯಾಪ್ತಿಯಲ್ಲಿ ಅಕ್ರಮ ಅಕ್ಕಿ ಸಾಗಾಟ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ದೂರು ನೀಡುತ್ತಿದ್ದರು. ಬುಧವಾರ ಮಧ್ಯಾಹ್ನ ಗುಜರಿ ತುಂಬಿದ ವಾಹನದಲ್ಲಿ ಅಕ್ಕಿ ಮೂಟೆಗಳು ಇರುವ ಬಗ್ಗೆ ಮಾಹಿತಿ ತಿಳಿದ ತಕ್ಷಣ ಆಹಾರ ಇಲಾಖೆ ಅಧಿಕಾರಿಗಳಿಗೆ ಹಾಗೂ ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದ್ದೇವೆ. ಈ ಹಿನ್ನೆಲೆಯಲ್ಲಿ ದಾಳಿ ನಡೆದಿದೆ ಎಂದು ಗ್ರಾಮಸ್ಥ ಮೋಹನ್ ತಿಳಿಸಿದರು. ಸರ್ಕಾರ ಬಡವರ ಹಸಿವು ನಿವಾರಣೆ ಮಾಡುವ ಉದ್ದೇಶದಿಂದ ಜಾರಿಗೆ ತಂದಿರುವ ಪಡಿತರ ವಿತರಣಾ ಯೋಜನೆಯ ಅಕ್ಕಿಯನ್ನು ದುರುಪಯೋಗಪಡಿಸಿಕೊಳ್ಳುವುದು ಗಂಭೀರ ಅಪರಾಧವಾಗಿದೆ. ಈ ರೀತಿ ಅಕ್ರಮಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸರ್ಕಾರದಿಂದ ಸಿಗುವ ಪಡಿತರ ಅಕ್ಕಿಯನ್ನು ಮಾರಾಟ ಮಾಡುವವರ ತವರ ಕಾರ್ಡುಗಳನ್ನು ರದ್ದು ಮಾಡಬೇಕು. ಅವರ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಹಾರ ಇಲಾಖೆ ಮತ್ತು ಪೊಲೀಸ್ ಇಲಾಖೆಯನ್ನು ಶಿರಂಗಾಲ ಗ್ರಾಮದ ವಿವೇಕಾನಂದ ಒತ್ತಾಯಿಸಿದರು.

ಶಾಸಕ ಪೊನ್ನಣ್ಣರಿಗೆ ಗೌಡ ಸಮಾಜದಿಂದ ಅಭಿನಂದನೆ



ವಿರಾಜಪೇಟೆ, ಮಾ.4–ಗೌಡ ಸಮಾಜದ ಅಭಿವೃದ್ಧಿ ಕಾರ್ಯಗಳಿಗೆ ಸಂಪೂರ್ಣ ಸಹಕಾರ ನೀಡುವುದಾಗಿ ಶಾಸಕ ಎ.ಎಸ್ ಪೊನ್ನಣ್ಣ ಭರವಸೆ ನೀಡಿದ್ದಾರೆ.

ಕೊಡಗು ಗೌಡ ಸಮಾಜಕ್ಕೆ ಮದೆನಾಡಿನಲ್ಲಿ ಸರಕಾರದ ವತಿಯಿಂದ ಆರು ಎಕರೆ ಜಾಗ ಮಂಜೂರು ಮಾಡಿಸಿಕೊಟ್ಟ ಶಾಸಕರಿಗೆ ಕೃತಜ್ಞತೆ ಸಮರ್ಪಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಕೊಡಗು ಗೌಡ ಸಮಾಜಕ್ಕೆ ಸರಕಾರಿ ಜಮೀನನ್ನು ಮಂಜೂರು ಮಾಡಿಸಿಕೊಟ್ಟಿರುವುದು ಇಲ್ಲಿಯ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಇತರ ಚಟುವಟಿಕೆಗಳಿಗೆ ಪೂರಕವಾಗಲಿದೆ ಎಂದರು.

ಜಿಲ್ಲೆಯ ಕೃಷಿಕರಲ್ಲಿ ನೂರಾರು ವರ್ಷಗಳಲ್ಲಿ ಕಾಡಿದ್ದ ಜಮ್ಮಾಬಾಣೆ ಸಮಸ್ಯೆಯನ್ನು ಒಂದು ಹಂತಕ್ಕೆ ಕೊಂಡೊಯ್ಯುವಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ನೇತೃತ್ವದಲ್ಲಿ ಹಲವು ಬಾರಿ ಸಭೆ ನಡೆಸಿ ಸದನಕ್ಕೆ ಮಂಡಿಸುವ ಮೂಲಕ ಜಮ್ಮಾಬಾಣೆ ಸಮಸ್ಯೆಯನ್ನು ಕಾಯ್ದೆ ರೂಪಕ್ಕೆ ಜಾರಿಗೊಳಿಸುವಲ್ಲಿ ಪ್ರಯತ್ನಿಸಲಾಗಿದೆ ಎಂದು ಶಾಸಕರು ವಿವರಿಸಿದರು.

ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ಕೊಡಗು ಅರೆಭಾಷೆ ಅಕಾಡೆಮಿಯ ಅಧ್ಯಕ್ಷ ಸದಾನಂದ ಮಾವಜಿ, ವಾಣಿಜ್ಯ ಇಲಾಖೆಯ ನಿವೃತ್ತ ಜಂಟಿ ಆಯುಕ್ತ ನಂಗಾರು ನಾಣಯ್ಯ, ಮನೋಜ್ ಅಂಡ್ ಅಸೋಸಿಯೇಟ್ಸ್ ಮಾಲೀಕ, ವಾಸ್ತುಶಿಲ್ಪಿ ಮುಕ್ಕಾಟಿ ಮನೋಜ್ ಮಾತನಾಡಿದರು. ಒಕ್ಕೂಟದ ಉಪಾಧ್ಯಕ್ಷ ಡಾ. ರಾಜೇಶ್ ತೇನನ ಪ್ರಾಸ್ತಾವಿಕವಾಗಿ ಮಾತನಾಡಿದರು. ಗೌಡ ಸಮಾಜದ ಅಧ್ಯಕ್ಷ ಮುಕ್ಕಾಟಿ ವಾಸು ಗಣಪತಿ ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಖಜಾಂಚಿ ಅಂಬೆಕಲ್ ನವೀನ್, ಕಾರ್ಯದರ್ಶಿ ಪೇರಿಯನ ಉದಯ ಮತ್ತಿತರರು ವೇದಿಕೆಯಲ್ಲಿ ಇದ್ದರು.

ಪೋಸ್ಟರ್ ಬಿಡುಗಡೆ: ಕೊಡಗು ಗೌಡ ಯುವ ವೇದಿಕೆ ವತಿಯಿಂದ ಏ.27 ರಿಂದ ಮೇ 17ರವರೆಗೆ ನಡೆಯುವ ಕ್ರೀಡಾಕೂಟದ ಕುಟುಂಬ ಪೋಸ್ಟರ್‌ನ್ನು ಶಾಸಕರು ಗಣ್ಯರು ಬಿಡುಗಡೆಗೊಳಿಸಿದರು. ಒಕ್ಕೂಟದ ಅಧ್ಯಕ್ಷ ಆನಂದ್ ಕರಂದ್ಲಾಜೆ ಸ್ವಾಗತಿಸಿದರೆ, ಆಶಾ ಪ್ರಾರ್ಥಿಸಿ, ಮುರ್ನಾಡು ಮಹಿಳಾ ಒಕ್ಕೂಟದ ಅಧ್ಯಕ್ಷೆ ಜಸ್ಮಿ ನಿರೂಪಿಸಿ, ಕಾರ್ಯದರ್ಶಿ ರೇಖಾ ಉಲ್ಲಾಸ್ ವಂದಿಸಿದರು.

ಕೆರೆಗಳ ಅಭಿವೃದ್ಧಿಯಿಂದ ಕೃಷಿ ಚಟುವಟಿಕೆಗೆ ಅನುಕೂಲ

ಕುಶಾಲನಗರ, ಮಾ.4– ಗ್ರಾಮೀಣ ಪ್ರದೇಶಗಳಲ್ಲಿ ಕೆರೆಗಳ ಅಭಿವೃದ್ಧಿ ಮಾಡುವುದರಿಂದ ರೈತರ ಕೃಷಿ ಚಟುವಟಿಕೆಗೆ ಅನುಕೂಲವಾಗಲಿದೆ ಎಂದು ಶಾಸಕ ಡಾ.ಮಂತರ್ ಗೌಡ ಹೇಳಿದರು.

ಗೊಂದಿಬಸವನಹಳ್ಳಿ ಗ್ರಾಮದ ರೊಂಡೆ ಕೆರೆಯನ್ನು 1.60 ಕೋಟಿ ಅನುದಾನದಲ್ಲಿ ಅಭಿವೃದ್ಧಿಪಡಿಸಲು ಮಂಗಳವಾರ ಭೂಮಿ ಪೂಜೆ ನೆರವೇರಿಸಿ ಶಾಸಕರು ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರತಿ ವರ್ಷ ಮಳೆಗಾಲದಲ್ಲಿ ರೊಂಡೆಕೆರೆ ತುಂಬಿ ಕೆರೆಯ ತಡೆಗೋಡೆ ಒಡೆದು ರೈತರ ಜಮೀನು ಹಾಗೂ ವಿವಿಧ ಬಡಾವಣೆಗಳ ಮನೆ ಗಳಿಗೆ ನೀರು ನುಗ್ಗಿ ತೊಂದರೆ ಉಂಟಾಗುತ್ತಿತ್ತು.ಈ ಹಿನ್ನೆಲೆ ರೈತರ ಹಾಗೂ ಗ್ರಾಮದ ಜನರ ಬೇಡಿಕೆಯನ್ನು ಸಣ್ಣ ನೀರಾವರಿ ಸಚಿವ ಬೋಸ್ ರಾಜ್ ಅವರಿಗೆ ತಿಳಿಸಿ ಮನವಿ ಮಾಡಿದ ಮೇರೆಗೆ ಕೆರೆ ಅಭಿವೃದ್ಧಿಗೆ ಅನುದಾನ ಒದಗಿಸಿದ್ದಾರೆ. ಸಚಿವರಿಗೆ ರೈತರ ಪರವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಈಗಾಗಲೇ ಒತ್ತುವರಿಯಾಗಿರುವ ಕೆರೆಯ ಜಾಗವನ್ನು ಸರ್ವೆ ಕಾರ್ಯವನ್ನು ಮಾಡಿ ಒತ್ತುವರಿ ತೆರವುಗೊಳಿಸಬೇಕು. ಈ ಕಾರ್ಯಕ್ಕೆ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಕುಶಾಲನಗರದ ತಾವರೆಕೆರೆಯನ್ನು



ಶಾಸಕ ಡಾ.ಮಂತರ್ ಗೌಡ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿದರು.

ರೂ.3 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗಿದ್ದು ಸದ್ಯದಲ್ಲೇ ಕಾಮಗಾರಿಗೆ ಚಾಲನೆ ನೀಡಲಾಗುವುದು. ಮಾಜಿ ಮುಖ್ಯಮಂತ್ರಿ ದಿ.ಆರ್.ಗುಂಡೂರಾವ್ ಅವರ ಪ್ರತಿಮೆಯನ್ನು ಪುರಸಭೆ ಮುಂಭಾಗದಲ್ಲಿ ಹಾಗೂ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಅವರ ಪ್ರತಿಮೆಯನ್ನು ಗಣಪತಿ ದೇವಾಲಯ ಸರ್ಕಲ್‌ನಲ್ಲಿ ಅಳವಡಿಸುವ ಮೂಲಕ ಮಹಾನ್ ವ್ಯಕ್ತಿಗಳಿಗೆ ಗೌರವ ಸಲ್ಲಿಸಲಾಗುತ್ತದೆ ಎಂದರು.

ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ವಿ.ಪಿ.ಶಶಿಧರ್, ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ ಗೋವಿಂದಪ್ಪ, ಜಲಮಂಡಳಿ ಮಾಜಿ ಅಧ್ಯಕ್ಷೆ ಕೆ.ಪಿ.ಚಂದ್ರಕಲಾ, ಕೂಡ ಮಾಜಿ ಅಧ್ಯಕ್ಷ ಬಿ.ಜಿ. ಮಂಜುನಾಥ್, ಮಹಿಳಾ ಕಾಂಗ್ರೆಸ್ ಘಟಕದ ಜಿಲ್ಲಾಧ್ಯಕ್ಷೆ ಜಿ.ಆರ್.ಪುಷ್ಪಲತಾ, ಪುರಸಭೆ ನಾಮನಿರ್ದೇಶನ ಸದಸ್ಯರಾದ ಗೊಂದಿಬಸವನಹಳ್ಳಿ ಪ್ರಕಾಶ್, ಜಗದೀಶ್, ತಹಸೀಲ್ದಾರ್ ಕಿರಣ್ ಗೌರಯ್ಯ, ಪುರಸಭೆ ಮುಖ್ಯಾಧಿಕಾರಿ ಗಿರೀಶ್ ಕುಮಾರ್, ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕುಮಾರಸ್ವಾಮಿ, ಕಾಂಗ್ರೆಸ್ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಇದೇ ಸಂದರ್ಭ ಪುರಸಭೆ ಮಾಜಿ ಸದಸ್ಯ ಎಂ.ಎಂ.ಪ್ರಕಾಶ್ ಹಾಗೂ ಗ್ರಾಮಸ್ಥರು ಶಾಸಕ ಮಂತರ್ ಗೌಡ ಅವರನ್ನು ಸನ್ಮಾನಿಸಿ ಗೌರವಿಸಿದರು.

ಪತ್ರಿಕೋದ್ಯಮದ ಭೀಷ್ಮ ಬಿ.ಎಸ್.ಗೋಪಾಲಕೃಷ್ಣ ಹೆಸರಿನ ರಸ್ತೆ ನಾಮಫಲಕ ಉದ್ಘಾಟನೆ

ಮಡಿಕೇರಿ,ಮಾ.4–ಇಲ್ಲಿನ ಪತ್ರಿಕಾ ಭವನದಿಂದ ಜಿಲ್ಲಾ ಕೈಗಾರಿಕಾ ಕೇಂದ್ರದವರೆಗಿನ ರಸ್ತೆಗೆ ಪತ್ರಿಕೋದ್ಯಮದ ಭೀಷ್ಮ ಬಿ.ಎಸ್. ಗೋಪಾಲಕೃಷ್ಣ ಅವರ ಹೆಸರನ್ನು ನಾಮಕರಣ ಮಾಡಲಾಯಿತು.

ನಾಮಫಲಕವನ್ನು ಶಾಸಕ ಡಾ.ಮಂಥರ್ ಗೌಡ, ರಾಜಲಕ್ಷ್ಮಿ ಗೋಪಾಲಕೃಷ್ಣ, ನಗರಸಭೆಯ ಉಪಾಧ್ಯಕ್ಷ ಮಹೇಶ್ ಜೈನಿ, ನಗರಸಭೆಯ ಸದಸ್ಯ ಬಿ.ವೈ. ರಾಜೇಶ್, ಪೌರಾಯುಕ್ತ ಹೆಚ್.ಆರ್. ರಮೇಶ್, ಜಿ.ರಾಜೇಂದ್ರ ಅನಾವರಣಗೊಳಿಸಿದರು. ನಗರಸಭೆಯ ಸದಸ್ಯರು ಸಾರ್ವಜನಿಕರು ಹಾಜರಿದ್ದರು. ತರುವಾಯ ರೆಡ್‌ಬ್ರಿಕ್ಸ್ ಇನ್‌ನ ಸತ್ಕಾರ್ ಸಭಾಂಗಣದಲ್ಲಿ ಶಾಸಕ ಡಾ.ಮಂಥರ್ ಗೌಡ, ಅವರು ಖ್ಯಾತ ಜಾದೂಗಾರ ವಿಕ್ರು ಜಾದೂಗಾರ್ ಅವರ ಆಕರ್ಷಕ ಮ್ಯಾಜಿಕ್ ಪ್ರದರ್ಶನದ ಮೂಲಕ ನೆರವೇರಿಸಿದರು.



ಪತ್ರಕರ್ತರ ಸಂಘದ ಅಧ್ಯಕ್ಷ ಹೆಚ್.ಟಿ. ಅನಿಲ್ ಹಿರಿಯ ಪತ್ರಕರ್ತ ಜಿ.ರಾಜೇಂದ್ರ, ಬಿ.ಜಿ. ಅನಂತಶಯನ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ವೈ. ರಾಜೇಶ್, ನಗರ ಸಭೆಯ ಉಪಾಧ್ಯಕ್ಷ ಮಹೇಶ್ ಜೈನಿ ಮಾತನಾಡಿದರು.

ರಾಜಲಕ್ಷ್ಮಿ ಗೋಪಾಲಕೃಷ್ಣ ಅವರನ್ನು ಶಾಸಕರು ಗೌರವಿಸಿದರು. ನಗರಸಭಾ ಸದಸ್ಯರಿಗೆ ಶಕ್ತಿ ಬಳಗದಿಂದ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಬಿಳಿಗೇರಿ, ಕ್ಷೇಮಾಭಿವೃದ್ಧಿ ಸಮಿತಿ ಅಧ್ಯಕ್ಷ ಜಿ.ವಿ. ರವಿಕುಮಾರ್, ರಂಜಿತ್ ಕವಲಪಾರ, ಜಿ.ಚಿದ್ವಿಲಾಸ್, ಪ್ರಮುಖರಾದ ಜಿ.ಟಿ. ರಾಘವೇಂದ್ರ, ಕೆ.ಎಂ.ಗಣೇಶ್, ರತ್ನಾಕರ್ ರೈ, ಕ್ಯಾರಿ ಕಾರ್ಯಪ್ಪ ಕೆ.ಟಿ.ಬೇಬಿ ಮ್ಯಾಥ್ಯು, ಪ್ರಕಾಶ್ ಆಚಾರ್ಯ, ಕಾಂತಿ ಸತೀಶ್, ಪ್ರಸಾದ್ ಗೌಡ, ಕೆ.ಕೆ. ವಿಶ್ವನಾಥ್, ಪ್ರಕಾಶ್ ಪೂವಯ್ಯ, ಓಂಶ್ರೀ ದಯಾನಂದ, ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಯಳಂದೂರಿನಲ್ಲಿ ಒಳ ಮೀಸಲಾತಿ ವಿರೋಧಿಸಿ ಬಲಗೈ ಸಮುದಾಯದಿಂದ ಬೃಹತ್ ಪ್ರತಿಭಟನೆ

ಯಳಂದೂರು, ಮಾ.4– ತಾಲೂಕು ಬಲಗೈ ಸಮುದಾಯಗಳ ಒಕ್ಕೂಟ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಸೇವಾ ಸಮಿತಿ ವತಿಯಿಂದ ಒಳ ಮೀಸಲಾತಿಯಲ್ಲಿ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದ್ದು ಇದನ್ನು ರದ್ದುಗೊಳಿಸಬೇಕೆಂದು ಆಗ್ರಹಿಸಿ ಬಲಗೈ ಸಮುದಾಯದವರು ಪಟ್ಟಣದಲ್ಲಿ ಬುಧವಾರ ಸಹಸ್ರಾರು ಸಂಖ್ಯೆಯಲ್ಲಿ ಸೇರಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದ ಮುಂಭಾಗದಲ್ಲಿ ಜಮಾವಣೆಗೊಂಡ ಸಾವಿರಾರು ಜನರು ಇಲ್ಲಿಂದ ಮೆರವಣಿಗೆ ಮೂಲಕ ಪ್ರತಿಭಟನೆ ಹೊರಟರು. ಪಟ್ಟಣದ ಎಸ್‌ಬಿಐ ವೃತ್ತದಲ್ಲಿ ಕೆಲಕಾಲ ರಸ್ತೆ ತಡೆ ನಡೆಸಲಾಯಿತು. ರಾಜ್ಯ ಸರ್ಕಾರ ಇದನ್ನು ಸಮರ್ಥಿಸಿಕೊಳ್ಳುತ್ತಿರುವ ಸಚಿವರು, ಶಾಸಕರ ವಿರುದ್ಧ ಧಿಕ್ಕಾರಗಳನ್ನು ಕೂಗಿ ತಮ್ಮ ಆಕ್ರೋಶ ವ್ಯಕ್ತಪಡಿಸಲಾಯಿತು. ನಂತರ ಪಟ್ಟಣದ ತಹಸೀಲ್ದಾರ್ ಕಚೇರಿ ಮುಂಭಾಗ ಇವರು ಜಮಾವಣೆಗೊಂಡರು.

ಈ ಸಂದರ್ಭದಲ್ಲಿ ನಾಗಮೋಹನ್ ದಾಸ್ ವರದಿ ಅವೈಜ್ಞಾನಿಕವಾಗಿದೆ. ಇದರಲ್ಲಿ ಅನೇಕ ತಾಂತ್ರಿಕ ತೊಂದರೆಗಳಿವೆ. ಇದು ಸಾಮಾಜಿಕ ಅಸಮಾಧಾನಕ್ಕೆ ಕಾರಣವಾಗಿದೆ. ಒಳಮೀಸಲಾತಿ ಜಾರಿಯಾದ ಮೇಲೆ ರೋಸ್ಟರ್ ಬಿಂದುಗಳ ನಿಗಧಿಯಲ್ಲಿ ಅನೇಕ ಸಮಸ್ಯೆಗಳು ಕಂಡುಬರುತ್ತಿವೆ. ಪ್ರವರ್ಗ ಎ ಅನ್ನು 1ನೇ ಸ್ಥಾನದಲ್ಲಿ, ಪ್ರವರ್ಗ ಬಿ ಅನ್ನು 9ನೇ ಸ್ಥಾನದಲ್ಲಿ ಹಾಗೂ ಪ್ರವರ್ಗ ಸಿ ಅನ್ನು 15ನೇ ಸ್ಥಾನದಲ್ಲಿ ನಿಗಧಿಪಡಿಸಿರುವುದು ಅನೇಕ ಗೊಂದಲಗಳಿಗೆ ಕಾರಣವಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.



ಯಳಂದೂರು ಪಟ್ಟಣದಲ್ಲಿ ಬಲಗೈ ಸಮುದಾಯದವರು ಬೃಹತ್ ಸಂಖ್ಯೆಯಲ್ಲಿ ನೆರೆದು ಪ್ರತಿಭಟಿಸಿದರು.

ಈ ನೀತಿಯನ್ನು ಕೊಳ್ಳೇಗಾಲ ವಿಧಾನ ಸಭಾ ಕ್ಷೇತ್ರದ ಶಾಸಕ ಎ.ಆರ್. ಕೃಷ್ಣಮೂರ್ತಿ ಸಹಿ ಹಾಕದೆ ತಮ್ಮ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಬಲಗೈ ಸಮುದಾಯದ ಸಚಿವರು ಹಾಗೂ ಶಾಸಕರು ಮೌನವಾಗಿದ್ದಾರೆ. ಇದು ನಮ್ಮನ್ನು ತುಳಿಯುವ ತಂತ್ರವಾಗಿದೆ. ಹಾಗಾಗಿ ಈ ಸಮಸ್ಯೆ ಸಂಪೂರ್ಣವಾಗಿ ಬಗೆಹರಿಯುವ ತನಕ ಶಿಕ್ಷಣ ಮತ್ತು ಉದ್ಯೋಗಕ್ಕೆ ಅನ್ವಯಿಸುತ್ತಿರುವ ಒಳಮೀಸಲಾತಿಯ ಕಾರ್ಯ ಚಟುವಟಿಕೆಗಳಿಗೆ ಶೀಘ್ರ ತಡೆಯಾಜ್ಞೆ ನೀಡಬೇಕು ಎಂದು ಶಿರಸ್ತೇದಾರ್ ಶಾಂತಿ ರವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಅಂಬೇಡ್ಕರ್ ಸೇವಾ ಸಮಿತಿ ಅಧ್ಯಕ್ಷ ಕೆಸ್ತೂರು ಸಿದ್ಧರಾಜು ಪ್ರಧಾನ ಕಾರ್ಯದರ್ಶಿ ಯರಿಯೂರು ನಟರಾಜು ದಸಂಸ ಜಿಲ್ಲಾ ಸಂಚಾಲಕ ಯರಿಯೂರು ಸಿ.ರಾಜಣ್ಣ, ಜಿಪಂ ಮಾಜಿ ಸದಸ್ಯ ವಡಗೆರೆ ದಾಸ್, ದಲಿತ ಸಂಘಟನೆಗಳ ಒಕ್ಕೂಟದ ಜಿಲ್ಲಾ ಸಂಚಾಲಕ ಸಿ.ಕೃಷ್ಣಮೂರ್ತಿ, ದುಗ್ಗಹಟ್ಟಿ ಮಾದೇಶ್, ಮಾಂಬಳ್ಳಿ ರಾಮು, ವೆಂಕಟೇಶ್, ಮಲ್ಲು, ಮಂಜುನಾಥ್, ಹೊನ್ನೂರು ಚಿನ್ನಪ್ಪ, ಜೆ.ಶ್ರೀನಿವಾಸ್, ನಂಜುಂಡಸ್ವಾಮಿ, ಕೊಮಾರನಪುರ ಪುಟ್ಟರಾಜು, ಕೆಸ್ತೂರು ಮಧು, ಕಪಾಲಿ ಸೇರಿದಂತೆ ತಾಲೂಕಿನ ವಿವಿಧ ಗ್ರಾಮಗಳಿಂದ ಬಂದಿದ್ದ ಸಾವಿರಾರು ಮಂದಿ ಭಾಗವಹಿಸಿದ್ದರು.

ಶಾಸಕ ಪುಟ್ಟರಂಗಶೆಟ್ಟಿ ವಿರುದ್ಧದ ಆರೋಪ ಸತ್ಯಕ್ಕೆ ದೂರ

ಚಾಮರಾಜನಗರ: ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಸರ್ಕಾರದ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಬಿಜೆಪಿ ಮುಖಂಡ ನಿಜಗುಣರಾಜು ಮಾಡಿರುವ ಆರೋಪ ಸತ್ಯಕ್ಕೆ ದೂರವಾದುದು ಎಂದು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಿಜಗುಣರಾಜು ಅವರಿಗೆ ಟೀಕೆ ಮಾಡುವುದು ಒಂದು ಚಾಳಿಯಾಗಿದೆ. ಅವರು ಇದೇ ರೀತಿ ಇಲ್ಲ ಸಲ್ಲದ ಆರೋಪಗಳನ್ನು ಮಾಡುವುದನ್ನು ಮುಂದುವರೆಸಿದರೆ ಅವರ ಲೋಪದೋಷಗಳನ್ನು ಬಹಿರಂಗಪಡಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಿಎಂ ಸಿದ್ದರಾಮಯ್ಯ ಅವರು ನೀಡಿರುವ 50 ಕೋಟಿ ಅನುದಾನವನ್ನು ಯಾವ ಯಾವ ಇಲಾಖೆಗೆ ಹಂಚಿಕೆ ಮಾಡಬೇಕು ಎಂಬುದನ್ನು ಸರ್ಕಾರ ಮಾನದಂಡ ಹಾಕಿಕೊಟ್ಟಿದೆ. 50 ಕೋಟಿಯಲ್ಲಿ 5ರಿಂದ 6 ಕೋಟಿ ಬಿಟ್ಟರೆ ಉಳಿದ ಹಣ ಬಂದಿಲ್ಲ. ಇದರ ಬಗ್ಗೆ ಮಾಹಿತಿ ಇಲ್ಲದೇ ನಿಜಗುಣರಾಜು ಆರೋಪ ಮಾಡುತ್ತಿದ್ದಾರೆ ಎಂದರು.

ವೀರನಪುರ ಬಳಿ 1.30 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ ನಿರ್ಗತಿಕರ ಪುನರ್ವಸತಿ ಕೇಂದ್ರಕ್ಕೆ ಹೋಗುವ ರಸ್ತೆಯಾಗಿರುವುದರಿಂದ ಅಭಿವೃದ್ಧಿ ಪಡಿಸಲಾಗುತ್ತಿದೆ. 5 ಎಕರೆ ಸರ್ಕಾರಿ ಜಮೀನು ಕಬಳಿಸುವ ಹುನ್ನಾರ ಎಂದು ಹೇಳುವ ನಿಜಗುಣರಾಜು



ಅವರು ಈ ಬಗ್ಗೆ ಆಧಾರಗಳಿದ್ದರೆ ನೀಡಲಿ ಎಂದು ಸವಾಲು ಹಾಕಿದರು.

ಮಾಲಂಗಿಯಿಂದ ಚಾ.ನಗರಕ್ಕೆ ಕಾವೇರಿ ನೀರು ತರುವ ಯೋಜನೆಗೆ 157 ಕೋಟಿ ವೆಚ್ಚದ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿರುವುದರಿಂದಲೇ 4 ಬಾರಿ ಶಾಸಕರನ್ನಾಗಿ ಜನರು ಆಯ್ಕೆ ಮಾಡಿದ್ದಾರೆ ಎಂದರು.

ಪುಟ್ಟರಂಗಶೆಟ್ಟರು ಶಾಸಕರಾಗುವ ಮುಂಚಿನಿಂದಲೂ ಕರಿಕಲ್ಲು ಉದ್ಯಮಿಯಾಗಿದ್ದಾರೆ. ಅಲ್ಲದೇ ವ್ಯವಸಾಯ ಕೂಡ ಮಾಡುತ್ತಿದ್ದು ಅದರಲ್ಲಿ ಬಂದ ಆದಾಯದಲ್ಲಿ ಆಸ್ತಿ ಖರೀದಿಸಿದ್ದು ಎಲ್ಲವೂ ಕಾನೂನು ಬದ್ಧವಾಗಿದೆ. ಬಿಜೆಪಿ ಅವಧಿಯಲ್ಲಿ ಚಾ.ನಗರ ಜಿಲ್ಲೆಗೆ ಯಾವುದೇ ಅನುದಾನ ಕೊಡುತ್ತಿರಲಿಲ್ಲ. ಆದರೆ, ಸಿದ್ದರಾಮಯ್ಯ ಅವರು ಪ್ರತಿ ಬಜೆಟ್‌ನಲ್ಲಿಯೂ ಒಂದಲ್ಲೊಂದು ಅನುದಾನ ನೀಡುತ್ತಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಚೂಡಾಧ್ಯಕ್ಷ ಮಹಮ್ಮದ್ ಅಸ್ಗರ್, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಸೋಮೇಶ್ವರ್, ಕನಿಷ್ಠ ವೇತನಾ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಉಮೇಶ್ ಎಸ್‌ಪಿಕೆ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ.ಶಿವಮೂರ್ತಿ, ನಗರಸಭಾ ಮಾಜಿ ಸದಸ್ಯರಾದ ಚೆಂಗುಮಣಿ, ಕರಿನಂಜನಪುರ ಸ್ವಾಮಿ, ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ ಹಾಜರಿದ್ದರು.

ಮಾದಪ್ಪನ ಹುಂಡಿಯಲ್ಲಿ 3.41 ಕೋಟಿ ಸಂಗ್ರಹ



ಹನೂರು: ಜಿಲ್ಲೆಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದ ಮಹದೇಶ್ವರಸ್ವಾಮಿ ದೇವಸ್ಥಾನದ ಹುಂಡಿ ಹಣ ಎಣಿಕೆಯಲ್ಲಿ ಈ ಬಾರಿ 28 ದಿನಗಳ ಅವಧಿಯಲ್ಲಿ 3.41 ಕೋಟಿ ಹಣ ಸಂಗ್ರಹವಾಗಿದೆ.

ಮಹದೇಶ್ವರ ಬೆಟ್ಟದ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಸಂಕೀರ್ಣದಲ್ಲಿ ಸಾಲೂರು ಬೃಹನ್ ಮಠದ ಅಧ್ಯಕ್ಷ ಶ್ರೀಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರ ಸಮ್ಮುಖದಲ್ಲಿ ಹುಂಡಿಗಳನ್ನು ತೆರೆಯಲಾಯಿತು. ಬಳಿಕ ಸಿಸಿ ಕ್ಯಾಮೆರಾ ಕಣ್ಗಾವಲಿನಲ್ಲಿ ಎಣಿಕೆ ಕಾರ್ಯ ಪ್ರಾರಂಭಿಸಲಾಯಿತು.

ಸರ್ಕಾರಿ ರಜಾ ದಿನ, ಶಿವರಾತ್ರಿ ಜಾತ್ರೆ, ಅಮಾವಾಸ್ಯೆ ಹಾಗೂ ವಿಶೇಷ ದಿನಗಳ ಹಿನ್ನೆಲೆಯಲ್ಲಿ ಮಾದಪ್ಪನ ಸನ್ನಿಧಿಯಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವ ಸೇರಿದಂತೆ ಇನ್ನಿತರ ಪೂಜಾ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಸ್ಥಾನಕ್ಕೆ ಭೇಟಿ ನೀಡಿದ್ದರಿಂದ ಹರಕೆಯ ರೂಪದಲ್ಲಿ 3,41,44,208ರೂ. ನಗದು, 71 ಗ್ರಾಂ ಚಿನ್ನ ಹಾಗೂ 2 ಕೆಜಿ 50 ಗ್ರಾಂ ಬೆಳ್ಳಿ ಸಂಗ್ರಹವಾಗಿದೆ.

ಇದಲ್ಲದೇ ಹುಂಡಿಯಲ್ಲಿ ಚಲಾವಣೆಯಲ್ಲಿ ಇಲ್ಲದ 2,000 ಮುಖಬೆಲೆಯ 6 ನೋಟುಗಳು ಹಾಗೂ ವಿದೇಶಿಯ 19 ನೋಟುಗಳನ್ನು ಭಕ್ತರು ಹುಂಡಿಯಲ್ಲಿ ಹಾಕಿದ್ದಾರೆ. ಎಣಿಕೆ ಕಾರ್ಯದಲ್ಲಿ ಶ್ರೀಮಲೆ ಮಹದೇಶ್ವರ ಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು, ಉಪಕಾರ್ಯದರ್ಶಿ ಚಂದ್ರಶೇಖರ, ಪ್ರಾಧಿಕಾರದ ಸಿಬ್ಬಂದಿ, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಸೇರಿದಂತೆ ಇತರರು ಹಾಜರಿದ್ದರು.

ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

ಕೊಳ್ಳೇಗಾಲ: ತಾಲೂಕಿನ ಮಳ್ಳಹಳ್ಳಿ ಮಾಳ ಗ್ರಾಮದ ಬಳಿ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಆಟೋದಲ್ಲಿ ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆಯವರು ಜಂಟಿ ಕಾರ್ಯಾಚರಣೆ ನಡೆಸಿ ಬಂಧಿಸಿದ್ದಾರೆ.

ಟಿ.ನರಸೀಪುರ ತಾಲೂಕಿನ ಹಳೇ ನರೀಪುರ ನಿವಾಸಿ ವಾಸೀಮ್ ಪಾಷ ಎಂಬಾತ ಬಂಧಿತ ಆರೋಪಿ. ಈತನಿಂದ 501 ಕೆ.ಜಿ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ.

ಈತ ತಾಲೂಕಿನ ಮಳಹಳ್ಳಿ ಮಾಳ ಗ್ರಾಮ ಸುತ್ತಮುತ್ತಲಿನಲ್ಲಿ ಕಡಿಮೆ ಬೆಲೆಗೆ ಪಡಿತರ ಅಕ್ಕಿಯನ್ನು ಖರೀದಿ ಮಾಡಿ ಸಾಗಾಣಿಕೆ ಮಾಡುತ್ತಿದ್ದ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಈ ಸಂಬಂಧ ಅಗರ ಮಾಂಬಳ್ಳಿ



ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಬಂಧಿತನ ಮೇಲೆ ಕಾನೂನು ಕ್ರಮ ಜರುಗಿಸಲಾಗಿದೆ. ದಾಳಿಯಲ್ಲಿ ಆಹಾರ ನಿರೀಕ್ಷಕ ಎನ್.ಎಂ.ಪ್ರಸಾದ್, ಹೆಡ್ ಕಾನ್ಸ್‌ಟೇಬಲ್ ಪರಶಿವಮೂರ್ತಿ, ಪೇದೆ ನಾಗರಾಜು ಅಂಗಡಿ, ಶಿವಕುಮಾರ್ ಇದ್ದರು.

ತಾಯಿಯೊಂದಿಗೆ ಚಿರತೆ ಮರಿಗಳನ್ನು ಸೇರಿಸಲು ಯತ್ನ

ಮರಿಗಳನ್ನು ಬೋನಿನಲ್ಲಿಟ್ಟು ಕಾದ ಅರಣ್ಯ ಇಲಾಖೆ ಸಿಬ್ಬಂದಿ, ಬಾರದ ಚಿರತೆ

ಗುಂಡ್ಲುಪೇಟೆ, ಮಾ.4– ತಾಲೂಕಿನ ಪಡಗೂರು ಗ್ರಾಮದ ಜಮೀನಿನಲ್ಲಿ ಸಿಕ್ಕಿದ ಚಿರತೆ ಮರಿಗಳನ್ನು ಮತ್ತೆ ತಾಯಿಯೊಂದಿಗೆ ಸೇರಿಸಲು ಅರಣ್ಯ ಇಲಾಖೆ ಮುಂದಾಗಿದೆ.



ಮಂಗಳವಾರ ತಾಲೂಕಿನ ಪಡಗೂರು ಗ್ರಾಮದ ಶಿವಕುಮಾರ್ ಎಂಬುವರ ಬಾಳೆಯ ತೋಟದಲ್ಲಿ ಎರಡರಿಂದ ಮೂರು ತಿಂಗಳು ವಯಸ್ಸಿನ ಎರಡು ಚಿರತೆ ಮರಿಗಳು ಪತ್ತೆಯಾಗಿವೆ. ವಿಷಯ ತಿಳಿದ ಅರಣ್ಯ ಸಿಬ್ಬಂದಿ ಮರಿಗಳನ್ನು ಹುಡುಕಿಕೊಂಡು ಬರುವ ತಾಯಿಗಾಗಿ ತಡರಾತ್ರಿ ಬೋನಿನೊಳಗೆ ಇರಿಸಿ ಕಾದು ಕುಳಿತರೂ ಅದು ಬರಲಿಲ್ಲ. ಈ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ ಪಟ್ಟಣದ ಬಫರ್ ವಲಯದ ಕಚೇರಿಗೆ ಕೊಂಡೊಯ್ಯಲಾಗಿದೆ.

ಅವುಗಳ ಆರೋಗ್ಯವನ್ನು ಪಶು ವೈದ್ಯರಿಂದ ಪರೀಕ್ಷಿಸಿ ಹಾಲು ಕೊಡಲಾಗುತ್ತಿದೆ. ಬುಧವಾರ ಸಂಜೆ ಸಹಾ ಅವು ಸಿಕ್ಕಿದ ಸ್ಥಳದಲ್ಲಿ ಇರಿಸಿ ತಾಯಿಯೊಂದಿಗೆ ಸೇರಿಸಲು ಪ್ರಯತ್ನಿಸಲಾಗುವುದು ಎಂದು ಪ್ರಭಾರ ಆರ್‌ಎಫ್‌ಓ ಶಿವಕುಮಾರ್ ತಿಳಿಸಿದ್ದಾರೆ.

ಬೇಡಿಕೆ ಈಡೇರಿಸುವಂತೆ ಮನವಿ



ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಚಾಮರಾಜನಗರ ಜಿಲ್ಲಾ ಸರ್ಕಾರಿ ಪರವಾನಗಿ ಭೂ ಮಾಪಕರ ಸಂಘದ ವತಿಯಿಂದ ಸರ್ಕಾರಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರಾದ ಅಜಿತ್ ರವಿ ಅವರಿಗೆ ಮನವಿ ಸಲ್ಲಿಸಿತು. ಈ ಸಂದರ್ಭದಲ್ಲಿ ಅಧೀಕ್ಷಕ ಪ್ರಕಾಶ್, ಸೂಪರ್‌ವೈಸರ್ ಮಹದೇವ ಪ್ರಸಾದ್, ಸಂಘದ ಮುಖಂಡರಾದ ಮಹೇಶ್, ವೆಂಕಟೇಗೌಡ, ನಂದೀಶ್, ಮಹೇಂದ್ರ ಕುಮಾರ್, ಯೋಗೇಶ್, ಸಿದ್ದರಾಜು, ನಮ್ರತಾ, ಕಾವ್ಯಶ್ರೀ ಸೇರಿದಂತೆ ಮತ್ತಿತರರಿದ್ದರು.

ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿಯಿಂದ ಎಸ್ಪಿಗೆ ಸನ್ಮಾನ



ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ವತಿಯಿಂದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಅವರನ್ನು ಸನ್ಮಾನಿಸಲಾಯಿತು. ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಳ ಕಚೇರಿಯಲ್ಲಿ ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಕೆ.ವೀರಭದ್ರಸ್ವಾಮಿ ಅವರ ನೇತೃತ್ವದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಮುತ್ತುರಾಜು ಅವರನ್ನು ಭೇಟಿ ಮಾಡಿ ಜಿಲ್ಲೆಯ ಸಮಸ್ಯೆಗಳು, ಕಾನೂನು ಸುವ್ಯವಸ್ಥೆ ಬಗ್ಗೆ ಚರ್ಚಿಸಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾ ಅಭಿವೃದ್ಧಿ ಹೋರಾಟ ಸಮಿತಿಯ ಉಪಾಧ್ಯಕ್ಷ ಲಿಂಗಪ್ಪ ಮರಿಯಾಲ, ಸ್ಟೈಲ್ ಮಂಜುನಾಥ್, ಮಹೇಶ್ ಹೊಂಗನಪುರ, ಗೌಡಿಕೆ ನಂಜುಂಡಸ್ವಾಮಿ, ಕಾಳನ ಹುಂಡಿ ಕುಮಾರ್, ಸಾಗಡೆ ಲೋಕೇಶ್, ರಾಮಸಮುದ್ರ ಕುಮಾರ್ ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಬಾಡಿಗೆಗೆ ಇದೆ
(ಸಸ್ಯಾಹಾರಿಗಳಿಗೆ ಮಾತ್ರ) ಜೆಎಸ್ಎಸ್ ಮಹಾವಿದ್ಯಾಪೀಠದ ಎದುರು, ರಾಮಾನುಜ ರಸ್ತೆ, ಗ್ರೌಂಡ್ ಫ್ಲೋರ್, 1 BHK. ಪೂರ್ವ ದಿಕ್ಕು, ಆಫೀಸ್‌ಗೂ ಯೋಗ್ಯವಾಗಿದೆ – ಮೊಬೈಲ್
9449886322

SITE FOR SALE
Muda allorted Dhatgalli 3rd stage, 40X60 West facing 50 meters to ring road, Contact
6362607967

ಶುಂಠಿ ಕೃಷೀಕರೆ
ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ-ನೀಮ್
#203, ಬನ್ನಿಮಂಟಪ, ಮೈಸೂರು–570015
80888-87802

ಶ್ರೀ ಆರ್ಕೇಷ್ಟ್ರಾ

ಪಿರಿಯಾಪಟ್ಟಣ, ಮೈಸೂರು
ಮದುವೆ, ಹಬ್ಬ, ಜನ್ಮದಿನ ಹಾಗೂ ಇನ್ನಿತರ ಎಲ್ಲಾ ಶುಭ ಸಮಾರಂಭಗಳಿಗೆ, ಕರೋಕೆ & ಲೈವ್ ಆರ್ಕೇಷ್ಟ್ರಾ. ಸಂಪರ್ಕಿಸಿ
8904537162

ಬೇಕಾಗಿದ್ದಾರೆ
ಶ್ರಾದ್ಧದ ಮನೆಗೆ ಅಡುಗೆ ಪುರುಷ ಸಹಾಯಕರು ಬೇಕಾಗಿದ್ದಾರೆ.
Mob: 9845725317

SITES FOR SALE
30X40, 40X50
Near Ring Road
Vijayanagar 4th Stage - 1.10 Cr
Niveditha Nagar - 1.15 Cr
Dattagalli 40 X 50 - 1.40 Cr
Call: 81230 75038
Brokers Excuse

FOR SALE 40X60 SITE @SHARADHA LAYOUT, JP NAGAR
30x50, 40x50 Sites @ 50 Ft Road
Sites@ Brahmins Lyt, Nr RT Ngr
20x30 Site @ Vijaya Nagar 4th Stage.
20x30, 30x40 Sites @ Bogadi
Commercial Properties @ Ring Road | 2 & 3 BHK APARTMENTS @ RK NAGAR
PRAKRUTHI PROPERTIES
95386 90359, 90359 90359

30x40 SITE FOR SALE
* J.P. Nagar ring road (attached to Judge Quarters).
* Vijayanagara 4th Stage (Behind NPS). Contact:
Mob: 9886048471

ಬೇಕಾಗಿದ್ದಾರೆ
ಫುಟ್‌ವೇರ್ ಅಂಗಡಿಯಲ್ಲಿ ಕೆಲಸ ನಿರ್ವಹಿಸಲು ಸೇಲ್ಸ್‌ಮೆನ್ಸ್ ಹುಡುಗರು/ ಹುಡುಗಿಯರು ಬೇಕಾಗಿದ್ದಾರೆ.
Time : 11 AM - 9 PM
8762333676

30x40 ಅಳತೆಯ ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ಕುವೆಂಪುನಗರ ಪೊಲೀಸ್ ಠಾಣೆ ರಸ್ತೆ, ಪಶ್ಚಿಮ ದಿಕ್ಕು, ಸಂಪರ್ಕಿಸಿ.
8050216683

ಸೈಟು ಮಾರಾಟಕ್ಕಿದೆ
50x80.. ಪಶ್ಚಿಮ ದಿಕ್ಕು. ದಟ್ಟಗಳ್ಳಿ..
40x60.. ಪೂರ್ವ ದಿಕ್ಕು... ದಟ್ಟಗಳ್ಳಿ... ಸಂಪರ್ಕಿಸಿ
8050216683

ತಕ್ಷಣ ಬೇಕಾಗಿದ್ದಾರೆ
ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಸಂಬಳ : 21,000/- ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819
9620667819

ಅಮೃತಧಾರೆ ಫೌಂಡೇಷನ್(ರಿ)
(ಸಸ್ಯಾಹಾರಿಗಳಿಗೆ ಮಾತ್ರ) ಆರೋಗ್ಯ, ಆರೈಕೆ ಬೇಕಾದ ಹಿರಿಯ ನಾಗರಿಕರಿಗೆ ಹಾಗೂ ಹಾಸಿಗೆ ಹಿಡಿದವರಿಗೆ ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು, ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ ವೈದ್ಯಕೀಯ ತಪಾಸಣೆ ಹಾಗೂ ನರ್ಸಿಂಗ್ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ದಾಖಲಾತಿಗಾಗಿ
7892317304

ಕೆಲಸಕ್ಕೆ ಬೇಕಾಗಿದ್ದಾರೆ
ಪ್ರತಿಷ್ಠಿತ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೌಂಟರ್ ಬಿಲ್ಲಿಂಗ್ ಮಾಡಲು ಮತ್ತು ಸಪ್ಲೈಯರ್‌ಗಳು ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯವಿರುತ್ತದೆ.
9739259781
9449651240

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಸೈಟು ಮಾರಾಟಕ್ಕಿದೆ
30x40 ಸೈಟು, ಪಶ್ಚಿಮ ದಿಕ್ಕು, ರಾಮಯ್ಯ ಲೇಔಟ್, ವಿಜಯನಗರ 4ನೇ ಹಂತ.
ಸಂಪರ್ಕಿಸಿ :
8050257887
7829669166

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆಯಲ್ಲಿ ಇರುವ ಶುದ್ಧ ಸಸ್ಯಾಹಾರಿ ಹೋಟೆಲ್‌ಗೆ ಬೇಕಾಗಿದ್ದಾರೆ. ಉತ್ತಮ ಸಂಬಳ /ESI ಕೊಡಲಾಗುವುದು. ಸೌತ್ ಅಸಿಸ್ಟೆಂಟ್, Supplier/ ವೇಯಿಟರ್, ಕ್ಲೀನಿಂಗ್ / ವಾಷಿಂಗ್, Conti Comi 2/3 ಸಂಪರ್ಕಿಸಿ–
733 839 2631

airtel WANTED
Market Executive
Salary - 15,000/- + Incentive
9591501305

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ & ಮಹಿಳಾ ಕಾರ್ಮಿಕರು ಬೇಕಾಗಿದ್ದಾರೆ. (7th Pass) ವೇತನ : 14,638+ESI & PF ಜೊತೆಗೆ ಊಟದ ಸೌಲಭ್ಯವಿದೆ.
8453408502

ಜಮೀನು ಮಾರಾಟಕ್ಕಿದೆ
ಮೈಸೂರಿನ RT ನಗರ ರಿಂಗ್ ರೋಡ್‌ನಿಂದ ಕೇವಲ 3 KM ದೂರದಲ್ಲಿರುವ ಬಲ್ಲಹಳ್ಳಿಯಲ್ಲಿ (Yellow Zone) 8.5 ಎಕರೆ ಭೂಮಿ Fencing 3 Borewell Labour House ಹಾಗೂ ತೋಟ ಶಂಕರ ನಗರ ಲೇಔಟ್ ಹತ್ತಿರ
'ಮಧ್ಯವರ್ತಿಗಳಿಗೆ ಅವಕಾಶವಿಲ್ಲ'
9036284426

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ SSLC/Pass/Fail 12 ಘಂಟೆ ಪಾಳಿಗೆ ESI/PF ಸೌಲಭ್ಯವಿರುತ್ತದೆ. ಆಕರ್ಷಕ ಸಂಬಳ, ಮೊದಲು ಬಂದವರಿಗೆ ಆದ್ಯತೆ. ತಂಗಲು ಸ್ಥಳಾವಕಾಶವಿರುತ್ತದೆ.
9341866418
9341866416

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಪೆಟ್ರೋಲ್ ಬಂಕಿನಲ್ಲಿ B.Com/M.Com ಪಾಸಾಗಿರುವ ಹುಡುಗಿಯರು/ಮಹಿಳೆಯರು, ಅಕೌಂಟೆಂಟ್ ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತರು ತಮ್ಮ ರೆಸ್ಯೂಮ್‌ಗಳನ್ನು ಕೆಳಗಿನ ಮೊ.ನಂ.ಗೆ ಕಳುಹಿಸಿ ಸಂದರ್ಶನದ ವೇಳೆಯನ್ನು ಪಡೆಯಿರಿ, ಸಂಬಳ : Rs. 18,000/-
7829490009

MUDA/DTCP SITES
ತಕ್ಷಣ ಮನೆ ಕಟ್ಟಲು, ನಮ್ಮ ಲೇಔಟ್ಸ್‌ನಲ್ಲಿ
ಬನ್ನೂರು ಮೇನ್ ರೋಡ್ 24–35 ಲಕ್ಷ, ಹುಣಸೂರು ರಸ್ತೆ, ಇಲವಾಲ 27–36 ಲಕ್ಷ, ಬೋಗಾದಿ ರಸ್ತೆ 32–54 ಲಕ್ಷ, ಲಲಿತಾದ್ರಿಪುರ ರಿಂಗ್ ರಸ್ತೆ 36–45.5 ಲಕ್ಷ, ಹೆಬ್ಬಾಳ, Infosys ಹತ್ತಿರ 36–55 ಲಕ್ಷ
8123075038
Broker Excuse

ಹೋಟೆಲ್ ದೇವಿಶ್ರೀ
ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಹೋಟೆಲ್ ದೇವಿಶ್ರೀ
ಅಕ್ಬರ್ ರೋಡ್, ಮಂಡಿ ಮೊಹಲ್ಲಾ, ಮೈಸೂರು
9591509575, 9538137263

ಕೆಲಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಏಜೆನ್ಸಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಫೀಲ್ ಆಫೀಸರ್ ಬೇಕಾಗಿದ್ದಾರೆ. ಕೆಲಸದಲ್ಲಿ ಅನುಭವ ಇರಬೇಕು. (ಎಸ್‌ಎಸ್‌ಎಲ್‌ಸಿ ಪಾಸ್, ಸ್ಕೂಟರ್ ಇರಬೇಕು, ವಯಸ್ಸು 45ರ ಒಳಗೆ)
8105522314, 8310098788

ಬೇಕಾಗಿದ್ದಾರೆ
ಕೆ.ಟಿ. ಸ್ಟ್ರೀಟ್‌ನಲ್ಲಿರುವ ಹೋಟೆಲ್‌ಗೆ
ರೂಂ ಬಾಯ್– 2 No
ಹೌಸ್ ಕೀಪಿಂಗ್ – 2 No(ಮಹಿಳೆ)
9916623340

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಸೇತುವೆ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : 18000+W/o
9620667819
9880727819

ಬೇಕಾಗಿದ್ದಾರೆ
Lodge ನಲ್ಲಿ ಕೆಲಸ ಮಾಡಲು Rooms Boys ಬೇಕಾಗಿದ್ದಾರೆ. ಊಟ/ವಸತಿ ಇರುತ್ತದೆ. ಹೋಟೆಲ್ ದಿವಾನ್ಸ್ ರೆಸಿಡೆನ್ಸಿ, ದಿವಾನ್ಸ್ ರಸ್ತೆ (ಶೃಂಗಾರ್ ಹೋಟೆಲ್ ಎದುರು) ದೇವರಾಜ ಮೊಹಲ್ಲಾ, ಮೈಸೂರು.
9845155940

ಸೈಟು ಮಾರಾಟಕ್ಕಿದೆ
20x30.. ಉತ್ತರ ದಿಕ್ಕು ಆನಂದ ನಗರ..
20x30.. ಮನೆ.. ದಕ್ಷಿಣ ದಿಕ್ಕು ರಾಜಾಜಿನಗರ ಆಶ್ರಯ. ಬೋಗಾದಿ.. ಸಂಪರ್ಕಿಸಿ
8050216683

ಸೈಟ್ ಮಾರಾಟಕ್ಕಿದೆ
30x40 E/F, 36 ಲಕ್ಷ ಸುವರ್ಣನಗರ, ಬೋಗಾದಿ
20x50 ಕಾರ್ನರ್, 64 ಲಕ್ಷ ವಿಜಯನಗರ 4ನೇ ಹಂತ ಪಕ್ಕ, ಮೈಸೂರು.
9845765573

Site for Sale
V.B. City (30x62) Vijayanagar, 4th Stage.
9538272726

ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ
ಮೈಸೂರಿನ ಇಸ್ಕಾನ್ ದೇವಸ್ಥಾನ ಹಾಗೂ ಗರ್ಲ್ಸ್ ಕ್ಲಬ್ ಕರ್ತವ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್ಸ್‌ಗಳು ಬೇಕಾಗಿದ್ದಾರೆ ವಯೋಮಿತಿ 50 ವರ್ಷದೊಳಗೆ ವಿದ್ಯಾಭ್ಯಾಸ 10ನೇ ತರಗತಿ ಪಾಸ್ ಅಥವಾ ಫೈಲ್ ಉತ್ತಮ ವೇತನ (Rs 15000/–) ಹಾಗೂ ಪಿಎಫ್, ಪಿಎಸ್‌ಐ ಇರುತ್ತದೆ.
6361765969 / 8792815411

ಖರೀದಿಗೆ ಜಮೀನು ಬೇಕಾಗಿದೆ
ಮೈಸೂರಿನಿಂದ 15 ಕಿ.ಮೀ. ಅಂತರದಲ್ಲಿ 1–3 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ.
ಸಂಪರ್ಕಿಸಿ:
6364795551

For Rent
2 BHK, 10 squares, suitable for house, office, accommodation, PG No. 1555, HT Double Road, Vijayangar 2nd Stage (Near Canara Bank), Mysore-570 017.
Contact:
9663604699

ಮನೆಗೆ ಬಂದು ಅಡುಗೆ ಮಾಡಿ ಕೊಡಲಾಗುವುದು
ಮೈಸೂರಿನ ಜೆ.ಪಿ. ನಗರದಲ್ಲಿ ಬೆಳಿಗ್ಗೆ ಮತ್ತು ಸಂಜೆ ಮನೆಗೆ ಬಂದು ವೆಜ್ ಅಡುಗೆ ಮಾಡಿ ಕೊಡಲಾಗುವುದು.
ಸಂಪರ್ಕಿಸಿ:
9986275625

HOUSES & OFFICE SPACE FOR RENT
@ SARASWATHIPURAM KUVEMPUNAGARA & SURROUNDINGS
S.S. PROPERTY SERVICES (OPP. KUVEMPU SCHOOL) SS.PURAM, MYSORE.
9342125252

SITES WANTED
@ MANDAKALLI, DADADAHALLI, THALLUR, SINDUVALLI, KADAKOLA TVS FACTORY ROAD & MYSORE SURROUNDINGS
QUICK REGN
9538839926

SITE FOR SALE
20x45 EAST FACE
ದಟ್ಟಗಳ್ಳಿ ಕ್ರೈಸ್ತ ಪಬ್ಲಿಕ್ ಸ್ಕೂಲ್ ಹಿಂಭಾಗ ಮತ್ತು ನ್ಯಾಯಾಂಗ ಬಡಾವಣೆ ಹತ್ತಿರ RR ನಗರ DC CONVERTION 11B E-KHATA ಲೋನ್ ಕೂಡ ದೊರೆಯುತ್ತದೆ. 51 Lakh
8073799013

Wanted
Telecallers
* Marketing Executive
Near city bus stand.
7406998821

Required School Mysuru
Looking for a school in and around Mysuru for:
* Tie-up * Lease * Rent * Sale.
Interested school owners may contact immediately.
99006 17600

Wanted Beautician
(Fresher or Experienced)
Accommodation provided. Contact:
9880994092

ತಕ್ಷಣ ಬೇಕಾಗಿದ್ದಾರೆ
ಟ್ರಕ್ ಡ್ರೈವರ್ಸ್ 11, 10 ಕ್ಯಾಂಟರ್‌ಗೆ ಬೇಕಾಗಿದ್ದಾರೆ. ಕ್ಯಾಂಟೀನ್, ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿರುತ್ತದೆ.
ಸಂಪರ್ಕಿಸಿ:
9341623350

ಬೇಕಾಗಿದ್ದಾರೆ
ಮೈಸೂರಿನಾದ್ಯಂತ ವರ್ಕ್ ಫ್ರಮ್ ಹೋಂ, DATA ENTRY BACK END OFFICE, ಬ್ಯಾಂಕ್ ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ
8904115283
9845810906

30'x45' SITE FOR SALE
LIC Layout Sreerampura 2nd Stage
7899214181

ಬೇಕಾಗಿದ್ದಾರೆ
ಸೈಟ್‌ನಲ್ಲಿ ಕೆಲಸ ಮಾಡಲು ಎಲೆಕ್ಟ್ರಿಷಿಯನ್ಸ್ ಬೇಕಾಗಿದ್ದಾರೆ. (ITI ಮಾಡಿರುವವರಿಗೆ ಮೊದಲ ಆದ್ಯತೆ). ESI, PF ಸೌಲಭ್ಯವಿರುತ್ತದೆ.
9738406555
9886750382

ಬೇಕಾಗಿದ್ದಾರೆ
ರೂಪನಗರದಲ್ಲಿರುವ 3 ಜನರ ಶುದ್ಧ ಸಸ್ಯಾಹಾರಿ ಕುಟುಂಬಕ್ಕೆ ಶುದ್ಧ ಸಸ್ಯಾಹಾರಿ ಅಡುಗೆಗಾರ / ಅಡುಗೆಗಾರ್ತಿ ಬೇಕಾಗಿದ್ದಾರೆ. ಯೋಗ್ಯ ಸಂಬಳ ನೀಡಲಾಗುತ್ತದೆ. ಕರೆಮಾಡಿ
99860 79832

ಪ್ರಮಾಣ ಪತ್ರ
ಅನಿತ ಗೋಪಾಲ್ W/o ಬಿ.ಪಿ. ಗೋಪಾಲ್‌ಕೃಷ್ಣ ಆದ ನಾನು ನಂ. 09, 1ನೇ ಮೇನ್, ಅದಿತಿ ಎನ್‌ಕ್ಲೇವ್, ವಿದ್ಯಾವಿಕಾಸ್ ಕಾಲೇಜ್ ಆಫ್ ಇಂಜಿನಿಯರ್ ಕಾಲೇಜು ಹತ್ತಿರ, ವಸಂತನಗರ, ಭುಗತಹಳ್ಳಿ, ಆಲನಹಳ್ಳಿ, ಮೈಸೂರು–570028 ಇಲ್ಲಿ ವಾಸವಿದ್ದು, ನನ್ನ ಹೆಸರು ಆಧಾರ್ & ಪಾನ್‌ಕಾರ್ಡ್‌ನಲ್ಲಿ ಅನಿತ ಗೋಪಾಲ್ ಎಂದು ನಮೂದಾಗಿರುತ್ತದೆ. ಆದರೆ ನನ್ನ ಶೈಕ್ಷಣಿಕ ದಾಖಲಾತಿಗಳಲ್ಲಿ ನನ್ನ ಹೆಸರು ಗೀತಾ ಎಂದು ನಮೂದಾಗಿರುತ್ತದೆ. ಅನಿತ ಗೋಪಾಲ್ ಮತ್ತು ಗೀತಾ ಎರಡೂ ಹೆಸರುಗಳು ನನ್ನದೇ ಆಗಿರುತ್ತದೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/– ಅನಿತ ಗೋಪಾಲ್

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ
9448229184
7899625268

ಬೇಕಾಗಿದ್ದಾರೆ
ಮಡಿಕೇರಿ– ಮಂಗಳೂರು ಹಾಗೂ ಮಡಿಕೇರಿ – ಮೈಸೂರು ಮಾರ್ಗಗಳಲ್ಲಿ ಪ್ರತಿನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸೆಲ್ ವಿತರಣೆ ಮಾಡಲು ಓದು ಬರಹ ತಿಳಿದಿರುವ ಯುವಕರು ಬೇಕಾಗಿದ್ದಾರೆ. ಡೆಲಿವರಿ ಬಾಯ್ ಆರಂಭಿಕ ವೇತನ 16000 + ಲೋಡಿಂಗ್ ಚಾರ್ಜ್. ಪ್ರತೀ ಭಾನುವಾರ ರಜೆ.
ಸಂಪರ್ಕಿಸಿ : **9740408488**

ನೇರ ಸಂದರ್ಶನ
1. MARKETING EXECUTIVE - 1 No. (20,000/ SALARY).
2. OFFICE ASSISTANT (B.COM / BA / TALLY / EXCEL / WORD), KANNADA TYPING.
3. DRIVER - 1 No.
9036745292, 9448150408

SITE FOR SALE
At Mysore Vijayanagar 4th Stage, Vijayanagar 3rd Stage. 40x60 : 1 Cr. 50 L ; 1 Cr. 85 L ; 1 Cr 92 L & 50x95 Commercial 80 feet Road 3 Cr. 80 L.
Contact: MMP Mysore Mohan
8453771295, 9449403021

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸೆಲ್ ಹೋಟೆಲ್‌ಗೆ ಕಿಚನ್ ಹೆಲ್ಪರ್–13000/– ಹಿಟ್ಟು ಕಲಸುವವರು – 14000/– ಚಪಾತಿ ಬೇಯಿಸುವವರು – 15000/– ಸಂಬಳದೊಂದಿಗೆ ಊಟ, ವಸತಿ ಉಚಿತ ಸಮಯ : ಬೆಳಗ್ಗೆ 9.30 ರಿಂದ 3 ಗಂಟೆ ಸಾಯಂಕಾಲ 5.30 ರಿಂದ 10 ಗಂಟೆಗೆ
7204404170

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ
Mob: 9964733988

ತಕ್ಷಣ ಬೇಕಾಗಿದ್ದಾರೆ
ವರ್ಕ್ ಫ್ರಮ್ ಹೋಂ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ) 7th, 10th, PUC, Any Degree ಪಾಸ್, ಫೇಲ್ ಆದವರು ಸಂಪರ್ಕಿಸಿ:
HR: 9742133993

SITE FOR SALE
30x50 E/F Karthika layout Near Andolana Circle and 30x40 W/F old house, 60 feet Road, R.K. Nagar.
Mob: 9611881632

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
OFFICE STAFF with computer operating skills. Salary for 10,000 plus perks.
Mail id: bilvashree24@gmail.com
Whatsapp 9845315102

WANTED
Telecalling ಮಾಡಲು ಹುಡುಗಿಯರು ಬೇಕಾಗಿದ್ದಾರೆ.
Salary + Incentive.
D.D. Urs Road.
Mob: 9945077757



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್‌ಕೆಫೆಗೆ 4 ಸಿಬ್ಬಂದಿ. ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
ಕುವೆಂಪುನಗರದಲ್ಲಿ
ಬೆಳಿಗ್ಗೆ 6 ರಿಂದ ಸಂಜೆ 3 ಮಧ್ಯಾಹ್ನ 1 ರಿಂದ ರಾತ್ರಿ 10
9986758555

ಬೇಕಾಗಿದ್ದಾರೆ
ಮೈಸೂರಿನ ಹೆಸರಾಂತ MNC ಕಂಪನಿಗಳಿಗೆ 7th, 9th, PUC, ITI, Diploma, Any Degree Pass /Fail BA, B.Com, BBA, MCA, M.Com, MBA ಆದವರಿಗೆ Mechine operator, Data Entry Tellecalling, Cashier Billing Admin, HR, Receptionist, Packing Helper, Drivers ಇತ್ಯಾದಿ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ. ESI+ PF ನೊಂದಿಗೆ + OT ಸಂಬಳ 18,000/- ರಿಂದ 45,000/- ಸಂಪರ್ಕಿಸಿ
9036559663/ 8050028161

FOR RENT
Shop or office, 350 sq.ft., 1st Floor, East face, 440, Shalivahana Road, Nazarbad, Mysuru. Contact:
8050031150

WANTED
Teaching staff for reputed institution (Experience Preferred) for all subjects.Transport facilities available. Drop your resume through WhatsApp Contact no:
8971577685
9980631121

All Regd, Social Welfare Old Age Home
seeking admissions of Sr. Citizens and financial assistance may contact:
Mob: 9449923880

ಮನೆ ಮಾರಾಟಕ್ಕಿದೆ
30x40 ನಾರ್ತ್ ಫೇಸ್ ಹೊಸ ಮನೆ ಗ್ರೌಂಡ್ ಫ್ಲೋರ್ ಅಂಡ್ ಫಸ್ಟ್ ಫ್ಲೋರ್ ಶ್ರೀರಾಂಪುರ ಎರಡನೇ ಹಂತ, ನಿಯರ್ ಬೆಮೆಲ್ ಮೇನ್ ರೋಡ್ ಆರ್ಚ್ ಹತ್ತಿರ. ಸಂಪರ್ಕಿಸಿ:
Mob: 9845713284

Sarojani Funland Urgent Hiring
Playzone attendant required immediately
* Supervise kids play area * Handle tickets & token. Call now:
6360921458
Immedaite joining / attractive salary.

ಪ್ರಮಾಣ ಪತ್ರ
ರಾಮಸ್ವಾಮಿ S/o ಸೊತ್ತರಂಗಯ್ಯ @ ರಂಗಯ್ಯ ಆದ ನಾನು ಮೈಸೂರು ಜಿಲ್ಲೆ, ಹೆಗ್ಗಡದೇವನಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕ್ಯಾತನಹಳ್ಳಿ ಗ್ರಾಮದಲ್ಲಿ ವಾಸವಿದ್ದು, ನನ್ನ ತಂದೆಯ ಹೆಸರು ಸೊತ್ತರಂಗಯ್ಯ ಆಗಿದ್ದು, ಅವರನ್ನು ರಂಗಯ್ಯ ಎಂದು ಸಹ ಕರೆಯುತ್ತಿದ್ದರು. ನನ್ನ ಆಧಾರ್, ಪಡಿತರ ಕಾರ್ಡ್, ಬ್ಯಾಂಕ್ ದಾಖಲೆಯಲ್ಲಿ ರಾಮಸ್ವಾಮಿ ಬಿನ್ ರಂಗಯ್ಯ ಎಂದು ಇರುತ್ತದೆ. ನನ್ನ ಶಾಲಾ ದಾಖಲಾತಿಯಲ್ಲಿ ರಂಗಯ್ಯ ಎಂದು ಇರುತ್ತದೆ. ನನ್ನ ತಂದೆಯ ಪಡಿತರ ಕಾರ್ಡ್‌ನಲ್ಲಿ ಜಮೀನಿನ ಸಾಗುವಳಿ ಚೀಟಿ ಮತ್ತು ಆರ್‌ಟಿಸಿಯಲ್ಲಿ ಸೊತ್ತರಂಗಯ್ಯ ಬಿನ್ ಸೊತ್ತರಂಗಯ್ಯ ಎಂದು ಇರುತ್ತದೆ. ಈ ಎರಡೂ ಹೆಸರುಗಳು ನನ್ನ ತಂದೆಗೆ ಸೇರಿದ್ದಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.
ಸಹಿ/– ರಾಮಸ್ವಾಮಿ

FOR SALE
20 years old house in S.L. Nagar, Bogadi (N) (Behind Nirmithi Kendra). Measuring 27x40.
9341607527
9036026741

ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಏರಿಯಾ ಫಾಲ್ಕನ್ ಕಾರ್ಖಾನೆ ಹತ್ತಿರವಿರುವ ಕಾರ್ಖಾನೆಗೆ 8 ಗಂಟೆ ಕೆಲಸ (ಶಿಫ್ಟ್) ಎಸ್‌ಎಸ್‌ಎಲ್‌ಸಿ ಓದಿರುವ ಅನುಭವವಿರುವ 30 ವರ್ಷದಿಂದ 50 ವರ್ಷದ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 18500/– ರೂ take home ESI, PF ವಾರದ ರಜೆ, ಕ್ಯಾಂಟೀನ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9731976148

ಕೆಲಸಕ್ಕೆ ಬೇಕಾಗಿದ್ದಾರೆ
ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್. ಸಂಪರ್ಕಿಸಿ: ಪಯೋನೀರ್ ಸ್ಪೋರ್ಟ್ಸ್ ಪಂಚಮಂತ್ರ ರಸ್ತೆ, ಮೈಸೂರು
9980151488
9886324288

40'x60' SITE FOR SALE
No. 12365, South Facing, Opp. Park, Near Ring road, Vijayanagar 4th Stage
8884133677

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ. 2921/A, ಸರಸ್ವತಿಪುರಂ, ಮೈಸೂರು.
ನಾವು ನ್ಯಾಷನಲೈಸ್ಡ್ ಮತ್ತು ಎನ್.ಬಿ.ಎಫ್.ಸಿ ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. ಸಿಬಿಲ್ ತೊಂದರೆ ಇದ್ದರು 11B, 9 & 11A, ಮುಡಾ ಮತ್ತು ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿಸಿ ಕೊಡಲಾಗುವುದು.
8088647887

WANTED
Trainee Content Developers
Fresh Graduate / Diploma holder with basic computers.
Contact: 8073304753
Place: Vivekananda Nagar, Mysuru

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್‌ನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಮಹಿಳೆಯರು/ ಪುರುಷರು ಬೇಕಾಗಿದ್ದಾರೆ. ಸಂಬಳ : Rs. 15,000/-
7899754149

VEV Electric Vehicle
ಹೆಸರಾಂತ ಕಂಪನಿ ಬ್ಯಾಟರಿ ಚಾಲಿತ EV ವಾಹನ ಕೇವಲ 35 ಸಾವಿರದಿಂದ ಪ್ರಾರಂಭ ನಾಲ್ಕು ಶ್ರೇಣಿಗಳಲ್ಲಿ ಲಭ್ಯ, ರಾಮಕೃಷ್ಣನಗರ, ಮೈಸೂರು.
7090207700

SITE FOR SALE
Sukdai Woods 60x40
Srinagar (Gururu 4th Stage) 20x30 Corner
8088363738
Broker excuse

ಹೆಸರು ಬದಲಾವಣೆ
ನಾನು, ಹಿಲ್ಲರಿ ಎಲ್ಲ ರಿಜಾರಿಯೊ ವಯಸ್ಸು 27 ವರ್ಷ, ಎಂಐಜಿ # 5, 1st ಕ್ರಾಸ್, ಕಲ್ಯಾಣಗಿರಿ, ಮೈಸೂರು–570019 ನಲ್ಲಿ ವಾಸಿಸುತ್ತಿದ್ದು, ಕೀತ್ ಜೋಸೆಫ್ ವಸು ಅವರೊಂದಿಗಿನ ನನ್ನ ವಿವಾಹದ ನಂತರ, ನನ್ನ ಸ್ವಂತ ಇಚ್ಛೆಯ ಮೇರೆಗೆ ನನ್ನ ಉಪನಾಮವನ್ನು ರಿಜಾರಿಯೊ ವಸು ಎಂದು ಬದಲಾಯಿಸಿದ್ದೇನೆ ಎಂದು 04/03/2026 ರಂದು ನೋಟರಿ ರಾಜೇಂದ್ರ ಕುಮಾರ್ ಕೆ.ಎಂ., ಮೈಸೂರು ಇವರ ಮುಂದೆ ಪ್ರಮಾಣ ವಚನ ಸ್ವೀಕರಿಸಿದ ಅಫಿಡವಿಟ್ ಮೂಲಕ ಪ್ರಮಾಣೀಕರಿಸುತ್ತೇನೆ. ಭವಿಷ್ಯದಲ್ಲಿ ನನ್ನ ಎಲ್ಲಾ ದಾಖಲೆಗಳು ಮತ್ತು ಕೃತಿಗಳಲ್ಲಿ ನನ್ನನ್ನು ಹಿಲ್ಲರಿ ಎಲ್ಲ ವಸು ಎಂದು ಗುರುತಿಸಲಾಗುವುದು
ಸಹಿ/– ಹಿಲ್ಲರಿ ಎಲ್ಲ ವಸು

ಅಭಿವೃದ್ಧಿ ಮೂಲಕ ಜನರ ಋಣ ತೀರಿಸುತ್ತಿದ್ದೇವೆ

ಸಂಸದ ಸುನೀಲ್ ಬೋಸ್



ಸಂಸದ ಸುನೀಲ್ ಬೋಸ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ತಿ.ನರಸೀಪುರ, ಮಾ.4– ರಾಜಕೀಯ ಅಧಿಕಾರ ಕೊಟ್ಟಿರುವ ಕ್ಷೇತ್ರದ ಜನರ ಋಣವನ್ನು ಅಭಿವೃದ್ಧಿ ಕಾರ್ಯಗಳ ಮೂಲಕ ತೀರಿಸುತ್ತಿದ್ದೇವೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ಮಲಿಯೂರು ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆ ಅನುದಾನ 2.5 ಕೋಟಿ ರೂ. ವೆಚ್ಚದಲ್ಲಿ ಮಲಿಯೂರಿನಿಂದ ಶ್ರೀವಡ್ಕಲ್ ರಂಗನಾಥಸ್ವಾಮಿ ದೇವಾಲಯದವರೆಗೆ ರಸ್ತೆ ಅಭಿವೃದ್ಧಿ, ಜಿಪಂ ಅನುದಾನ 25 ಲಕ್ಷ ರೂ. ವೆಚ್ಚದಲ್ಲಿ ಸಿಮೆಂಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ನಿರಂತರವಾಗಿ ಬೆಂಬಲಿಸಿ ಕೈ ಹಿಡಿಯುವುದರ ಜೊತೆಗೆ ನನ್ನನ್ನು ಸಂಸದರನ್ನಾಗಿ ಆಯ್ಕೆ ಮಾಡಿದ್ದಕ್ಕೆ ತಿ.ನರಸೀಪುರ ಕ್ಷೇತ್ರದ ಜನರ ಋಣವನ್ನು ಅಭಿವೃದ್ಧಿ ಕೆಲಸಗಳಿಂದ ತೀರಿಸುತ್ತಿದ್ದೇವೆ ಎಂದರು.

ಬನ್ನೂರು ಕ್ಷೇತ್ರದಲ್ಲಿ ಶಾಸಕರಾಗುತ್ತಿದ್ದವರು ಇದುವರೆಗೂ ಸಚಿವರಾಗಿಲ್ಲ. ಕ್ಷೇತ್ರ ಮರುವಿಂಗಡಣೆಯಿಂದ ಮಹದೇವಪ್ಪ ಅವರು ಈ ಭಾಗದ ಶಾಸಕರಾಗುತ್ತಿದ್ದಂತೆ ರಾಜ್ಯ ಸರ್ಕಾರದಲ್ಲಿ ಸಚಿವರಾದರು. ವಿಧಾನಸಭಾ ಚುನಾವಣೆಯಲ್ಲಿ ಅವರಿಗೆ ನೀಡಿದಂತಹ ಬೆಂಬಲವನ್ನು ಸಾರ್ವತ್ರಿಕ ಲೋಕಸಭಾ ಚುನಾವಣೆಯಲ್ಲಿ ನನಗೂ ನೀಡಿದ್ದರಿಂದ ಮೊದಲ ಬಾರಿಗೆ ಸಂಸದನಾಗಿ ಆಯ್ಕೆಗೊಂಡಿದ್ದೇನೆ. ಹೀಗಾಗಿ ಈ ಭಾಗದ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿ, ಶಾಶ್ವತ ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಕ್ಕೆ ಹೆಮ್ಮೆಯಿದೆ ಎಂದರು.

ಈ ವೇಳೆ ಮೈಮುಲ್ ಮಾಜಿ ಅಧ್ಯಕ್ಷ ಆರ್.ಚಲುವರಾಜು, ಮಲಿಯೂರು ಗ್ರಾಪಂ ಮಾಜಿ ಅಧ್ಯಕ್ಷೆ ಮಹದೇವಮ್ಮ ದೊಳ್ಳಯ್ಯ, ಮಾಜಿ ಸದಸ್ಯರಾದ ರೇಖಾ ಪ್ರಸನ್ನ, ಭಾಗ್ಯಮ್ಮ ಚಿಕ್ಕದೊಳ್ಳಯ್ಯ, ಉಮೇಶ್, ಮಹದೇವ, ಮಣಿಕಂಠ, ನಾಗರಾಜು, ಸಣ್ಣಯ್ಯ, ಪ್ರಕಾಶ್, ಪುರಸಭೆ ಮಾಜಿ ಅಧ್ಯಕ್ಷ ಮುನಾವರ್ ಪಾಷ, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜೇಗೌಡ, ಗುತ್ತಿಗೆದಾರರಾದ ಎ.ಎನ್.ಸ್ವಾಮಿ, ಕೆ.ಎಂ.ಮಧುಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಚನ್ನಕೇಶವ, ಜಿಪಂ ತಾಂತ್ರಿಕ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಿ.ಎನ್.ಚರಿತ, ಜೆಇ ಶಿವಸ್ವಾಮಿ, ಲೋಕೋಪಯೋಗಿ ಎಇಇ ಸತೀಶ್, ಸಂಸದರ ಆಪ್ತ ಸಹಾಯಕ ಬಿ.ಬಸವರಾಜು, ಸಂತೋಷ್, ಪುರಸಭೆ ಸದಸ್ಯರಾದ ಶಿವಣ್ಣ, ಶಿವು ಮತ್ತಿತರರಿದ್ದರು.

ಮಂಚನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಗುದ್ದಲಿ ಪೂಜೆ ನೆರವೇರಿಸಿದರು.

ಕೆ.ಆರ್.ನಗರ, ಮಾ.4– ನನಗೆ ಬಿ.ಫಾರಂ ನೀಡಿ ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ರಾಜಕಾರಣಕ್ಕೆ ಬರಲು ದಿ.ಮಾಜಿ ಶಾಸಕ ಮಂಚನಹಳ್ಳಿ ಮಹದೇವ ಅವರೇ ಕಾರಣ ಎಂದು ಶಾಸಕ ಡಿ.ರವಿಶಂಕರ್ ಸ್ಮರಿಸಿದರು.

ತಾಲೂಕಿನ ಮಂಚನಹಳ್ಳಿಯಲ್ಲಿ 1 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಂಚನಹಳ್ಳಿಯಲ್ಲಿ ಕುರುಬ ಸಮಾಜವಲ್ಲದೇ ಹಲವು ಸಮಾಜದವರಿದ್ದಾರೆ. ಆದ್ದರಿಂದ ಹೆಚ್ಚಿನ ಅನುದಾನ ತಂದು ಗ್ರಾಮವನ್ನು ಸಮಗ್ರ ಅಭಿವೃದ್ಧಿ ಮಾಡುವುದೇ ನನ್ನ ಗುರಿ ಎಂದರು.

ಈಗಾಗಲೇ 5 ಕೋಟಿ ಅನುದಾನಕ್ಕೆ ಡಿಪಿಆರ್ ಮಾಡಲಾಗಿದೆ. ಸದ್ಯದಲ್ಲೇ ಹಣ ಬಿಡುಗಡೆಗೊಳಿಸಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು. ಅಲ್ಲದೇ ಕುಡಿಯುವ ನೀರಿಗಾಗಿ 2 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್ ನಿರ್ಮಿಸಲಾಗುವುದು ಎಂದರು.

ಗ್ರಾಮದ ಕೆರೆ ಹೂಳೆತ್ತಿಸಿ ಅಭಿವೃದ್ಧಿ ಪಡಿಸುವ ಜೊತೆಗೆ ಸ್ಮಶಾನವನ್ನು ಅಭಿವೃದ್ಧಿ ಪಡಿಸಲಾಗುವುದು. ಸಾಮಾನ್ಯನಾಗಿದ್ದ ನಾನು ನೀವು ನೀಡಿದ ಮತಗಳಿಂದ ಶಾಸಕನಾಗಿ ಇಂದು ನಿಮ್ಮ ಮುಂದೆ ನಿಂತು ಮಾತನಾಡುತ್ತಿದ್ದೇನೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧನಾಗಿದ್ದು ಹಂತ ಹಂತವಾಗಿ ಅಭಿವೃದ್ಧಿ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮದಲ್ಲಿ ಅಕ್ರಮ ಮದ್ಯ ಮಾರಾಟ ತಡೆಯುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುತ್ತೇನೆ. ಆಂಜನೇಯಸ್ವಾಮಿ ದೇವಾಲಯ ಅಭಿವೃದ್ಧಿಗೊಳಿಸಿ ನಾನೇ ದೇವಾಲಯ ಲೋಕಾರ್ಪಣೆ ಮಾಡುತ್ತೇನೆ ಎಂದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಶಿವಣ್ಣ, ಗ್ರಾಪಂ ಮಾಜಿ ಸದಸ್ಯ ಎಂ.ಎಸ್.ಅನಂತು ಮಾತನಾಡಿದರು. ಕೆಪಿಸಿಸಿ ಸದಸ್ಯ ಸಿ.ಪಿ.ರಮೇಶ್ ಕುಮಾರ್, ಹಂಪಾಪುರ ಪಿಎಸಿಎಸ್ ಅಧ್ಯಕ್ಷ ಹೆಚ್.ಪಿ.ಪ್ರಶಾಂತ್, ನಿರ್ದೇಶಕ ದೇವರಾಜು, ಮೀನುಗಾರರ ಸಹಕಾರ ಸಂಘದ ಅಧ್ಯಕ್ಷ ಬೋರಣ್ಣ, ಮುಖಂಡರಾದ ರಘು, ನಾರಾಯಣ, ಹರಿರಾಜು, ಧನು, ಈರೇಗೌಡ, ಹಲಗೇಗೌಡ, ಮಂಜುನಾಥ್, ಮಹೇಶ್, ಕಾಳಪ್ಪ, ಬಸವರಾಜು, ಲೋಕೋಪಯೋಗಿ ಇಲಾಖೆ ಎಇಇ ಸುಮಿತ, ಪಿಡಿಓ ಅಶ್ವಿನಿ ಸೇರಿದಂತೆ ಇತರರಿದ್ದರು.

ತಂಬಾಕು ಬೆಳೆಗಾರರ ಹಿತ ಕಾಯುವುದೇ ಮಂಡಳಿ ಗುರಿ

ಚೇರ್ಮನ್ ಯಶ್ವಂತ್ ಕುಮಾರ್



ಸಭೆಯಲ್ಲಿ ಕೇಂದ್ರ ತಂಬಾಕು ಮಂಡಳಿ ಚೇರ್ಮನ್ ಯಶವಂತ್ ಕುಮಾರ್ ಮಾತನಾಡಿದರು.

ಕಂಪಲಾಪುರ, ಮಾ.4– ಆಂಧ್ರ ಪ್ರದೇಶದ ತಂಬಾಕು ಬೆಳೆಗಾರರು, ಕರ್ನಾಟಕದ ತಂಬಾಕು ಬೆಳೆಗಾರರು ಎಂದು ವಿಂಗಡಿಸದೇ ಎಲ್ಲಾ ರೈತರ ಹಿತ ಕಾಪಾಡುವುದೇ ತಂಬಾಕು ಮಂಡಳಿ ಗುರಿ ಎಂದು ಕೇಂದ್ರ ತಂಬಾಕು ಮಂಡಳಿ ಚೇರ್ಮನ್ ಯಶವಂತ್ ಕುಮಾರ್ ತಿಳಿಸಿದರು.

ಇಲ್ಲಿಗೆ ಸಮೀಪದ ಚಿಲ್ಕುಂದ ತಂಬಾಕು ಹರಾಜು ಮಾರುಕಟ್ಟೆ ಸಂಖ್ಯೆ 62ರಲ್ಲಿ ರಾಮನಾಥಪುರ, ಹುಣಸೂರು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ ತಂಬಾಕು ಮಾರುಕಟ್ಟೆಗಳ ಬೆಳೆಗಾರರ ಹಾಗೂ ವರ್ತಕರ ಸಭೆಯಲ್ಲಿ ಮಾತನಾಡಿದ ಅವರು, ನಾನು ತಂಬಾಕು ಮಂಡಳಿ ಚೇರ್ಮನ್ ಆದ ನಂತರ ಕರ್ನಾಟಕಕ್ಕೆ 3ನೇ ಬಾರಿ ಭೇಟಿ ನೀಡುತ್ತಿದ್ದು, ಕರ್ನಾಟಕದ ರೈತರು ಶ್ರಮ ಜೀವಿಗಳು ಹಾಗೂ ಶಿಸ್ತು ಬದ್ಧತೆಗೆ ಹೆಸರಾದವರು. ಅಂತಹ ರೈತರಿಗೆ ಅನ್ಯಾಯವಾದರೆ ಅದನ್ನು ನಾನು ಸಹಿಸುವುದಿಲ್ಲ ಎಂದರು.

ಈ ಸಾಲಿನ ಹರಾಜು ಪ್ರಕ್ರಿಯೆಯಲ್ಲಿ ಕಳೆದ ಕೆಲವು ದಿನಗಳ ಹಿಂದೆ ಬೆಲೆಯಲ್ಲಿ ಇಳಿತವಾಗಿರುವುದು ನನ್ನ ಗಮನಕ್ಕೆ ಬಂದಿದ್ದು, ಆ ಕಾರಣಕ್ಕೆ ಮಾರುಕಟ್ಟೆಗಳಲ್ಲಿ ಹರಾಜು ಸ್ಥಗಿತಗೊಂಡಿತ್ತು. ನಂತರ ಇದು ಕೇಂದ್ರ ಸಚಿವರ ಗಮನಕ್ಕೆ ಬಂದಿದ್ದು, ಮೈಸೂರಿನಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಚಿವ ಕೆ.ವೆಂಕಟೇಶ್, ಸಂಸದ ಯದುವೀರ್ ಒಡೆಯರ್ ಸಮ್ಮುಖದಲ್ಲಿ ನಡೆದ ವರ್ತಕರ ಸಭೆಯಲ್ಲಿ ತಂಬಾಕು ಬೆಳೆಗಾರರ ಸಮಸ್ಯೆಗಳ ಬಗ್ಗೆ ಚರ್ಚಿಸಲಾಗಿದೆ. ಮುಂದೆ ಯಾವುದೇ ಅನ್ಯಾಯ ಆಗದಂತೆ ನೋಡಿಕೊಳ್ಳುವ ಜೊತೆಗೆ ವರ್ತಕರು ಯಾವ ರೀತಿ ಹರಾಜಿನಲ್ಲಿ ಭಾಗವಹಿಸುತ್ತಾರೆ ಎಂಬುದರ ಮಾಹಿತಿ ಪಡೆದು ಅವರ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಈ ವೇಳೆ ಹರಾಜು ನಿರ್ದೇಶಕಿ ವಿಶ್ವಶ್ರೀ, ಹರಾಜು ನಿರ್ದೇಶಕ ಶ್ರೀನಿವಾಸ್, ರೈತ ಮುಖಂಡರಾದ ಸಣ್ಣತಿಮ್ಮೆಗೌಡ, ಪರಮೇಶ್, ಕುಮಾರ್, ಜಿ.ಸಿ.ವಿಕ್ರಂ ರಾಜ್, ವಕೀಲ ಮೂರ್ತಿ, ಚಲುವಯ್ಯ, ಶಂಕರೇಗೌಡ, ಮಲ್ಲೇಶ್ ಸೇರಿದಂತೆ ಹಲವರು ಮಾತನಾಡಿದರು.

ಸಭೆಯಲ್ಲಿ ಮೈಸೂರು ಪ್ರಾದೇಶಿಕ ವ್ಯವಸ್ಥಾಪಕ ಹೆಚ್.ಕೆ.ಗೋಪಾಲ್, ಪಿರಿಯಾಪಟ್ಟಣ ಪ್ರಾದೇಶಿಕ ವ್ಯವಸ್ಥಾಪಕ ಮಾರಣ್ಣ, ಮಾರುಕಟ್ಟೆ ಸಂಖ್ಯೆ 62ರ ಹರಾಜು ಅಧೀಕ್ಷಕ ಸಿದ್ದರಾಮ ಡಾಂಗೆ ಸೇರಿದಂತೆ 5 ಪ್ಲಾಟ್ ಫಾರಂಗಳ ಹರಾಜು ಅಧೀಕ್ಷಕರು, ಅಧಿಕಾರಿ ವರ್ಗ, ರೈತರು, ಸಿಬ್ಬಂದಿ ಹಾಜರಿದ್ದರು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಇಂದು ಪ್ರತಿಭಟನೆ



ತಾಲೂಕು ಮಾದಾರ ಮಹಾಸಭಾ ಅಧ್ಯಕ್ಷ ಮೂಗೂರು ಬಲ್ಲಯ್ಯ ಮಾತನಾಡಿದರು.

ತಿ.ನರಸೀಪುರ, ಮಾ.4– ರಾಜ್ಯ ಸರ್ಕಾರ ಶಿಕ್ಷಣ ಮತ್ತು ಉದ್ಯೋಗದಲ್ಲಿ ಒಳ ಮೀಸಲಾತಿ ನೀಡಲು ಹಿಂದೇಟು ಹಾಕುತ್ತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಮಾದಾರ ಮಹಾಸಭಾದಿಂದ ಮಾ.6ರಂದು ರಾಜ್ಯಾದ್ಯಂತ ಪ್ರತಿ ಜಿಲ್ಲೆಯಲ್ಲೂ ಜಿಲ್ಲಾಧಿಕಾರಿಗಳ ಕಚೇರಿ ಎದುರು ಚಳವಳಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ತಿ.ನರಸೀಪುರದಲ್ಲಿ ಮಾ.5ರಂದು ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಮಾದಾರ ಮಹಾಸಭಾ ಅಧ್ಯಕ್ಷ ಮೂಗೂರು ಬಲ್ಲಯ್ಯ ತಿಳಿಸಿದರು.

ಪಟ್ಟಣದ ಅರುಂಧತಿ ಸಹಕಾರ ಸಂಘದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗ್ಗೆ 11 ಗಂಟೆಗೆ ಭೈರಾಪುರ ಗ್ರಾಮದ ಬಾಬು ಜಗಜೀವನ್ ರಾಂ ಪುತ್ಥಳಿಯಿಂದ ಪ್ರತಿಭಟನಾ ಮೆರವಣಿಗೆ ಆರಂಭವಾಗಲಿದ್ದು, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಾಲೂಕು ಕಚೇರಿಗೆ ತೆರಳಿ ತಹಸೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಲಾಗುವುದು. ಹೀಗಾಗಿ ತಾಲೂಕಿನ ಮಾದಿಗ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಪ್ರತಿಭಟನೆ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಮಾ.15ರೊಳಗೆ ಒಳ ಮೀಸಲಾತಿ ಜಾರಿಗೊಳಿಸದಿದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ತಿಳಿಸಿರುವ ಕರ್ನಾಟಕ ಮಾದಾರ ಮಹಾಸಭಾ ರಾಜ್ಯಾಧ್ಯಕ್ಷ ಕೆಹೆಚ್.ಮುನಿಯಪ್ಪನವರ ಹೇಳಿಕೆಗೆ ತಾಲೂಕು ಕಾಂಗ್ರೆಸ್ ಮಾದಿಗ ಸಮುದಾಯ ಬದ್ಧವಾಗಿದ್ದು, ಕಾಂಗ್ರೆಸ್ ಪಕ್ಷವನ್ನು ಸಾಮೂಹಿಕವಾಗಿ ತೊರೆಯುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಡಿಎಸ್ಎಸ್ ಜಿಲ್ಲಾ ಸಂಚಾಲಕ ಹಲಗಯ್ಯನಹುಂಡಿ ಶಂಕರ್, ಅರುಂಧತಿ ಸಹಕಾರ ಸಂಘದ ತಾಲೂಕು ಅಧ್ಯಕ್ಷ ಕೆಂಚಪ್ಪ, ಮಾಜಿ ಅಧ್ಯಕ್ಷ ಹುಣಸೂರು ಪುಟ್ಟಯ್ಯ, ವಾಟಾಳು ಪುಟ್ಟಸ್ವಾಮಿ, ಗ್ರಾಪಂ ಮಾಜಿ ಸದಸ್ಯ ರಂಗಚಾರಿಹುಂಡಿ ಸುನೀಲ್, ಹೊಸಹಳ್ಳಿ ಚಿನ್ನಸ್ವಾಮಿ, ಗೋಪಾಲಪುರ ಮಂಜುನಾಥ್, ಸಿದ್ದನಹುಂಡಿ ಗೋಪಿ, ಆನಂದ್, ಕೆಬ್ಬೆ ಭಾಸ್ಕರ್, ಜವರಪ್ಪ ಹೆಚ್.ಡಿ.ಕೋಟೆ ರಾಜು, ಗುರುಸಿದ್ದಯ್ಯ, ವಿಜಾಪುರ ಕುಮಾರ್ ಹಾಜರಿದ್ದರು.

ಮೂಗೂರು ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ನೂತನ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ನಿರ್ದೇಶಕರನ್ನು ಮುಖಂಡರು ಅಭಿನಂದಿಸಿದರು.

ಮೂಗೂರು, ಮಾ.4– ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಮಹದೇವಸ್ವಾಮಿ ಹಾಗೂ ಉಪಾಧ್ಯಕ್ಷರಾಗಿ ಮುದ್ದರಾಮಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮದ ಡೇರಿ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಮಹದೇವಸ್ವಾಮಿ, ಉಪಾಧ್ಯಕ್ಷ ಸ್ಥಾನಕ್ಕೆ ಮುದ್ದರಾಮಶೆಟ್ಟಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಡೇರಿ ಸಿಇಓ ಎಂ.ನಾಗೇಂದ್ರ ಘೋಷಿಸಿದರು.

ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಿ ಮಾತನಾಡಿದ ಎಂ.ಡಿ.ಬಸವರಾಜು, ಈ ಹಿಂದೆ ಹೆಚ್.ಸಿ.ಮಹದೇವಪ್ಪನವರು ಶಾಸಕರಾಗಿದ್ದ ವೇಳೆ ಸಹಕಾರ ಸಂಘ ಸ್ಥಾಪಿಸಲು ಒಲವು ತೋರಿ ಮೂಗೂರು ಗ್ರಾಮಕ್ಕೆ ಡೇರಿ ಮಂಜೂರು ಮಾಡಿಸಿಕೊಟ್ಟಿದ್ದರು. ಬಳಿಕ ಸಿಎಂ ಸಿದ್ದರಾಮಯ್ಯ ಹಾಗೂ ಪಶು ಸಂಗೋಪನೆ ಸಚಿವರ ಸಹಕಾರದಿಂದ ಗ್ರಾಮಕ್ಕೆ ಬಿಎಂಸಿ ಕೇಂದ್ರ ಮಂಜೂರು ಮಾಡಿಸಿಕೊಟ್ಟರು. ಹೀಗಾಗಿ ಡೇರಿ ಆಡಳಿತ ಮಂಡಳಿ ಸಂಘದ ಶ್ರೇಯೋಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ ಹಾಲಿನ ಉತ್ಪಾದನೆ ಹೆಚ್ಚಿಸುವ ಮೂಲಕ ಸಂಘವನ್ನು ಅಭಿವೃದ್ಧಿಯುತ್ತ ಕೊಂಡ್ಯೊಯಬೇಕಿದೆ ಎಂದರು.

ಈ ವೇಳೆ ಡೈರಿ ಮಾಜಿ ಅಧ್ಯಕ್ಷ ಎಂ.ಎಂ.ಬಸವಣ್ಣ, ನಿರ್ದೇಶಕರಾದ ಮಹದೇವ ನಾಯಕ, ಮಾದೇಗೌಡ, ಇಸಾಕ್, ಹೊನ್ನೂರು ರಂಗಯ್ಯ, ಮಹದೇವ ನಾಯ್ಕ, ಮಲ್ಲೇಶ್, ಜ್ಯೋತಿ, ಲಿಂಗರಾಜ್, ಸತೀಶ್, ಚಿಕ್ಕಮ್ಮ, ಮುಖಂಡರಾದ ಎಂ.ನಾಗರಾಜು, ಕಿರಣ್, ಶಿವ ಮೂರ್ತಿ, ಮಾದಪ್ಪ, ನಾಗರಾಜಪ್ಪ, ಶೇಖರ್, ಪುಟ್ಟರಾಜ ನಾಯ್ಕ, ರಂಗಸ್ವಾಮಿ, ಮೂರ್ತಿ, ಗುರುಸ್ವಾಮಿ, ಕುಮಾರ, ಮಹೇಶ್, ಸಂಘದ ಸದಸ್ಯರು, ಡೈರಿ ಸಿಬ್ಬಂದಿ ಇತರರಿದ್ದರು.

ನುಗು ಏತ ನೀರಾವರಿಯಿಂದ ಕೆರೆ, ಕಟ್ಟೆಗಳಿಗೆ ನೀರು

ಶಾಸಕ ಅನಿಲ್ ಚಿಕ್ಕಮಾದು ಭರವಸೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಗುದ್ದಲಿ ಪೂಜೆ ನೆರವೇರಿಸಿದರು.

> “ವಿಸ್ತೀರ್ಣದಲ್ಲಿ ನಮ್ಮದು ದೊಡ್ಡ ಕ್ಷೇತ್ರವಾಗಿದೆ. ಎಲ್ಲಾ ಹಳ್ಳಿಗಳಿಗೂ ಸಮಾನವಾಗಿ ಅನುದಾನ ನೀಡಬೇಕು. ಹೀಗಾಗಿ ತುಂಬಾ ಕಷ್ಟಕರವಾಗಲಿದೆ. ಆದರೂ ಪ್ರಾಮಾಣಿಕವಾಗಿ ಸರಗೂರಿಗೆ ಮಿನಿ ವಿಧಾನಸೌಧ, 100 ಹಾಸಿಗೆ ಆಸ್ಪತ್ರೆ ಅಗ್ನಿ ಶಾಮಕ ಠಾಣೆ ನೀಡಲಾಗಿದೆ. ಒಟ್ಟಾರೆಯಾಗಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.
>
> – ಅನಿಲ್ ಚಿಕ್ಕಮಾದು, ಶಾಸಕ.

ಸರಗೂರು, ಮಾ.4– ಕಾಡಂಚಿನ ಗ್ರಾಮಗಳ ಜನ ಜಾನುವಾರುಗಳ ಅನುಕೂಲಕ್ಕಾಗಿ ಮುತ್ತಿಗೆ ಹುಂಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ನುಗು ಏತ ನೀರಾವರಿ ಯೋಜನೆಯಿಂದ ಶೀಘ್ರದಲ್ಲೇ ಕೆರೆ, ಕಟ್ಟೆಗಳಿಗೆ ನೀರು ತುಂಬಿಸಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ತಾಲೂಕಿನ ಎಂ.ಸಿ.ತಳಲು ಗ್ರಾಮದಲ್ಲಿ ಬುಧವಾರ ನುಗು ಏತ ನೀರಾವರಿ ಯೋಜನೆಯಡಿ 5 ಕೋಟಿ ರೂ. ವೆಚ್ಚದಲ್ಲಿ ಸೋಪಾನಕಟ್ಟೆ, ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಹಾಗೂ ಗ್ರಾಮದಿಂದ ನದಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಗ್ರಾಮದಲ್ಲಿ ನುಗು ನದಿಗೆ ಅಡ್ಡಲಾಗಿ ನಿರ್ಮಿಸಿರುವ ಏತ ನೀರಾವರಿ ಯೋಜನೆಯಿಂದ ಕಾಂಡಂಚಿನ ಗ್ರಾಮಗಳ ರೈತರಿಗೆ ಅನುಕೂಲವಾಗಲಿದೆ. ಅಲ್ಲದೆ ಅಂತರ್ಜಲ ಮಟ್ಟದ ಏರಿಕೆಯಾಗಲಿದೆ ಎಂದರು.

ಬಿ.ಮಟಕೆರೆ, ಮುತ್ತಿಗೆಹುಂಡಿ ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ 90 ರಷ್ಟು ರಸ್ತೆ ಅಭಿವೃದ್ಧಿ ಕಂಡಿವೆ. ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್, ಮಾಜಿ ಶಾಸಕ ದಿ.ಚಿಕ್ಕಮಾದು ಅವರ ಪರಿಶ್ರಮದಿಂದ 11 ಕಿಮೀ ದೂರದ ರಸ್ತೆ ಅಭಿವೃದ್ಧಿ ಕಂಡಿದೆ. ಶಾಸಕನಾದ ಮೇಲೆ ನಾನೂ ಗ್ರಾಮ ವಾಸ್ತವ್ಯ ಹೂಡಿದ ಮೇಲೆ ಎಲ್ಲಿಯೂ ರಸ್ತೆ ಅಭಿವೃದ್ಧಿ ಕಾಮಗಾರಿ ಬಾಕಿ ಉಳಿಯದಂತೆ ಕ್ರಮವಹಿಸಲಾಗಿದೆ. ಉಳಿದ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಕಾಡು ಪ್ರಾಣಿಗಳ ಹಾವಳಿ ತಡೆಗೆ ಒತ್ತು: ಸರಗೂರು ತಾಲೂಕಿನ ಗ್ರಾಮಗಳು ಕಾಡಂಚಿನಲ್ಲಿದ್ದು, ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇವುಗಳ ಕಡಿವಾಣಕ್ಕೆ ಸರ್ಕಾರದೊಂದಿಗೆ ಚರ್ಚಿಸಿ, ರೈಲ್ವೆ ಬ್ಯಾರಿಕೇಡ್ ಅಳವಡಿಕೆಗೆ ಕ್ರಮವಹಿಸಲಾಗಿದೆ. ಕಾಡು ಪ್ರಾಣಿಗಳ ಹಾನಿಯಿಂದ ಬೆಳೆ ನಷ್ಟವಾದರೆ ಸೂಕ್ತ ಪರಿಹಾರ ಸಿಗುತ್ತಿಲ್ಲ ಎಂಬ ಬೇಸರವಿದೆ. ಈ ಬಾರಿ ಬಜೆಟ್‌ನಲ್ಲಿ ರೈಲ್ವೆ ಬ್ಯಾರಿಕೇಡ್ ಅಳವಡಿಕೆ, ಹುಣಸೂರು ವೃತ್ತದಲ್ಲಿರುವ ಸೇತುವೆ ನಿರ್ಮಾಣ, ಗಂಡತ್ತೂರು, ಗುಂಡತ್ತೂರು ಗ್ರಾಮಗಳ ನಡುವೆ ಸೇತುವೆ ನಿರ್ಮಾಣ ಸೇರಿದಂತೆ ಇನ್ನಿತರ ಕಾಮಗಾರಿ ಮಾಡುವಂತೆ ಕೋರಲಾಗಿದೆ ಎಂದರು.

ಗ್ರಾಪಂ ಸದಸ್ಯ ಪ್ರಕಾಶ್ ಚಂದ್ರ ಮಾತನಾಡಿ, ಶಾಸಕರು ಗ್ರಾಮಕ್ಕೆ ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಅನುದಾನ ನೀಡಿದ್ದಾರೆ. ಅಲ್ಲದೆ ಬಸವೇಶ್ವರ ದೇವಸ್ಥಾನ ನಿರ್ಮಾಣಕ್ಕೆ ಅನುದಾನ ನೀಡುವುದಾಗಿ ತಿಳಿಸಿದ್ದಾರೆ. ಒಟ್ಟಾರೆ ಶಾಸಕ ಅನಿಲ್ ಚಿಕ್ಕಮಾದು ಅವರ ಪರಿಶ್ರಮದಿಂದ ಗ್ರಾಮ ಸಾಕಷ್ಟು ಏಳ್ಗೆ ಕಂಡಿದೆ ಎಂದರು.

ಎಂ.ಸಿ.ತಳಲು ಗ್ರಾಮದ ಗೌಡಿಕೆ ಮಹದೇವಪ್ಪ, ಮುಖಂಡರಾದ ಭವನೀಶ್, ನಿಜಗುಣ, ರಾಜಪ್ಪ, ಮಲ್ಲಪ್ಪ, ಪ್ರಭುಶಂಕರ್, ಮಹದೇವ ಕುಮಾರ್, ಕುಮಾರ್, ಸಿದ್ದು, ಶಿವಕುಮಾರ್, ನಂದೀಶ್, ಶೇಖರ್, ಮಹದೇವಗೌಡ, ಅಣ್ಣಯ್ಯಸ್ವಾಮಿ, ಎಂ.ಬಿ.ಆನಂದ್, ದೇವರಾಜು, ಚಿನ್ನಪ್ಪ, ಗುರುಸ್ವಾಮಿ, ನಾಗೇಂದ್ರ, ಸಿದ್ದರಾಜು, ಅರವಿಂದ, ರೇವಣ್ಣ, ಎಂ.ಬಿ.ಮಂಜು, ಪಾಲಾಕ್ಷ, ಮಂಜುನಾಥ್, ಗುತ್ತಿಗೆದಾರ ಬಸವರಾಜಪ್ಪ, ಮಹೇಶ್, ಸುದರ್ಶನ್, ಮಂಜು, ಸಿದ್ದರಾಜು, ಎಇಇ ಹಾಗೂ ಅಕ್ಕಪಕ್ಕದ ಗ್ರಾಮದ ಯಜಮಾನರಿದ್ದರು.

ಅನಧಿಕೃತ ರೆಸಾರ್ಟ್‌ಗಳು ಅನುಮತಿ ಪಡೆಯಲು ಸೂಚನೆ



ಹೆಚ್.ಡಿ.ಕೋಟೆ, ಮಾ.4– ತಾಲೂಕಿನಲ್ಲಿ 23 ರೆಸಾರ್ಟ್‌ಗಳಿದ್ದು, ಈ ಪೈಕಿ 20 ಅನುಮತಿ ಪಡೆದು ನಿರ್ಮಿಸಿದ್ದರೇ, ಉಳಿದ 3 ರೆಸಾರ್ಟ್‌ಗಳು ಅನುಮತಿ ಪಡೆದಿಲ್ಲ. ಹೀಗಾಗಿ ಅನುಮತಿ ಪಡೆಯಲು ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಡಂಚಿನ ಹಾಗೂ ಕಬಿನಿ ನದಿ ಹಿನ್ನೀರಿನಲ್ಲಿ 2017ಕ್ಕೂ ಹಿಂದೆ 20 ರೆಸಾರ್ಟ್‌ಗಳು ಸೂಕ್ಷ್ಮ ವಲಯ ಎಂದು ಘೋಷಿಸುವುದಕ್ಕೂ ಮುನ್ನಾ ನಿರ್ಮಾಣವಾಗಿದ್ದು, ಉಳಿದ 3 ರೆಸಾರ್ಟ್‌ಗಳು 2025 ನಂತರ ಸೂಕ್ಷ್ಮ ವಲಯ ಎಂದು ಘೋಷಣೆಯಾದ ನಂತರ ನಿರ್ಮಿಸಲಾಗಿದೆ. ಹಾಗಾಗಿ ಇವುಗಳಿಗೆ ಪ್ರಾದೇಶಿಕ ಆಯುಕ್ತರ ಸಮಿತಿಯಲ್ಲಿ ಅನುಮತಿ ಪಡೆಯಲು ಸೂಚಿಸಲಾಗಿದೆ. ಅಲ್ಲಿವರೆಗೆ ಯಾವುದೇ ಕಾರ್ಯ ಚಟುವಟಿಕೆ ನಡೆಸದಂತೆ ಸೂಚಿಸಲಾಗಿದೆ ಎಂದು ತಿಳಿಸಿದರು.

20 ರೆಸಾರ್ಟ್‌ಗಳ ಪೈಕಿ 6 ರೆಸಾರ್ಟ್‌ನವರು ನೀರಾವರಿ ಇಲಾಖೆಗೆ ಸೇರಿದ ಭೂಸ್ವಾಧೀನ ಆಗಿರುವ ಜಾಗ ಒತ್ತುವರಿ ಮಾಡಿಕೊಂಡು ರೆಸಾರ್ಟ್ ನಿರ್ಮಾಣ ಮಾಡಿರುವುದು ಸರ್ವೇಯಿಂದ ತಿಳಿದು ಬಂದಿದೆ. ಒತ್ತುವರಿ ತೆರವುಗೊಳಿಸುವಂತೆ ಹದಿನೈದು ದಿನಗಳ ಕಾಲ ಗಡುವು ನೀಡಲಾಗಿದೆ. ಇದರಲ್ಲಿ ಈಗಾಗಲೇ 3 ರೆಸಾರ್ಟ್‌ನವರು ತೆರವು ಮಾಡಿದ್ದು, ಉಳಿದ 3 ರೆಸಾರ್ಟ್‌ನವರು ತೆರವು ಮಾಡಿಲ್ಲ ಎಂದು ಮಾಹಿತಿ ನೀಡಿದರು.

ಈ ಬಗ್ಗೆ ಅಕ್ರಮ ರೆಸಾರ್ಟ್ ತೆರವುಗೊಳಿಸುವಂತೆ ನಡೆಸುತ್ತಿರುವ ಪ್ರತಿಭಟನಾಕಾರರಿಗೂ ಕೂಡ ಮಾಹಿತಿ ನೀಡಲಾಗಿತ್ತು. ಅವರು ಮನವರಿಕೆ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಸರ್ವೇಯಲ್ಲಿ ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರರ ಗಣೇಶ್, ಸರ್ವೇ ಅಧಿಕಾರಿಗಳಾದ ಅರ್ಜುನ ಆರ್‌ಐ ಯೋಗೇಶ್, ವಿಎ ನಾಗರಾಜು, ಪೊಲೀಸ್ ಇಲಾಖೆ ಅಧಿಕಾರಿಗಳು ಭಾಗವಹಿಸಿದ್ದರು ಎಂದರು.

ಅಪರಿಚಿತ ವ್ಯಕ್ತಿ ನೇಣಿಗೆ ಶರಣು

ಕಂಪಲಾಪುರ, ಮಾ.4– ಅಪರಿಚಿತ ವ್ಯಕ್ತಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.

ಸುಮಾರು 50 ರಿಂದ 60 ವರ್ಷ ವಯಸ್ಸಿನ ವ್ಯಕ್ತಿಯೋರ್ವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ ಕಟ್ಟಡದ ಮೇಲ್ಛಾವಣಿಗೆ ಸೀರೆಯಿಂದ ಕುತ್ತಿಗೆಗೆ ಬಿಗಿದುಕೊಂಡು ಸೋಮವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈತನ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ. ಶಾಲೆ ಮುಖ್ಯ ಶಿಕ್ಷಕರು ನೀಡಿದ ದೂರಿನ ಮೇರೆಗೆ ಸ್ಥಳಕ್ಕೆ ಡಿವೈಎಸ್ಪಿ ರವಿ, ಇನ್ಸ್‌ಪೆಕ್ಟರ್ ಗೋವಿಂದರಾಜ್, ಎಸ್ಐ ಜಗದೀಶ್ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಇದೀಗ ಶವ ಮೈಸೂರಿನ ಕೆ.ಆರ್.ಆಸ್ಪತ್ರೆ ಶವಾಗಾರದಲ್ಲಿದ್ದು, ಈ ಸಂಬಂಧ ಪಿರಿಯಾಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಳೇ ತಿರುಮಕೂಡಲಿನಲ್ಲಿ ನೂತನ ಮನೆಗಳ ಹಸ್ತಾಂತರ



ನೂತನ ಮನೆಗಳನ್ನು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಉದ್ಘಾಟಿಸಿದರು.

ತಿ.ನರಸೀಪುರ, ಮಾ.4– ಹಳೇ ತಿರುಮಕೂಡಲು ಗ್ರಾಮದಲ್ಲಿ ಕೈಲಾಸಾಶ್ರಮ ಮಹಾ ಸಂಸ್ಥಾನ ಟ್ರಸ್ಟ್ ಹಾಗೂ ಸ್ಥಳೀಯರ ನಡುವಿನ ಜಾಗದ ತಕರಾರು ಬಗೆಹರಿದ ಹಿನ್ನೆಲೆಯಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಅವರು ಬಡ ಜನರಿಗಾಗಿ ನಿರ್ಮಿಸಿದ್ದ ನೂತನ ಮನೆಗಳನ್ನು ಉದ್ಘಾಟಿಸಿ, ಅಧಿಕೃತವಾಗಿ ಮನೆಗಳನ್ನು ಫಲಾನುಭವಿಗಳಿಗೆ ಹಸ್ತಾಂತರಿಸಿದರು.

ಹಳೇ ತಿರುಮಕೂಡಲಿನ ಕೆಲ ಗ್ರಾಮಸ್ಥರು ಗ್ರಾಮದ ಮುಖ್ಯದ್ವಾರದ ಬಳಿ ಗುಡಿಸಲು ನಿರ್ಮಿಸಿಕೊಂಡು ವಾಸವಾಗಿದ್ದರು. ಕೈಲಾಸಾಶ್ರಮಕ್ಕೆ ಸೇರಿದ ಜಾಗ ಇದಾಗಿದ್ದರಿಂದ ಗೊಂದಲ ಉಂಟಾಗಿ, ನಿವಾಸಿಗಳು ಹಾಗೂ ಕೈಲಾಸಾಶ್ರಮದ ನಡುವೆ ತಕರಾರು ಉಂಟಾಗಿತ್ತು. ಪುರಸಭೆ ಮಾಜಿ ನಾಮ ನಿರ್ದೇಶಿತ ಸದಸ್ಯ ಆರ್.ಚೇತನ್ ಹಲವು ವರ್ಷಗಳಿಂದ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದ್ದರು. ಅಂತಿಮವಾಗಿ ಡಾ.ಯತೀಂದ್ರ ಅವರ ಮಧ್ಯಪ್ರವೇಶದಿಂದ ಸಮಸ್ಯೆ ಬಗೆಹರಿದು ಜಾಗದ ತಕರಾರು ಸುಖಾಂತ್ಯಗೊಂಡ ಹಿನ್ನೆಲೆಯಲ್ಲಿ ಇಂದು ಡಾ.ಯತೀಂದ್ರ ನೂತನ ಮನೆಗಳ ಉದ್ಘಾಟನೆ ನೆರವೇರಿಸಿದರು.

ಡಾ.ಯತೀಂದ್ರ ಮಾತನಾಡಿ, ಜಾಗದ ತಕರಾರು ಸುಖಾಂತ್ಯಗೊಂಡಿರುವುದು ಖುಷಿ ತಂದಿದೆ. ಇದೊಂದು ಮಾದರಿ ಪ್ರಯತ್ನವಾಗಿದ್ದು, ಒಂದಷ್ಟು ಜನ ಊರಿಗೆ ಒಳ್ಳೆಯದು ಮಾಡಬೇಕೆಂದು ಬಯಸಿ ಅದಕೋಸ್ಕರ ಕಷ್ಟಪಟ್ಟರೆ ಫಲ ಸಿಗುತ್ತದೆ ಎಂಬುದಕ್ಕೆ ಜಾಗದ ತಕರಾರು ಬಗೆಹರಿಸಿದ ಚೇತನ್ ಅವರ ಶ್ರಮ ಸಾಕ್ಷಿಯಾಗಿದೆ ಎಂದರು.

ಚೇತನ್ ಅವರು ಸಮಸ್ಯೆ ಬಗೆಹರಿಸಲು ಸಾಕಷ್ಟು ಶ್ರಮ ಹಾಕಿದ್ದಾರೆ. ಇದರಲ್ಲಿ ನನ್ನದೇನೂ ಹೆಚ್ಚಿನ ಪಾತ್ರವಿಲ್ಲ. ಮಾತುಕತೆಗೆ ಮುಂದಾಗಿದ್ದೆ ಅಷ್ಟೆ ಈಗ ಸಮಸ್ಯೆ ಸುಖಾಂತ್ಯ ಕಂಡಿದ್ದು, ಕೈಲಾಸಾಶ್ರಮದವರಿಗೆ ಸರ್ಕಾರದಿಂದ ಪರಿಹಾರ ಕೊಡಿಸಿ ತಕರಾರು ಬಗೆಹರಿಸಿ, ನಾಲ್ವರು ಕುಟುಂಬದವರಿಗೆ ಮನೆ ಕಟ್ಟಿ ಕೊಡಲಾಗಿದೆ. ನಿವೇಶನವನ್ನು ಕೈಲಾಸಾಶ್ರಮದವರು ಕೊಟ್ಟಿದ್ದಾರೆ. ಮನೆಗಳನ್ನು ಚೇತನ್ ಅವರು 16 ಲಕ್ಷ ರೂ. ಸ್ವಂತ ವೆಚ್ಚದಲ್ಲಿ ಕಟ್ಟಿಸಿ ಕೊಟ್ಟಿದ್ದಾರೆ. ಹಾಗಾಗಿ ಅವರಿಗೆ ಹಾಗೂ ಕೈಲಾಸಾಶ್ರಮದ ಜಯೇಂದ್ರ ಪುರಿ ಸ್ವಾಮೀಜಿ ಹಾಗೂ ಬುದ್ಧಗಿರಿ ಸ್ವಾಮೀಜಿಯವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ವರುಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮುದ್ದೇಗೌಡ, ಪಿ.ಸ್ವಾಮಿನಾಥ್‌ಗೌಡ, ಪುರಸಭೆ ಮಾಜಿ ಸದಸ್ಯ ಆರ್.ಚೇತನ್, ಜಿಪಂ ಮಾಜಿ ಸದಸ್ಯ ಕೆ.ಮಹದೇವ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ತಾಲೂಕು ಕುರುಬರ ಸಂಘದ ನಿರ್ದೇಶಕ ಅರುಣ್ ಕುಮಾರ್, ಕುಪ್ಯ ಗ್ರಾಪಂ ಮಾಜಿ ಅಧ್ಯಕ್ಷ ರಘು, ಭೈರಾಪುರ ಗ್ರಾಪಂ ಮಾಜಿ ಅಧ್ಯಕ್ಷ ಎ.ಜೆ.ವೆಂಕಟೇಶ್, ಅರ್ಚಕ ಸೋಮಣ್ಣ, ಸಂದೇಶ್ ಸ್ವಾಮಿನಾಥ, ಮುದ್ದು ಬೀರನಹುಂಡಿ ಶ್ರೀಕಂಠ, ರಜನಿ, ಟಿ.ಬಿ.ಸುರೇಶ್, ಮಂಜುನಾಥ್, ಗುರುಮಲ್ಲು, ಮಂಜು, ಸಿ.ಚಂಚಲ ನಾಗರಾಜು, ಏಜೆಂಟ್ ಲೋಕೇಶ್, ಕೆಂಪಯ್ಯನಹುಂಡಿ ರಾಜೇಂದ್ರ, ಲಿಂಗರಾಜು, ಸ್ವಾಮಿಗೌಡ ಮತ್ತಿತರರಿದ್ದರು.


ಬೆಟ್ಟದಪುರ ಕಾಲೇಜಿನಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮ



ಬೆಟ್ಟದಪುರ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ವಾಣಿಜ್ಯ ಶಾಸ್ತ್ರ ವಿಭಾಗದಿಂದ ಪದವಿ ನಂತರದ ವೃತ್ತಿ ಮಾರ್ಗ ಕುರಿತು ಒಂದು ದಿನದ ವಿಶೇಷ ಉಪನ್ಯಾಸ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹುಣಸೂರು ಸರ್ಕಾರಿ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಆರ್.ಶ್ರೀನಿವಾಸ್, ಬಿಕಾಂ ನಂತರ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿವಿಧ ಅವಕಾಶಗಳ ಕುರಿತು ಸಮಗ್ರ ಮಾಹಿತಿ ನೀಡಿದರು. ಈ ವೇಳೆ ಕಾಲೇಜಿನ ಪ್ರಾಂಶುಪಾಲ ಭರತ್ ರಾಜೇ ಅರಸ್, ಐಕ್ಯೂಎಸಿ ಸಂಚಾಲಕ ಮತ್ತು ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಶಕೀರ್, ಪ್ರಾಧ್ಯಾಪಕರಾದ ಮಮತಶ್ರೀ ಎನ್.ಪಿ, ಶಾಂಭವಿ, ವೆಂಕಟೇಶ್ ಇತರರಿದ್ದರು.

ಡಾ.ಜೆರ್ರಿ ಪೈಸ್ ನಿಧನ



ಹುಣಸೂರು, ಮಾ.4– ಡೀಡ್ ಸಂಸ್ಥೆ ಸಂಸ್ಥಾಪಕ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸ್ಥಾಪಕ ಡಾ.ಜೆರ್ರಿ ಪೈಸ್ (87) ಬುಧವಾರ ನಿಧನರಾದರು.

ಮೃತರು ತಾಲೂಕಿನ ಚಿಕ್ಕಹುಣಸೂರಿನಲ್ಲಿ 1973–74ರಲ್ಲಿ ಬವಸ್ ಇಂಡಿಯಾ, 1976–77ರಲ್ಲಿ ಡೀಡ್ ಸಂಸ್ಥೆ ಸ್ಥಾಪಿಸಿ ಆದಿವಾಸಿಗಳ ಆರೋಗ್ಯ, ಶಿಕ್ಷಣ, ವಸತಿ, ಅರಣ್ಯ ಹಕ್ಕುಗಳು, ಅವರು ಕೃಷಿಯಲ್ಲಿ ಪ್ರಗತಿ ಸಾಧಿಸಲು ಕಾರಣರಾಗಿದ್ದರು. ಅಲ್ಲದೇ ಮೂಲ ನಿವಾಸಿಗಳ ಸಂಸ್ಕೃತಿ, ಭಾಷೆ, ಉಡುಗೆ–ತೊಡುಗೆಗಳ ಬಗ್ಗೆ ಪ್ರಚಾರ ಕೈಗೊಂಡಿದ್ದರು. ಸರ್ಕಾರದಿಂದ ಭೂಮಿ ಕೊಡಿಸುವ ಮೂಲಕ ಆದಿವಾಸಿಗಳ ಆರಾಧ್ಯ ದೈವವಾಗಿದ್ದರು. ಅಲ್ಲದೇ ಕರ್ನಾಟಕದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಉಗಮಕ್ಕೆ ಕಾರಣರಾಗಿ ಮೊದಲ ಅಧ್ಯಕ್ಷರಾಗಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಶವವನ್ನು ಮೈಸೂರಿನ ಸೆಂಟ್ ಜೋಸೆಫ್ ಆಸ್ಪತ್ರೆಯಲ್ಲಿ ಇಡಲಾಗಿದ್ದು, ವಿದೇಶದಲ್ಲಿರುವ ಪುತ್ರಿ ಆಗಮಿಸಿದ ನಂತರ ಶನಿವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿದೆ. ಮೃತರ ನಿಧನಕ್ಕೆ ವಿವಿಧ ಸಂಸ್ಥೆಗಳ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸರಸ್ವತಿ



ಹುಣಸೂರು, ಮಾ.4– ತಾಲೂಕಿನ ತಿಪ್ಪಲಾಪುರ ಗ್ರಾಮದ ನಿವಾಸಿ, ಹೋಂಗಾರ್ಡ್ ಟಿ.ಸಿ.ಹರೀಶ್ ಅವರ ಪತ್ನಿ ಸರಸ್ವತಿ(28) ಬುಧವಾರ ನಿಧನರಾದರು. ಮೃತರು ಪತಿ, ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ.

ಮೈಸೂರು ಮಿತ್ರ

ಮುಂದಿನ 20 ವರ್ಷಗಳಲ್ಲಿ ಶೇ.9ರಷ್ಟು ಅಣುವಿದ್ಯುತ್ ಬಳಕೆ

ಬಾಬಾ ಪರಮಾಣು ಸಂಶೋಧನಾ ಕೇಂದ್ರದ ನಿವೃತ್ತ ವಿಜ್ಞಾನಿ ಪ್ರೊ. ವಿ.ಕೆ.ಮನ್‌ಚಂದ್ ಅಭಿಮತ

ಮೈಸೂರು, ಮಾ.4(ಎಂಟಿವೈ)– ಭಾರತದಲ್ಲಿ ಥೋರಿಯಂ ನಿಕ್ಷೇಪ ಹೇರಳವಾಗಿದ್ದು, ಮುಂಬರುವ ದಿನಗಳಲ್ಲಿ ಭಾರತ ಅಣು ವಿದ್ಯುತ್ ರಿಯಾಕ್ಟರ್‌ಗಳಲ್ಲಿ ಜಾಗತಿಕ ಶಕ್ತಿ ಹೊರ ಹೊಮ್ಮಲಿದೆ ಎಂದು ಬಾಬಾ ಪರಮಾಣು ಸಂಶೋಧನಾ ಕೇಂದ್ರದ ನಿವೃತ್ತ ವಿಜ್ಞಾನಿ ಪ್ರೊ.ವಿ.ಕೆ.ಮನ್‌ಚಂದ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ '70 ವರ್ಷಗಳಲ್ಲಿ ಭಾರತದ ಪರಮಾಣು ಶಕ್ತಿ ಪ್ರಯಾಣ' ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಕಡಿಮೆ ನಿಕ್ಷೇಪವಿರುವ ಯುರೇನಿಯಂ ಅನ್ನು ರಿಯಾಕ್ಟರ್‌ಗಳಲ್ಲಿ ಬಳಕೆ ಮಾಡಲಾಗುತ್ತಿದ್ದು, ಥೋರಿಯಂಗೆ ಉನ್ನತೀಕರಿಸುವ ಯತ್ನಗಳು ನಡೆಯುತ್ತಿವೆ. ಭಾರತ ಜಾಗತಿಕವಾಗಿ ಪರಮಾಣು ತಂತ್ರಜ್ಞಾನದಲ್ಲಿ ಮುಂದುವರೆದಿದ್ದು, 2047ರ ಹೊತ್ತಿಗೆ ಪರಮಾಣುವಿನ ಮೂಲಕ ವಿದ್ಯುತ್ ಶಕ್ತಿ ಪೂರೈಕೆ ಸಾಮರ್ಥ್ಯವನ್ನು ಶೇ.2ರಿಂದ ಶೇ.9ಕ್ಕೆ ಹೆಚ್ಚಿಸುವ ಗುರಿ ಯನ್ನು ಹೊಂದಿದೆ. ಅತ್ಯಾಧುನಿಕ ಪರಮಾಣು ತಂತ್ರಜ್ಞಾನವನ್ನು ಕಳೆದ 7 ದಶಕಗಳಲ್ಲಿ ಅಭಿವೃದ್ಧಿ ಪಡಿಸುತ್ತಾ ಬಂದಿದೆ. ಇದರಿಂದ 2047ರ ವೇಳೆಗೆ 100 ಗಿಗಾ ವ್ಯಾಟ್ ಅಣು ವಿದ್ಯುತ್ ಶಕ್ತಿ ತಯಾರಿಸುವ ಗುರಿ ಹೊಂದಿದೆ. ಪ್ರಸ್ತುತ ಒಟ್ಟು ವಿದ್ಯುತ್ ಶಕ್ತಿ ಉತ್ಪಾದನೆಯಲ್ಲಿ ಶೇ.2ರಷ್ಟು ಮಾತ್ರವೇ ಪರಮಾಣು ಶಕ್ತಿಯ ಪಾಲಿದ್ದು, ಮುಂದಿನ 20 ವರ್ಷಗಳಲ್ಲಿ ಅದು ಶೇ.9ಕ್ಕೆ ಏರಲಿದೆ ಎಂದರು.



ಮೈಸೂರು ವಿಶ್ವವಿದ್ಯಾಲಯದ ಕ್ರಾಫರ್ಡ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮಕ್ಕೆ ಬಾಬಾ ಪರಮಾಣು ಸಂಶೋಧನಾ ಕೇಂದ್ರದ ನಿವೃತ್ತ ವಿಜ್ಞಾನಿ ಪ್ರೊ.ವಿ.ಕೆ.ಮನ್‌ಚಂದ್ ಚಾಲನೆ ನೀಡಿದರು. ಚಿತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ ಅವರನ್ನು ಕಾಣಬಹುದು.

ಏಷ್ಯಾದ ಮೊದಲ ಅಣು ಶಕ್ತಿ ಕೇಂದ್ರವು ಮಹಾರಾಷ್ಟ್ರದ ಟ್ರಾಂಬೆಯಲ್ಲಿ ಸ್ಥಾಪನೆಯಾಯಿತು. ಪ್ರಸ್ತುತ 22 ರಿಯಾಕ್ಟರ್‌ಗಳು ದೇಶದಲ್ಲಿ ಕಾರ್ಯಾಚರಿಸುತ್ತಿವೆ. ದೇಶದ ಜನಸಂಖ್ಯೆ ಹೆಚ್ಚುತ್ತಿದ್ದು, 24 ಗಂಟೆಯೂ ನಿಯಮಿತವಾಗಿ ವಿದ್ಯುತ್ ಉತ್ಪಾದಿಸುವ ಶೂನ್ಯ ಇಂಗಾಲದ ಶಕ್ತಿ ಮೂಲಗಳು ಅಗತ್ಯವಾಗಿವೆ. ಜಾಗತಿಕವಾಗಿ ಇಂಗಾಲ ಹೊರಸೂಸುವಿಕೆಯನ್ನು ತಡೆಗಟ್ಟಲು ಕಲ್ಲಿದ್ದಲಿನ ಶಾಖೋತ್ಪನ್ನ ಘಟಕಗಳನ್ನು ತಗ್ಗಿಸಬೇಕಿದೆ. ಜಗತ್ತಿನಾದ್ಯಂತ 400ಕ್ಕೂ ಹೆಚ್ಚು ರಿಯಾಕ್ಟರ್‌ಗಳು ಸ್ಥಾಪನೆಯಾಗುತ್ತಿವೆ.

ದೇಶವು 2030ರ ವೇಳೆಗೆ 500 ಗಿಗಾ ವ್ಯಾಟ್ ಪಳೆಯುಳಿಕೆ (ಫಾಸಿಲ್) ಇಂಧನರಹಿತ ವಿದ್ಯುತ್ ಉತ್ಪಾದನೆ ಮಾಡುವ ಗುರಿ ಹಾಕಿಕೊಂಡಿದೆ. ಶೇ.51ರಷ್ಟು ಶಕ್ತಿಯನ್ನು ನವೀಕೃತ ಇಂಧನ ಮೂಲಗಳಿಂದ ಪಡೆಯಬೇಕಾಗಿದೆ. ಒಂದು ಶತಕೋಟಿ ಟನ್‌ಗೆ ಇಂಗಾಲ ಹೊರಸೂಸುವಿಕೆಯನ್ನು ತಗ್ಗಿಸ ಬೇಕಾಗಿದ್ದು, 2070ರ ವೇಳೆಗೆ ಸೂಸುವಿಕೆಯನ್ನು ಶೂನ್ಯಗೊಳಿಸಬೇಕು. ಹೀಗಾಗಿ, ಅಣುಶಕ್ತಿ ಸೇರಿದಂತೆ ಹಸಿರು ಇಂಧನ ಪ್ರಮಾಣವನ್ನು ತಗ್ಗಿಸುವ ಎಲ್ಲ ತಂತ್ರಜ್ಞಾನವನ್ನು ಉನ್ನತೀಕರಿಸುವ ಯೋಜನೆಗಳನ್ನು ಹಾಕಿಕೊಂಡಿದೆ ಎಂದರು.

ಪರಮಾಣು ಶಕ್ತಿಯನ್ನು ಮತ್ತಷ್ಟು ಬಲಗೊಳಿಸಲು ಭಾರತ ಸರ್ಕಾರ 2026 ಬಜೆಟ್‌ನಲ್ಲಿ 20 ಸಾವಿರ ಕೋಟಿ ರೂ. ಸಂಶೋಧನೆ ಮತ್ತು ಪರಮಾಣು ರಿಯಾಕ್ಟರ್‌ಗಳ ಸ್ಥಾಪನೆಗೆ ಮೀಸಲಿರಿಸಿದೆ. ಇದರಿಂದ ಮುಂಬರುವ ವರ್ಷಗಳಲ್ಲಿ ಪರಮಾಣು ರಿಯಾಕ್ಟರ್‌ಗಳ ಸಂಖ್ಯೆ ಹೆಚ್ಚಾಗಲಿದೆ. ನಾಲ್ಕನೇ ಪೀಳಿಗೆಯ ಅಣುಶಕ್ತಿ ಟಜ್ಞಾನವು ಕಾರ್ಯಾಚರಿಸಲು ಸಿದ್ಧತೆ ನಡೆದಿದೆ. ವಿಕಿರಣ ಸೂಸುವ ಅಣು ತ್ಯಾಜ್ಯ ನಿರ್ವಹಣೆಯನ್ನು ಮಾಡುತ್ತಿದೆ. ವಿಶ್ವದಲ್ಲಿ 63.5 ಲಕ್ಷ ಟನ್ ಥೋರಿಯಂ ಲಭ್ಯವಿದ್ದು, ಭಾರತದಲ್ಲಿ 8.46 ಲಕ್ಷ ಟನ್ ನಿಕ್ಷೇಪವಿದೆ. ಹೀಗಾಗಿ ಭಾರತವು ಮುಂದಿನ ಶತಮಾನದ ವೇಳೆಗೆ ನಿರ್ಣಾಯಕವಾಗಲಿದೆ. ದೇಶದ ಪರಮಾಣು ಶಕ್ತಿ ಕಾರ್ಯಕ್ರಮಗಳು ವಿದ್ಯುತ್ ಉತ್ಪಾದನೆ ಹಾಗೂ ರಕ್ಷಣಾ ಬಳಕೆಗೆ ಮಾತ್ರವಲ್ಲದೇ ಆರೋಗ್ಯ, ಕೃಷಿ, ವಿಕಿರಣ ತಂತ್ರಜ್ಞಾನ, ಆಹಾರ ಮತ್ತು ಗುಣಮಟ್ಟ ಕಾಪಾಡಲು, ಶುದ್ಧ ನೀರು, ಕೈಗಾರಿಕೆ, ಲೇಸರ್ ತಂತ್ರಜ್ಞಾನಕ್ಕೆ ಬಳಸಬಹುದು. ಕೃಷಿ ಇಳುವರಿ ಹೆಚ್ಚಿಸಲು ಬಿತ್ತನೆ ಬೀಜ ಸಂವರ್ಧನೆಗೆ (ಮ್ಯೂಟೇಶನ್) ಬಳಕೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕುಲಸಚಿವರಾದ ಎಂ.ಕೆ.ಸವಿತಾ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಫೋರ್ತ್ ಫ್ಲೋರ್–3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ತುಮ್ಮನೇರಳೆಯಲ್ಲಿ ಶ್ರೀ ನಾಗಲಿಂಗೇಶ್ವರ ಜಾತ್ರೆ



ನಂಜನಗೂಡು ತಾಲೂಕು ತುಮ್ಮನೇರಳೆ ಗ್ರಾಮದಲ್ಲಿ ಶ್ರೀ ನಾಗಲಿಂಗೇಶ್ವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು. ಜಾತ್ರೆ ಅಂಗವಾಗಿ ರಥೋತ್ಸವ ಹಾಗೂ ಕಪಿಲಾ ನದಿಯಿಂದ ತೇಲು ಮಹೋತ್ಸವ ವಿಜೃಂಭಣೆಯಿಂದ ಜರುಗಿತು. ತುಮ್ಮನೇರಳೆ, ಸುತ್ತಮುತ್ತ ಗ್ರಾಮಗಳ ಮುಖಂಡರು ಭಕ್ತಾದಿಗಳು ಹಾಜರಿದ್ದರು.

ಯುಜಿಸಿಇಟಿ: ಶುಲ್ಕ ಪಾವತಿಗೆ ಮಾ.7 ಕೊನೆ ದಿನ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಹಾಗೂ ನೋಂದಣಿ ಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಶುಲ್ಕ ಪಾವತಿಸಲು ಮಾರ್ಚ್ 7ರವರೆಗೆ ದಿನಾಂಕ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ತಿಳಿಸಿದ್ದಾರೆ.

ಇದುವರೆಗೆ ಒಟ್ಟು 3.47 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದು, ಈ ಪೈಕಿ 3.36 ಲಕ್ಷ ಮಂದಿ ನಿಗದಿತ ಶುಲ್ಕ ಪಾವತಿ ಮಾಡಿದ್ದಾರೆ. ಇನ್ನೂ 9 ಸಾವಿರ ಮಂದಿ ಶುಲ್ಕ ಪಾವತಿಸಬೇಕಿದ್ದು, ಅವರಿಗೆ ಅನುಕೂಲ ಆಗಲೆಂದು ದಿನಾಂಕ ವಿಸ್ತರಿಸಲಾಗಿದೆ ಎಂದು ವಿವರಿಸಿದ್ದಾರೆ.

ಕಲ್ಯಾಣ ಕರ್ನಾಟಕ ವೃಂದದ ವಿವಿಧ ಹುದ್ದೆಗಳಿಗೆ ಫೆ.21 ಮತ್ತು 22ರಂದು ಸ್ಪರ್ಧಾತ್ಮಕ ಪರೀಕ್ಷೆ ನಡೆದಿದ್ದು, ಅವುಗಳ ಅಂತಿಮ ಕೀ ಉತ್ತರ ಹಾಗೂ ಅಭ್ಯರ್ಥಿಗಳು ಗಳಿಸಿದ ಅಂಕಗಳ ತಾತ್ಕಾಲಿಕ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ತಿಳಿಸಿದ್ದಾರೆ. ಅಂಕಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ ಮಾ.6ರಂದು ಬೆಳಿಗ್ಗೆ 11ಗಂಟೆ ಒಳಗೆ ಆನ್‌ಲೈನ್ ಮೂಲಕ ಸಲ್ಲಿಸಬೇಕು ಎಂದು ವಿವರಿಸಿದ್ದಾರೆ.

ಹೆಬ್ಬಾಳು ಶಾಲೆಯಲ್ಲಿ ಶಾಲೆಗಳೆಡೆಗೆ ವಚನಗಳ ನಡಿಗೆ ಕಾರ್ಯಕ್ರಮ



ಹೆಬ್ಬಾಳು, ಮಾ.4–ದೇಶ ಸೇವೆಗೆ ಬಳಕೆಯಾಗದ ವಿದ್ಯೆ ವ್ಯರ್ಥ ಎಂದು ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ ಗುಗಾವತಿ ಹೇಳಿದ್ದು.

ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಸ.ಹಿ.ಪ್ರಾ.ಶಾಲೆ ಹೆಬ್ಬಾಳು ಇಲ್ಲಿ ನಿವೃತ್ತ ನ್ಯಾಯಮೂರ್ತಿ ಅರಳಿ ನಾಗರಾಜ ಗಂಗಾವತಿ ಮತ್ತು ಮಂಜುಳ ನಂದೀಶ್ವರ್ ಅವರ ದತ್ತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಚನ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ವಿವರಿಸಿ, ವಚನಗಳು ಜೀವನ ಮೌಲ್ಯಗಳ ಮಾರ್ಗದರ್ಶಕ. ಸಮಾಜದಲ್ಲಿ ಸಮಾನತೆ, ನೈತಿಕತೆ ಮತ್ತು ಮಾನವೀಯತೆಯನ್ನು ಬಲಪಡಿಸುವ ಶಕ್ತಿ ವಚನಗಳಲ್ಲಿ ಅಡಕವಾಗಿದೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಓಮನ್ ದೇಶದ ಮಸ್ಕತ್‌ನಿಂದ ಆಗಮಿಸಿದ್ದ ಡಿ.ವಿ ನಂದೀಶ್ವರ್ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಮೌಲ್ಯಾಧಾರಿತ ಶಿಕ್ಷಣ ಅತ್ಯಗತ್ಯವಾಗಿದ್ದು, ಮಕ್ಕಳಲ್ಲಿ ಸಂಸ್ಕಾರ ಬೆಳೆಸಲು ಇಂತಹ ಕಾರ್ಯಕ್ರಮಗಳು ಅವಶ್ಯಕವೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಚನ ಕುಮಾರಸ್ವಾಮಿ ಮಾತನಾಡಿ, ವಚನಗಳನ್ನು ಹೇಳಿದರೆ ಜ್ಞಾನವಾಗುತ್ತದೆ; ಅದನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಅನ್ವಯವಾಗುತ್ತದೆ. ವಚನದಂತೆ ಜೀವನ ಸಾಗಿಸುವ ಸಂಕಲ್ಪವೇ ಈ ಕಾರ್ಯಕ್ರಮದ ಉದ್ದೇಶವೆಂದರು.

ಹೆಬ್ಬಾಳು ಸಹಿಪ್ರಾ ಶಾಲೆ ಮುಖ್ಯಶಿಕ್ಷಕ ಲೋಹಿತೇಶ್ ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲೆಯಲ್ಲಿ 694 ವಿದ್ಯಾರ್ಥಿಗಳಿದ್ದು, ಮೈಸೂರಿನಲ್ಲಿಯೇ ಅತಿ ಹೆಚ್ಚು ವಿದ್ಯಾರ್ಥಿಗಳನ್ನು ಹೊಂದಿರುವ ಶಾಲೆಯಾಗಿದೆ. 2 ಕೋಟಿ ಅನುದಾನದಲ್ಲಿ ಶಾಲೆಯನ್ನು ಹೈಟೆಕ್ ಆಗಿ ಅಭಿವೃದ್ಧಿಪಡಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಮೂವತ್ತು ವಿದ್ಯಾರ್ಥಿಗಳು ವಚನ ವಾಚನ ಮತ್ತು ಗಾಯನ ನಡೆಸಿ ಕಾರ್ಯಕ್ರಮಕ್ಕೆ ಮೆರುಗು ತಂದರು. ಮಕ್ಕಳ ಸ್ಪಷ್ಟ ಉಚ್ಚಾರಣೆ ಹಾಗೂ ಭಾವಪೂರ್ಣ ಗಾಯನ ಎಲ್ಲರ ಮನಸೆಳೆಯಿತು. ವಚನ ಪಠಣದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ವಚನದೀವಿಗೆ ಪ್ರಮಾಣ ಪತ್ರ ಹಾಗೂ ವಚನ ಪುಸ್ತಕಗಳನ್ನು ವಿತರಿಸಿ ಪ್ರೋತ್ಸಾಹಿಸಲಾಯಿತು.

ಕನ್ನಡ ಶಿಕ್ಷಕಿ ಕವಿತ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶರಣು ವಿಶ್ವವಚನ ಫೌಂಡೇಷನ್ ಕೇಂದ್ರೀಯ ಸಂಚಾಲಕ ವಿ. ಲಿಂಗಣ್ಣ, ಉಪಾಧ್ಯಕ್ಷ ಶಿವಪುರ ಉಮಾಪತಿ, ಶಿಕ್ಷಕರಾದ ಜೆ ದೀಪ, ಕೆ.ವಿ.ಮೀನಾಕ್ಷಮ್ಮ, ಎಸ್.ಬಿ ನವೀನ್ ಕುಮಾರ್ ಉಪಸ್ಥಿತರಿದ್ದರು.

ಇರಾನ್ ಡ್ರೋನ್ ದಾಳಿಯಲ್ಲಿ ಅಮೆರಿಕದ 6 ಸೈನಿಕರು ಸಾವು

ವಾಷಿಂಗ್ಟನ್: ಕುವೈತ್‌ನ ಟ್ಯಾಕ್ಟಿಕಲ್ ಆಪರೇಷನ್ ಸೆಂಟರ್ ಮೇಲೆ ಇರಾನ್ ನಡೆಸಿದ ಡ್ರೋನ್ ದಾಳಿಯಲ್ಲಿ ನಮ್ಮ ದೇಶದ ಆರು ಸೈನಿಕರು ಮೃತಪಟ್ಟಿದ್ದಾರೆ ಎಂದು ಅಮೆರಿಕದ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ. ಈ ಕೇಂದ್ರವು ಶುಐಬಾ ಬಂದರಿನ ಹೃದಯಭಾಗದಲ್ಲಿದ್ದು, ಅಮೆರಿಕದ ಮುಖ್ಯ ಸೇನಾ ನೆಲೆ ಕ್ಯಾಂಪ್ ಅರಿಫ್ಜಾನ್‌ನಿಂದ ಹಲವು ಮೈಲಿ ದೂರದಲ್ಲಿದೆ ಎಂದು ವರದಿಯಾಗಿದೆ.

ಇಸ್ರೇಲ್ ಜೊತೆಗೂಡಿ ಅಮೆರಿಕವು ಇರಾನ್ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ಕುವೈತ್, ಬಹ್ರೇನ್, ಯುಎಇ ಮತ್ತು ಸೌದಿ ಅರೇಬಿಯಾದಲ್ಲಿ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಇರಾನ್ ಪ್ರತೀಕಾರದ ದಾಳಿ ನಡೆಸುತ್ತಿದೆ ಸೈನಿಕರು ಸಾವಿನ ವರದಿಯ ಬೆನ್ನಲ್ಲೇ, ಅಮೆರಿಕ ಸೇನೆಯ ಸುರಕ್ಷತಾ ಮುನ್ನೆಚ್ಚರಿಕೆಗಳ ಬಗ್ಗೆ ಗಂಭೀರ ಪ್ರಶ್ನೆಗಳು ಎದ್ದಿವೆ.

ಈ ನಡುವೆ, ಸಾವು–ನೋವುಗಳ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ವೈಮಾನಿಕ ರಕ್ಷಣಾ ವ್ಯವಸ್ಥೆಯನ್ನು ಭೇದಿಸಿ ಬಂದ ಕ್ಷಿಪಣಿಯಿಂದ ಟ್ಯಾಕ್ಟಿಕಲ್ ಆಪರೇಷನ್ ಸೆಂಟರ್‌ನಲ್ಲಿದ್ದ ಆರು ಸೈನಿಕರು ಹತರಾಗಿದ್ದಾರೆ ಎಂದು ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ತಿಳಿಸಿದ್ದಾರೆ.

ಕಾವೇರಿ ಕಪ್: ಅಂತರ ಕಾಲೇಜು ಮಟ್ಟದ ಪಂದ್ಯಾವಳಿ



ಮೈಸೂರು, ಮಾ. 4– ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾವೇರಿ ಕಪ್–2026 (30 ಯಾರ್ಡ್ ಕ್ರಿಕೆಟ್) ಅಂತರ ಕಾಲೇಜು ಮಟ್ಟದ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು.

ಸುಮಾರು 23 ತಂಡಗಳು ವಿವಿಧ ಕಾಲೇಜುಗಳಿಂದ ಭಾಗವಹಿಸಿದ್ದವು. ಈ ವೇಳೆ ಶ್ರೀ ಕಾವೇರಿ ಶಿಕ್ಷಣ ಮಂಡಳಿ ಅಧ್ಯಕ್ಷ ಸಿ.ಯು. ಚೆಂಗಪ್ಪ, ಗೌರವ ಖಜಾಂಚಿ ಕೆ.ಪಿ.ಕಾರ್ಯಪ್ಪ, ಕಾವೇರಿ ಪ್ರಥಮ ದರ್ಜೆ ಕಾಲೇಜು ಆಡಳಿತಾಧಿಕಾರಿ ಡಾ. ಸಿ.ಇ.ಸುಬ್ರಮಣ್ಯ, ಪ್ರಿನ್ಸಿಪಾಲ್ ಕಾರ್ತಿಕ್ ಉಪಸ್ಥಿತರಿದ್ದರು.

ಕಾವೇರಿ ಕಪ್–2026 (30 ಯಾರ್ಡ್ ಕ್ರಿಕೆಟ್) ಅಂತರ ಕಾಲೇಜು ಮಟ್ಟದ ಪಂದ್ಯಾವಳಿಯಲ್ಲಿ ಯುವರಾಜ ಕಾಲೇಜಿನ ತಂಡದವರು ಜಯಶಾಲಿಯಾಗುವುದರೊಂದಿಗೆ ಟ್ರೋಫಿಯನ್ನು ಪಡೆದುಕೊಂಡರು. ಶ್ರೀ ಕಾವೇರಿ ಪ್ರಥಮ ದರ್ಜೆ ಕಾಲೇಜು ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು.

ಪುಸ್ತಕ ಕೊಡುಗೆ



ಚಾಮರಾಜನಗರ ಅಭ್ಯಾಸಿ ಕಲಾ ತಂಡದ ಗ್ರಂಥಾಲಯಕ್ಕೆ ಕದಂಬ ರಂಗವೇದಿಕೆ ಇನ್ನೂರು ಪುಸ್ತಕಗಳನ್ನು ಕೊಡುಗೆಯಾಗಿ ನೀಡಿತು. ಅಭ್ಯಾಸಿ ತಂಡದ ಮುಖ್ಯಸ್ಥ ಕಿರಣ್ ಗಿರ್ಗಿ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಅವರಿಂದ ಸ್ವೀಕರಿಸಿದರು. ಗಾಯಕ ದೇವಾನಂದ ವರಪ್ರಸಾದ್, ಅಶ್ವತ್ಥ ಕದಂಬ, ಅಭ್ಯಾಸಿ ತಂಡದ ಕಲಾವಿದರು ಈ ವೇಳೆ ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆಯಲ್ಲಿ ಜೈವಿಕ ತಂತ್ರಜ್ಞಾನದ ಪಾತ್ರ; ಅರಿವು

ಮೈಸೂರು, ಮಾ.4– ಜೈವಿಕ ತಂತ್ರಜ್ಞಾನ ವಿಭಾಗದಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಪರಿಸರ ಸಂರಕ್ಷಣೆಯಲ್ಲಿ ಜೈವಿಕ ತಂತ್ರಜ್ಞಾನದ ಪಾತ್ರ ವಿಷಯದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಜೆಎಸ್‌ಎಸ್ ಮಹಿಳಾ ಕಾಲೇಜಲ್ಲಿ ಆಯೋಜಿಸಲಾಗಿತ್ತು.



ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಶ್ರೀಮತಿ ಜಯಶ್ರೀ, ಕೈಗಾರಿಕಾ ಮಲಿನ ಜಲ ಶುದ್ಧೀಕರಣ, ಜೈವ ಇಂಧನ ಉತ್ಪಾದನೆ, ಕಸ ನಿರ್ವಹಣೆ ಮತ್ತು ಜೈವ ವಿಲೀನ ಪ್ಲಾಸ್ಟಿಕ್ ಅಭಿವೃದ್ಧಿಯಲ್ಲಿ ಜೈವಿಕ ತಂತ್ರಜ್ಞಾನದ ಪಾತ್ರವನ್ನು ವಿವರಿಸಿದರು.

ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳು ಸಂಶೋಧನೆ ಮತ್ತು ನವೀನ ತಂತ್ರಜ್ಞಾನಗಳ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹವಾಮಾನ ಬದಲಾವಣೆ, ಭೂಮಿಯ ಉಷ್ಣತೆ ಏರಿಕೆ ಮತ್ತು ಜಲಮಾಲಿನ್ಯ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯಲು ಜೈವಿಕ ತಂತ್ರಜ್ಞಾನ ಅತ್ಯಂತ ಪರಿಣಾಮಕಾರಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಭಾಗದ ಮುಖ್ಯಸ್ಥರಾದ ಡಾ. ಅಭಿಜಿತ್ ಎಂ ಸಿಂಗ್, ಅಧ್ಯಾಪಕರುಗಳು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ತಿ.ನರಸೀಪುರ ರೇಷ್ಮೆ ಕಾರ್ಖಾನೆ ನೌಕರರ ಹೋರಾಟದಲ್ಲಿ ಕನ್ನಡ ಸೇನೆ



ತಿ.ನರಸೀಪುರದ ಕೆಎಸ್‌ಐಸಿ ನೂಲು ತಯಾರಿಕಾ ಘಟಕ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಬುಧವಾರ ಕನ್ನಡ ಸೇನೆ–ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಪಾಲ್ಗೊಂಡು ಬೆಂಬಲ ಸೂಚಿಸಿದರು.

ಮೈಸೂರು.ಮಾ.4(ಎಂಟಿವೈ)– ತಿ.ನರಸೀಪುರದ ಕೆಎಸ್‌ಐಸಿ ನೂಲು ತಯಾರಿಕಾ ಘಟಕ ಆವರಣದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ 14ನೇ ದಿನಕ್ಕೆ ಕಾಲಿಟ್ಟಿದ್ದು, ಬುಧವಾರ ಕನ್ನಡ ಸೇನೆ–ಕರ್ನಾಟಕ ಸಂಘಟನೆಯ ಕಾರ್ಯಕರ್ತರು ಪಾಲ್ಗೊಂಡು, ಬೆಂಬಲ ಸೂಚಿಸಿದರು.

ರೇಷ್ಮೆ ನೂಲು ತಯಾರಿಕಾ ಘಟಕದ ಮುಂಭಾಗ ನೌಕರರು ನಡೆಸುತ್ತಿರುವ ಧರಣಿಯಲ್ಲಿ ಕನ್ನಡ ಸೇನೆ–ರ್ಕಾಟಕ ಸಂಘಟನೆಯ ಕಾರ್ಯಕರ್ತರು ಪಾಲ್ಗೊಂಡು ನೂಲು ತಯಾರಿಕಾ ಘಟಕದ ಆವರಣದಲ್ಲಿ ಜಿಲ್ಲಾ ತಾಲೂಕು ಕ್ರೀಡಾಂಗಣ ನಿರ್ಮಾಣ ಮಾಡಬಾರದು. ಮೈಸೂರು ರೇಷ್ಮೆಗೆ ಎಲ್ಲಿಲ್ಲದ ಬೇಡಿಕೆಯಿದ್ದು, ನೂಲು ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಈ ಹಿನ್ನೆಲೆಯಲ್ಲಿ ಕಾರ್ಖಾನೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಉದ್ದೇಶಿಸಿರುವ 5.08 ಎಕರೆ ಭೂಮಿಯನ್ನು ಯಾವುದೇ ಕಾರಣಕ್ಕೂ ಕ್ರೀಡಾಂಗಣ ನಿರ್ಮಾಣಕ್ಕೆ ನೀಡಬಾರದು ಎಂದು ಆಗ್ರಹಿಸಿದರು.

ಈ ವೇಳೆ ಸಂಘಟನೆಯ ಅಧ್ಯಕ್ಷ ಬೈರಾಪುರ ಕೆ.ರಾಜು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ನಿರ್ಮಿಸಿರುವ ಆಧುನಿಕ ತಂತ್ರಜ್ಞಾನ ಒಳಗೊಂಡ ಕಾರ್ಖಾನೆಯಾಗಿದ್ದು, ನೂರಾರು ಮಂದಿ ಉದ್ಯೋಗಿಗಳು ಬದುಕು ಕಟ್ಟಿಕೊಂಡಿದ್ದಾರೆ. ನೂಲು ತಯಾರಿಕಾ ಘಟಕವನ್ನೇ ನಂಬಿ ಜೀವನ ಸಾಗಿಸುತ್ತಿದ್ದಾರೆ. ಈಗ ಸರ್ಕಾರ ಕಾರ್ಖಾನೆ ಆವರಣದಲ್ಲೇ ಕ್ರೀಡಾಂಗಣ ನಿರ್ಮಿಸಲು ಹೊರಟಿರುವ ಬೆಳವಣಿಗೆ ಸರಿಯಲ್ಲ. ಸರ್ಕಾರದ ನಡೆ ಅವೈಜ್ಞಾನಿಕವಾಗಿದ್ದು ಇಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡುವುದರಿಂದ ಅನೇಕ ಸಮಸ್ಯೆಗಳು ಎದುರಾಗಲಿವೆ. ಮುಂದೆ ಫ್ಯಾಕ್ಟರಿ ಮುಚ್ಚುವ ಪರಿಸ್ಥಿತಿ ಬರಬಹುದು. ಸರ್ಕಾರ ಈ ಜಾಗದಲ್ಲಿ ಕ್ರೀಡಾಂಗಣ ನಿರ್ಮಿಸುವ ಯೋಜನೆ ಕೈ ಬಿಟ್ಟು ಬೇರೆಡೆ ಜಾಗ ಗುರುತಿಸಿ ಕ್ರೀಡಾಪಟುಗಳಿಗೆ ಅನುಕೂಲ ಕಲ್ಪಿಸಿಕೊಡುವಂತೆ ಅವರು ಒತ್ತಾಯಿಸಿದರು.

ಸಂಘಟನೆಯ ಮಂಡ್ಯ ಜಿಲ್ಲಾಧ್ಯಕ್ಷ ಮಂಜುನಾಥ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅವರ ತವರು ಕ್ಷೇತ್ರ ವ್ಯಾಪ್ತಿಗೆ ಒಳಪಡುವ ಈ ನೂಲು ತಯಾರಿಕಾ ಘಟಕದ ಜಾಗದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಬಾರದು. ಸಚಿವರ ಕ್ಷೇತ್ರದಲ್ಲಿ ಹೆಣ್ಣು ಮಕ್ಕಳು ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ.ಈ ಕಡೆ ಗಮನ ಹರಿಸಿ ನೀವು ಅವರ ಸಮಸ್ಯೆ ಬಗೆಹರಿಸಬೇಕಿದೆ. 100 ವರ್ಷಗಳ ಇತಿಹಾಸ ಇರುವ ಕಾರ್ಖಾನೆಯನ್ನು ಮೈಸೂರು ಮಹಾರಾಜರು ನಿರ್ಮಿಸಿದ್ದಾರೆ. ಕಾರ್ಮಿಕರ ಸಭೆ ಕರೆದು ಹಾಗೂ ಜನಾಭಿಪ್ರಾಯ ಸಂಗ್ರಹ ಮಾಡದೇ ಏಕಾಏಕಿ ಕ್ರೀಡಾಂಗಣ ನಿರ್ಮಾಣ ಮಾಡಲು ಆದೇಶ ಮಾಡಿರುವುದು ಖಂಡನೀಯ ಎಂದರು.

ಪ್ರತಿಭಟನೆಯಲ್ಲಿ ಸಂಘಟನೆಯ ಜಿಲ್ಲಾಧ್ಯಕ್ಷ ಹೆಚ್.ಎಸ್.ರಾಚಪ್ಪಾಚಾರಿ, ಮೈಸೂರು ಜಿಲ್ಲಾಧ್ಯಕ್ಷೆ ಶೈಲಜಾ, ಜಿಲ್ಲಾ ಕಾರ್ಮಿಕ ಘಟಕದ ಅಧ್ಯಕ್ಷ ಆರ್.ಸಿದ್ದರಾಜು, ಗೌರವಾಧ್ಯಕ್ಷೆ ದಾಕ್ಷಾಯಣಿ, ಯಶೋದಮ್ಮ, ಗೀತಾ, ಜಿಲ್ಲಾ ಉಪಾಧ್ಯಕ್ಷ ಎಂ.ಮಲ್ಲೇಶ್, ಪ್ರಕಾಶ್, ಕಾಳಸ್ವಾಮಿ, ನಾಗರಾಜು, ಪುಟ್ಟಸುಂದರ, ತುಂಬಲ ಗಣೇಶ್, ತಬಲಾ ರಾಚಪ್ಪ, ಕೇಬಲ್ ಸ್ವಾಮಿ, ಸೋಮಣ್ಣ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಪೀಪಲ್ ಫಾರ್ ಅನಿಮಲ್ಸ್‌ನಿಂದ ಮತ್ತೊಂದು ಸ್ತುತ್ಯಾರ್ಹ ಕಾರ್ಯ; ಕಾಲು ಮುರಿದ ಕುದುರೆಗೆ ಹೊಸ ಚೈತನ್ಯ!

ಮೈಸೂರು, ಮಾ.4(ಎಂಕೆ)– ಮೈಸೂರಲ್ಲಿ ಮೊದಲ ಬಾರಿಗೆ ಕಾಲು ಮುರಿದುಕೊಂಡು ಗಂಭೀರವಾಗಿ ಗಾಯಗೊಂಡಿದ್ದ ಹೆಣ್ಣು ಕುದುರೆಗೆ ಕೃತಕ ಕಾಲು ಜೋಡಣೆ ಮಾಡುವ ಮೂಲಕ ಪೀಪಲ್ ಫಾರ್ ಅನಿಮಲ್ಸ್(ಪಿಎಫ್ಎ) ಮಾನವೀಯತೆ ಮೆರೆದಿದೆ.

ಇಲವಾಲ ಹೋಬಳಿಯ ಸಾಹುಕಾರ ಹುಂಡಿ ಸಮೀಪ ಎರಡು ತಿಂಗಳ ಹಿಂದೆ ಎಡ ಮುಂಗಾಲು ಮುರಿದುಕೊಂಡು ಬಿದ್ದಿದ್ದ ಕುದುರೆಯನ್ನು ರಕ್ಷಣೆ ಮಾಡಿದ ಪೀಪಲ್ ಫಾರ್ ಅನಿಮಲ್ಸ್ ಮೈಸೂರು ಸಂಸ್ಥೆ, ಈಗ ಕುದುರೆಗೆ ಹೊಸ ಚೈತನ್ಯ ನೀಡುವಲ್ಲಿ ಯಶಸ್ವಿಯಾಗಿದೆ.

ಸಂಪೂರ್ಣವಾಗಿ ಮೂಳೆ ಮುರಿದು, ಬರೀ ಚರ್ಮದಿಂದ ಜೋತಾಡುತ್ತಿದ್ದ ಕಾಲು ನೋವಿನಿಂದ ಕಂಗೆಟ್ಟಿದ್ದ ಹೆಣ್ಣು ಕುದುರೆಯನ್ನು ತಮ್ಮ ಆಶ್ರಯಕ್ಕೆ ಸ್ಥಳಾಂತರಿಸಿದ ಪಿಎಫ್ಎ, ತುರ್ತು ಚಿಕಿತ್ಸೆ ನೀಡಿ ಚೇತರಿಕೆ ಬಳಿಕ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ.

ಪಶುವೈದ್ಯರಾದ ಡಾ.ಅಮರ್‌ದೀಪ್ ಸಿಂಗ್ ಹಾಗೂ ಡಾ.ಕಿರಣ್ ಕುದುರೆಯನ್ನು ಪರಿಶೀಲಿಸಿ ಮುರಿದಿದ್ದ ಕಾಲನ್ನು ತೆಗೆಯಬೇಕು ಎಂದು ತಿಳಿಸಿದ ಬಳಿಕ ಶಸ್ತ್ರ ಚಿಕಿತ್ಸೆ ನಡೆಸಿ, ಮುರಿದಿದ್ದ ಕಾಲಿನ ಭಾಗವನ್ನು ಬೇರ್ಪಡಿಸಲಾಯಿತು. ನಂತರ 2 ತಿಂಗಳ ಕಾಲ ನೀಡಿದ ಪೋಷಣೆಯಿಂದ ಚೇತರಿಕೆ ಕಂಡ ಕುದುರೆಗೆ ಬೆಂಗಳೂರಿನ ಏರೋ ನಾಟಿಕಲ್ ಇಂಜಿನಿಯರ್ ಸುಪ್ರಿತ್‌ಗೌಡ ಮತ್ತು ಅವರ ತಂಡ (ಗೋಪಾಲನ್ ಕಾಲೇಜು ಆಫ್ ಇಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿಗಳು) ದೀರ್ಘಕಾಲೀನ ಬಾಳಿಕೆ ಮತ್ತು ಕುದುರೆಯ ಭಾರವನ್ನು ನಿರ್ವಹಿಸುವ ಸಾಮರ್ಥ್ಯವುಳ್ಳ (ಕಸ್ಟಮೈಸ್ಡ್ ಪ್ರೊಸ್ಥೆಟಿಕ್ ಲಿಂಬ್) ಕೃತಕ ಕಾಲನ್ನು ಅಭಿವೃದ್ಧಿಪಡಿಸಿ ಅಳವಡಿಸಲಾಗಿದೆ.



ತನ್ನ ಹೊಸ ಕೃತಕ ಕಾಲಿನಲ್ಲಿ ತಿರುಗಾಡುವುದನ್ನು ಅಭ್ಯಾಸ ಮಾಡುತ್ತಿರುವ ಕುದುರೆಗೆ ಹೊಸ ಜೀವನ ಕಳೆ ದೊರೆತಂತಾಗಿದೆ. ತಂತ್ರಜ್ಞಾನ ಮತ್ತು ಕರುಣೆ ಒಂದಾಗಿ ಕೆಲಸ ಮಾಡಿದಾಗ ಪ್ರಾಣಿ ಕಲ್ಯಾಣ ಕಾರ್ಯ ಸಾರ್ಥಕತೆ ಸಾಧ್ಯವಾಗಲಿದೆ ಎಂದು ಪಿಎಫ್ಎ ಮೈಸೂರು ವ್ಯವಸ್ಥಾಪಕ ಟ್ರಸ್ಟಿ ಸವಿತಾ ನಾಗಭೂಷಣ್ ಕೃತಜ್ಞತೆ ವ್ಯಕ್ತಪಡಿದ್ದಾರೆ.

ಸಂಪುಟದ ನಿರ್ಧಾರದಂತೆ 56,432 ಹುದ್ದೆಗಳಿಗೆ ಒಳ ಮೀಸಲಾತಿ ಜಾರಿಯಾಗದಿದ್ದರೆ ಉಗ್ರ ಹೋರಾಟ

ಕರ್ನಾಟಕ ಸಾಮಾಜಿಕ ನ್ಯಾಯಪರ ವೇದಿಕೆ ಅಧ್ಯಕ್ಷ ಅರುಣ್‌ಕುಮಾರ್ ಎಚ್ಚರಿಕೆ

- ಸಚಿವ ಮಹದೇವಪ್ಪರಿಂದ ಸಂಪುಟ ನಿರ್ಧಾರದ ವಿರುದ್ಧ ಷಡ್ಯಂತ್ರ
- ರಾಜ್ಯ ಸರ್ಕಾರದ ಮಟ್ಟದಲ್ಲಿ ಮಾದಿಗರ ವಿರುದ್ಧ ವ್ಯವಸ್ಥಿತ ಪಿತೂರಿ

ಮೈಸೂರು,ಮಾ.4(ಜಿಎ)–ಸಚಿವ ಸಂಪುಟದಲ್ಲಿ ತೆಗೆದುಕೊಂಡಿರುವ ನಿರ್ಧಾರದಂತೆ 56,432 ಹುದ್ದೆಗಳ ನೇಮಕಾತಿ ವೇಳೆ ಒಳ ಮೀಸಲಾತಿ ಜಾರಿಯಾಗದಿದ್ದರೆ, ಉಗ್ರ ಹೋರಾಟ ನಡೆಸಲಾಗುವುದು ಎಂದು ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾದಿಗ ಸಮುದಾಯದ ವಿರುದ್ಧ ಸಾಕಷ್ಟು ಹುನ್ನಾರಗಳು ನಡೆಯುತ್ತಿವೆ. ಮತ್ತೊಂದೆಡೆ ಪರಿಶಿಷ್ಟ ಜಾತಿಗೆ ಒಳ ಮೀಸಲಾತಿ ಜಾರಿ ಮಾಡುವ ವಿಚಾರದಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮೊದಲ ದಿನದಿಂದಲೂ ವಿರೋಧ ಮಾಡಿಕೊಂಡು ಬಂದಿದ್ದು, ಈಗ ಸಂಪುಟ ನಿರ್ಧಾರದ ವಿರುದ್ಧವೇ ದೊಡ್ಡ ಷಡ್ಯಂತ್ರ ಮಾಡಿ, ಕುತಂತ್ರದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಹ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು.

ಧಾರವಾಡದಲ್ಲಿ ನಿರುದ್ಯೋಗಿ ಯುವಕರು ಸರ್ಕಾರದ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ ಎಂದು ದೊಡ್ಡಮಟ್ಟದ ಹೋರಾಟ ಮಾಡಿದ ನಂತರ ಮುಖ್ಯಮಂತ್ರಿಗಳು ಒಳ ಮೀಸಲಾತಿಗಾಗಿ ಸಂಪುಟ ಸಭೆ ನಡೆಸಿ, ಅಂದಿನ ಸಭೆಯಲ್ಲಿ ಅಡಿಷನಲ್ ಅಡ್ವೋಕೇಟ್ ಜನರಲ್ ನೀಡಿದ ಸಲಹೆ ಪಡೆದುಕೊಂಡರು.

ಅದರಂತೆ '19–11–25ರಂದು ಒಳ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಆದೇಶ 2022ರ ಕಾಯ್ದೆಗೆ ನ್ಯಾಯಾಲಯ ತಡೆಯಾಜ್ಞೆ ನೀಡಿದ್ದು, ಇದರಿಂದಾಗಿ ಸುಮಾರು 56,432 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ಸ್ಥಗಿತಕೊಂಡಿದೆ. ನೇಮಕಾತಿ ಪ್ರಕ್ರಿಯೆಯನ್ನು ತುರ್ತಾಗಿ ನಿರ್ಧರಿಸಬೇಕಿರುವುದರಿಂದ ಹಾಗೂ ನ್ಯಾಯಾಲಯದ ಮಧ್ಯಂತರ ಆದೇಶದ ಹಿನ್ನೆಲೆಯಲ್ಲಿ 28–12–22ರ ಆದೇಶದ ಪೂರ್ವದಲ್ಲಿ ಜಾರಿಯಲ್ಲಿದ್ದ ಮೀಸಲಾತಿ ರೋಸ್ಟರ್ ಬಿಂದುವಿನಂತೆ (ಮೀಸಲಾತಿ ಪ್ರಮಾಣ ಶೇ.50ಕ್ಕೆ) ಹೊಸ ನೇಮಕಾತಿ ಮಾಡುವಂತೆ ಅಧಿಸೂಚನೆ ಹೊರಡಿಸಿದ್ದಾರೆ. ಈ ಕುರಿತು ಸಂಪುಟ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಈ ಆದೇಶ ಹೊರಡಿಸಿದ ನಂತರ ಮಾದಿಗರ ಬದ್ಧ ವೈರಿ ಮಹದೇವಪ್ಪ ಮತ್ತು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ ಡಿ.ರಂದೀಪ್ ಸೇರಿಕೊಂಡು ಡಿಪಿಎಆರ್‌ನಲ್ಲಿ 1995 ಮತ್ತು 2022ರ ಪದ್ಧತಿಯಡಿ ಒಳ ಮೀಸಲಾತಿ ಜಾರಿ ಮಾಡಿ ನೇಮಕಾತಿ ಮಾಡುವಂತೆ ಆದೇಶಿಸಿ, ಕ್ಯಾಬಿನೆಟ್ ಆದೇಶ ಧಿಕ್ಕರಿಸಿದ್ದಾರೆ ಎಂದು ದೂರಿದರು.

ಒಳ ಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಮಹೇಂದ್ರಕುಮಾರ್ ಮಿತ್ರ ಮತ್ತು ಅಲೆಮಾರಿ ಸಮುದಾಯದವರು ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವಿಚಾರಣೆಯಲ್ಲಿದ್ದು, ಮಹೇಂದ್ರ ಕುಮಾರ್ ಮಿತ್ರ ಪರಿಶಿಷ್ಟ ಜಾತಿಗೆ ಶೇ.15 ರಿಂದ ಶೇ.17ಕ್ಕೆ ಮೀಸಲಾತಿ ನೀಡಿರುವುದು ಕಾನೂನುಬಾಹಿರವಾಗಿದೆ ಎಂದು ಚಾಲೆಂಜ್ ಮಾಡಿ, ಅದು ಕಾನೂನು ಬಾಹಿರ ಆಗಿರುವುದರಿಂದ ರಾಜ್ಯ ಸರ್ಕಾರ ಪರಿಶಿಷ್ಟ ಜಾತಿಗೆ ಶೇ.15ರಿಂದ ಶೇ.17 ಹಾಗೂ ಪರಿಶಿಷ್ಟ ಪಂಗಡಕ್ಕೆ ಶೇ.3ರಿಂದ 7ರಷ್ಟು ನೀಡಬೇಕು ಎಂದು ಚೀಫ್ ಜಸ್ಟೀಸ್ ಆಫ್ ಕರ್ನಾಟಕ ಅವರಲ್ಲಿ ಕೋರಿದ್ದಾರೆ. ಶೇ.17ರಷ್ಟು ನೀಡಲು ಸಾಧ್ಯವಿಲ್ಲ ಎಂದು ಚೀಫ್ ಜಸ್ಟೀಸ್ ಆಫ್ ಕರ್ನಾಟಕ ತಿಳಿಸಿದ್ದಾರೆ. ಈ ವೇಳೆ ಅಡ್ವೋಕೇಟ್ ಜನರಲ್ ಆಫ್ ಕರ್ನಾಟಕ ಅವರು 17ರಷ್ಟು ಹೊಸ ನೇಮಕಾತಿ ಪ್ರಕ್ರಿಯೆ ಮಾಡಬೇಡಿ ಎಂದು ಆದೇಶ ಮಾಡಿದ್ದಾರೆ.

ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಹಿಂದುಳಿದ, ಅತೀ ಹಿಂದುಳಿದವರಿಗೆ ಮೀಸಲಾತಿ ನೀಡಬೇಕಿತ್ತು. ಆದರೆ, ನಮ್ಮನ್ನೂ ಬೋವಿ, ಲಂಬಾಣಿ, ಬಂಜಾರ, ಸಮುದಾಯದ ಜೊತೆ ಸೇರಿಸಿರುವುದರಿಂದ ಸುಪ್ರೀಂಕೋರ್ಟ್ ಆದೇಶದ ಉಲ್ಲಂಘನೆ ಆಗಿದೆ ಎಂದು ಅಲೆಮಾರಿ ಸಮುದಾಯದವರು ಅರ್ಜಿ ಸಲ್ಲಿಸಿದ್ದಾರೆ. ಅಂತಿಮ ಆದೇಶದ ನಂತರ ನೇಮಕಾತಿ ಮಾಡಬೇಕು ಎಂದು ತಿಳಿಸಿದ್ದಾರೆ ಎಂದರು.

ಮುಖ್ಯಮಂತ್ರಿಗಳ ಅಂದಿನ ಸಂಪುಟ ಸಭೆಯಲ್ಲಿ ಅಡಿಷನಲ್ ಅಡ್ವೋಕೇಟ್ ಜನರಲ್ 'ಮೀಸಲಾತಿಗೆ ಸಂಬಂಧಿಸಿದಂತೆ ಸರ್ಕಾರ ಯಾಕೆ ಪರ್ಯಾಯ ಮಾರ್ಗ ಹುಡುಕುತ್ತಿಲ್ಲ? ಶೇ.100ರಲ್ಲಿ ಶೇ.6ನ್ನು ಬೇರ್ಪಡಿಸಿ, ಹೊಸದಾಗಿ ಶೇ.94ಕ್ಕೆ ಮೀಸಲಾತಿ ನೀಡಿ ಮುಂದುವರೆಸಿ, ಶೇ.6ಕ್ಕೆ ಅಂತಿಮ ತೀರ್ಪು ಬಂದ ನಂತರ ಅದನ್ನು ಸಾಮಾನ್ಯಕ್ಕೆ ಸೇರಿಸಬೇಕೋ ಅಥವಾ ಪರಿಶಿಷ್ಟ ಪಂಗಡ, ಪರಿಶಿಷ್ಟ ಜಾತಿಗೆ ನೀಡಬೇಕೋ ಎಂಬುದು ನಿರ್ಧಾರ ಆದ ನಂತರ ಹೊಸ ನೇಮಕಾತಿ ಅಧಿಸೂಚನೆ ಹೊರಡಿಸಿದ್ದಾರೆ ಎಂದು ವಿವರಿಸಿದರು.

ಈಗ ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್ ಡಿಪಿಎಆರ್‌ನಲ್ಲಿ 1995 ಮತ್ತು 2022ರ ಪದ್ಧತಿಯಂತೆ ನೇಮಕಾತಿ ಆರಂಭಿಸುವುದರಿಂದ ನಮ್ಮ ಸಮುದಾಯಕ್ಕೆ ನಷ್ಟವಾಗಲಿದೆ. ಕಾನೂನಿನ ಮೂಲಕ ಇದನ್ನು ಪ್ರಶ್ನಿಸುವುದು ಕಷ್ಟ. ಇದೇ ರೀತಿ ಆಂಧ್ರಪ್ರದೇಶದ ಡಿಪಿಎಆರ್ ಅನ್ನು ಪ್ರಶ್ನಿಸಿ, ಮಂಜುಶ್ರೀ ವರ್ಸಸ್ ಆಂಧ್ರಪ್ರದೇಶ ಪ್ರಕರಣದಲ್ಲಿ 'ಒಂದು ಬಾರಿ ಹುದ್ದೆಗಳಿಗೆ ಆದೇಶಗಳನ್ನು ಹೊರಡಿಸಿದರೆ ಬದಲಾವಣೆ ಮಾಡಲು ಸಾಧ್ಯವಿಲ್ಲ' ಎಂದು ಹೈಕೋರ್ಟ್ ತೀರ್ಪು ನೀಡಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಿರಿಯ ವಕೀಲರಾದ ಮಾಳಪ್ಪ ಕುರ್ಕಿ, ಶಿವಕುಮಾರ್ ಎಂ.ಬೆಳ್ಳೂರು, ಎಂ.ಆರ್. ಸುರೇಂದ್ರ ಕುಮಾರ್, ಸಿದ್ದಯ್ಯ, ಮಲ್ಲು, ಬೂದಿತಿಟ್ಟು ರಾಜೇಂದ್ರ, ದಾಸಯ್ಯ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಮಾತನಾಡಿದರು.

> ಸರ್ಕಾರದ ಮಟ್ಟದಲ್ಲಿ ಮಾದಿಗರ ವಿರುದ್ಧ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಸಚಿವರಾದ ಮಹದೇವಪ್ಪ, ಪ್ರಿಯಾಂಕ್ ಖರ್ಗೆ, ಡಾ.ಜಿ.ಪರಮೇಶ್ವರ್ ಹಾಗೂ ಹಿರಿಯ ಅಧಿಕಾರಿ ರಂದೀಪ್ ಅವರು ಒಂದೇ ಸಮುದಾಯಕ್ಕೆ ಸೇರಿದ್ದು, ಇವರೆಲ್ಲರೂ ಸೇರಿ ಮಾದಿಗ ಸಮುದಾಯಕ್ಕೆ ನಿರಂತರ ಅನ್ಯಾಯ ಎಸಗುತ್ತಿದ್ದಾರೆ. ಮಹದೇವಪ್ಪ ಅಂಡ್ ಟೀಮ್ ಡಿಪಿಆರ್ ಸೆಕ್ಷನ್ ಅನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ನಾಯಕ ಸಮುದಾಯವನ್ನು ಕೂಡ ತುಳಿಯುವ ಕೆಲಸ ಮಾಡುತ್ತಿದ್ದಾರೆ.
> –ಅರುಣ್‌ಕುಮಾರ್

ಖಮೇನಿ ಹತ್ಯೆ ಖಂಡಿಸಿ ಪ್ರತಿಭಟನೆ; ನಿಯಮ ಉಲ್ಲಂಘಿಸುವವರ ವಿರುದ್ಧ ಕೇಸ್ ದಾಖಲು

ಗೃಹ ಸಚಿವ ಪರಮೇಶ್ವರ್ ಎಚ್ಚರಿಕೆ

ಬೆಂಗಳೂರು: ಅಮೆರಿಕ ಮತ್ತು ಇಸ್ರೇಲ್ ನಡೆಸಿದ ಜಂಟಿ ವೈಮಾನಿಕ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯನ್ನು ಖಂಡಿಸಿ ರಾಜ್ಯದಲ್ಲಿ ಪ್ರತಿಭಟನೆಗಳು ನಡೆದಿದ್ದು, ನಿಯಮಗಳನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸುವವರ ವಿರುದ್ಧ ಪ್ರಕರಣಗಳು ದಾಖಲಾಗಿವೆ ಎಂದು ಗೃಹ ಸಚಿವ ಜಿ ಪರಮೇಶ್ವರ ಬುಧವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಪ್ರತಿಭಟನೆಗಳ ಬಗ್ಗೆ ದೃಢವಾದ ನಿಲುವನ್ನು ತೆಗೆದುಕೊಂಡಿದೆ ಮತ್ತು ನಗರದಲ್ಲಿ ಯಾವುದೇ ಸಭೆ ಸೇರಲು ಅನುಮತಿ ಅಗತ್ಯವಿದೆ ಎಂದರು.



"ಅನುಮತಿ ಇಲ್ಲದೆ ನಿಯಮಗಳನ್ನು ಉಲ್ಲಂಘಿಸಿ ಪ್ರತಿಭಟನೆ ನಡೆಸಿದರೆ ನಾವು ಪ್ರಕರಣಗಳನ್ನು ದಾಖಲಿಸುತ್ತೇವೆ. ಮೊದಲನೆಯದಾಗಿ, ಅವರು ಬೆಂಗಳೂರು ನಗರದಲ್ಲಿ ಅನುಮತಿಯಿಲ್ಲದೆ ಪ್ರತಿಭಟನೆ ನಡೆಸಬಾರದು. ನಾವು ಪ್ರಕರಣಗಳನ್ನು ದಾಖಲಿಸಿದ್ದೇವೆ ಮತ್ತು ಅವರನ್ನು ಬೀದಿಗೆ ಬರಲು ಬಿಡುವುದಿಲ್ಲ ಎಂದು ಗೃಹ ಸಚಿವರು ಎಚ್ಚರಿಸಿದರು.

ಹೈಕೋರ್ಟ್ ಆದೇಶದ ಪ್ರಕಾರ ಫ್ರೀಡಂಪಾರ್ಕ್‌ನಲ್ಲೇ ಪ್ರತಿಭಟನೆ ನಡೆಯಬೇಕು. ಆದರೆ ಫ್ರೀಡಂಪಾರ್ಕ್ ಅನ್ನು ಬಿಟ್ಟು ಹೊರಗೆ ಪ್ರತಿಭಟನೆ ನಡೆಯದಂತೆ ಎಚ್ಚರಿಕೆ ವಹಿಸಿದ್ದೇವು. ಏಕಾಏಕಿ ಬೀದಿಗೆ ಬಂದು ಪ್ರತಿಭಟನೆ ಮಾಡುವುದು ನಿಯಮ ಬಾಹಿರ. ಇದರ ವಿರುದ್ಧ ದೂರು ಸ್ವೀಕರಿಸಲಾಗಿದೆ. ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಖಮೇನಿ ಹತ್ಯೆಯನ್ನು ವಿರೋಧಿಸಿ ಶಿಯಾ ಮುಸ್ಲಿಂ ಸಮುದಾಯದ ಮಹಿಳೆಯರು ಬೆಂಗಳೂರಿನಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಚಿಕ್ಕಮಗಳೂರಿನಲ್ಲಿ ಭಾನುವಾರ ಅಖಿಲ ಭಾರತ ಶಿಯಾ ಕೌನ್ಸಿಲ್ ಸದಸ್ಯರು ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕಾರರು ಅಯತೊಲ್ಲಾ ಅಲಿ ಖಮೇನಿ ಅವರ ಸಾವಿಗೆ ಸಂತಾಪ ಸೂಚಿಸಿ, ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಾರ್ವಜನಿಕ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಪೊಲೀಸರು ಈ ಪ್ರದೇಶದಲ್ಲಿ ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿದ್ದರು.

'ಬ್ರಹ್ಮೋಸ್' ಕ್ಷಿಪಣಿ ತಯಾರಿಕಾ ಘಟಕಕ್ಕೆ 180 ಎಕರೆ ಭೂಮಿ ನೀಡಿದ ಕೇರಳ

ತಿರುವನಂತಪುರ: 'ಬ್ರಹ್ಮೋಸ್' ಕ್ಷಿಪಣಿ ತಯಾರಿಕಾ ಘಟಕಕ್ಕೆ ಉಚಿತವಾಗಿ 180 ಎಕರೆ ಭೂಮಿಯನ್ನು ನೀಡಲು ಕೇರಳ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ವರದಿಯಾಗಿದೆ. ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

'ಬ್ರಹ್ಮೋಸ್' ಕ್ಷಿಪಣಿ ತಯಾರಿಕಾ ಘಟಕ ಸ್ಥಾಪಿಸಲು ತಿರುವನಂತಪುರ ಜಿಲ್ಲೆಯ ಕಟ್ಟಕಾಡ ತಾಲೂಕಿನ ಕಳ್ಳಿಕ್ಕಾಡ್ ಹಳ್ಳಿಯ 180 ಎಕರೆ ಭೂಮಿಯನ್ನು ನೀಡಲಾಗುತ್ತದೆ. ಈ ಘಟಕದಲ್ಲಿ ಅತ್ಯಾಧುನಿಕ ಕ್ಷಿಪಣಿಗಳು ಮತ್ತು ಇನ್ನಿತರ ಯುದ್ಧ ಪರಿಕರಗಳನ್ನು ನಿರ್ಮಾಣ ಮಾಡಲಾಗುತ್ತದೆ ಎಂದು ಕೇರಳ ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

2022ರಲ್ಲಿ ನಡೆದ 22ನೇ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತಕ್ಕೆ ಎರಡು ಪದಕಗಳನ್ನು ತಂದುಕೊಟ್ಟಿದ್ದ ಟ್ರೀಸಾ ಜಾಲಿಗೆ ಸರ್ಕಾರಿ ಉದ್ಯೋಗ ನೀಡುವ ಕುರಿತು ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗಿದೆ. ಟ್ರೀಸಾ ಅವರಿಗೆ ರಾಜ್ಯ ಸರಕು ಮತ್ತು ಸೇವಾ ತೆರಿಗೆ ಇಲಾಖೆಯಲ್ಲಿ ಸೂಪರ್‌ನ್ಯೂಮರರಿ ಹುದ್ದೆಯನ್ನು ನೀಡಲು ಸರ್ಕಾರ ಮುಂದಾಗಿದೆ.

ಇಂದು ದಾಖಲಾತಿ ಆಂದೋಲನ

ಮೈಸೂರು, ಮಾ.4– 2026–27ನೇ ಸಾಲಿನ ದಾಖಲಾತಿ ಹೆಚ್ಚಳಕ್ಕಾಗಿ ಮಾ.5 ರಂದು ಬೆಳಗ್ಗೆ 10.30ಕ್ಕೆ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ರಾಜೇಂದ್ರ ನಗರ ಕರ್ನಾಟಕ ಪಬ್ಲಿಕ್ ಶಾಲೆ (ಪ್ರಾಥಮಿಕ ವಿಭಾಗ)ಯ ಪದವೀಧರ ಮುಖ್ಯಶಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀರಶೈವ ಲಿಂಗಾಯತ ಸಮುದಾಯ ಅವಹೇಳನ; ಮಹಿಳಾ ಆಯೋಗದ ಅಧ್ಯಕ್ಷರ ವಿರುದ್ಧ ಪ್ರತಿಭಟನೆ



ವೀರಶೈವ ಲಿಂಗಾಯತ ಸಮುದಾಯದ ವಿರುದ್ಧ ಅವಹೇಳನಾಕಾರಿ ಹೇಳಿಕೆ ನೀಡಿರುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌದರಿ ಅವರ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸುತ್ತಿರುವುದು.

ಮೈಸೂರು, ಮಾ.4(ಎಸ್‌ಪಿಎನ್)– ವೀರಶೈವ ಲಿಂಗಾಯತ ಸಮುದಾಯ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌದರಿ ಅವರಿಂದ ರಾಜ್ಯ ಸರ್ಕಾರ ರಾಜೀನಾಮೆ ಪಡೆಯಬೇಕು ಹಾಗೂ ಅವರ ವಿರುದ್ಧ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಜರುಗಿಸುವಂತೆ ಒತ್ತಾಯಿಸಿ ವೀರಶೈವ ಲಿಂಗಾಯತ ಯುವವೇದಿಕೆಯ ಪದಾಧಿಕಾರಿಗಳು ಜೆಎಸ್‌ಎಸ್ ಮಹಾವಿದ್ಯಾಪೀಠದ ಸಮೀಪದ ಬಸವ ಪುತ್ಥಳಿ ಬಳಿ ಬುಧವಾರ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವವನ್ನು ವಹಿಸಿದ್ದ ಯುವ ವೇದಿಕೆಯ ಸಂಚಾಲಕ ತೇಜಸ್ವಿ ನಾಗಲಿಂಗಸ್ವಾಮಿ, ನಾಗಲಕ್ಷ್ಮೀಚೌಧರಿ ವಿರುದ್ಧ ವಿವಿಧ ಘೋಷಣೆಗಳುಳ್ಳ ಫಲಕ ಪ್ರದರ್ಶಿಸಿದರು. ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಖಾಸಗಿವಾಹಿನಿಯಲ್ಲಿ ಸಂದರ್ಶನ ನೀಡುವಾಗ ಘಟನೆಯೊಂದನ್ನು ಉಲ್ಲೇಖಿಸಿ ವೀರಶೈವ ಲಿಂಗಾಯತ ಸಮುದಾಯ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಇವರ ಹೇಳಿಕೆಯಿಂದ ವೀರಶೈವ ಸಮುದಾಯಕ್ಕೆ ನೋವುಂಟಾಗಿದೆ. ಜವಾಬ್ದಾರಿ ಸ್ಥಾನದಲ್ಲಿರುವವರು ತಮ್ಮ ಸ್ಥಾನಕ್ಕೆ ಗೌರವ ತರುವ ಹೇಳಿಕೆ ನೀಡಬೇಕು ಎಂದು ಹೇಳಿದರು.

ಈ ಕೂಡಲೇ ರಾಜ್ಯ ಸರ್ಕಾರ ವೀರಶೈವ ಲಿಂಗಾಯತರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ರಾಜೀನಾಮೆ ಪಡೆದು, ಅವರ ವಿರುದ್ಧ ಕಾನೂನು ಕ್ರಮಜರುಗಿಸುವಂತೆ ಒತ್ತಾಯಿಸಿದರು. ಈ ವೇಳೆ ಜನರಿಗಾಗಿ ಸೇವಾ ಸಮಿತಿ ಅಧ್ಯಕ್ಷ ಮಹೇಶ್ ಕುಮಾರ್, ಮುಖಂಡರಾದ ಪುಟ್ಟಬುದ್ಧಿ, ನಂಜುಂಡಸ್ವಾಮಿ, ವೈಟ್ ನವೀನ್, ಮೂರ್ತಿ, ಆಟೋ ನಂಜುಂಡಸ್ವಾಮಿ, ನವೀನ್, ಮಣಿ, ನಾಗಮಣಿ, ತ್ರಿವೇಣಿ, ಗೌರಮ್ಮ, ಜಿ.ಮಹದೇವಮ್ಮ,ನೀಲವೇಣಿ, ಕಮಲ, ಶಿಲ್ಪ, ಸರ್ವಮಂಗಳ ಸೇರಿದಂತೆ ಇನ್ನಿತರಿದ್ದರು.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು. ಜೆ.ಎಲ್.ಬಿ.ರಸ್ತೆ, ಮೈಸೂರು
ಸಂಖ್ಯೆ: ಮೈಅಪ್ರಾ/ವಿ.ತ–1/ಪಿ.ಆರ್. /2025–26

ಪತ್ರಿಕಾ ಪ್ರಕಟಣೆ

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶ್ರೀ. ಪಾರ್ಥಸಾರಥಿ ಕೇರಾಫ್ ಎಂ.ಆರ್.ನಾಗರಾಜ #07 ಡಬಲ್ ರೋಡ್, ಕುವೆಂಪುನಗರ, ಮೈಸೂರು ರವರಿಗೆ ನಾಚನಹಳ್ಳಿ (ಜೆ.ಪಿ.ನಗರ) 1ನೇ ಹಂತ 'ಡಿ' ಬ್ಲಾಕ್ ಬಡಾಣೆಯ ನಿವೇಶನ ಸಂಖ್ಯೆ–251 ಅಳತೆ 30 X 40 ಅಡಿಗಳ ನಿವೇಶನವು ದಿನಾಂಕ: 19.03.1984 ರಂದು ಮಂಜೂರಾಗಿದ್ದು, ದಿನಾಂಕ 07.09.1988 ರಂದು ಗುತ್ತಿಗೆ ಸಹಿತ ಕ್ರಯ ಒಪ್ಪಂದದ ಪತ್ರ ನೀಡಲಾಗಿದ್ದು, ದಿನಾಂಕ 16.07.1996 ರಂದು ಸ್ವಾಧೀನ ಪತ್ರ ಪಡೆದಿರುತ್ತಾರೆ.

ಮೂಲ ಮಂಜೂರಾತಿದಾರರಾದ ಶ್ರೀ ಪಾರ್ಥಸಾರಥಿ ರವರು ದಿನಾಂಕ 20.08.1996 ರಂದು ಮೈಸೂರು ಮಹಾನಗರ ಪಾಲಿಕೆಯಲ್ಲಿ ಉತ್ತರ ಪತ್ರ ಪಡೆದಿರುತ್ತಾರೆ. ನಂತರ ಮಂಜೂರಾತಿದಾರರು ದಿನಾಂಕ 02.01.2025 ರಂದು ಮರಣ ಹೊಂದಿದ್ದು, ವಂಶವೃಕ್ಷದಂತೆ ಮೃತರ ಪತ್ನಿಯಾದ ಶ್ರೀಮತಿ ಅಮೃತೂರ್ ನಾರಾಯಣ ಶೆಟ್ಟಿ ರಾಜಲಕ್ಷ್ಮಿ ಮತ್ತು ಮಕ್ಕಳಾದ ಶ್ರೀ ಮೋಹನ್.ಪಿ.ಎಸ್, ಶ್ರೀ ಜಯಂತ್.ಪಿ.ಎಸ್, ಶ್ರೀ ನಾಗೇಶ್ ಪಾರ್ಥಸಾರಥಿ ರವರು ಜಂಟಿ–ಯಾಗಿ ವರ್ಗಾಯಿಸಿ ವರ್ಗಾವಣೆ/ಕ್ರಯಪತ್ರವನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಾಚನಹಳ್ಳಿ(ಜೆ.ಪಿ.ನಗರ) 1ನೇ ಹಂತ 'ಡಿ' ಬ್ಲಾಕ್ ಬಡಾವಣೆಯ ನಿವೇಶನ ಸಂಖ್ಯೆ–251 ಅಳತೆ 30X40 ಅಡಿಗಳ ನಿವೇಶನವನ್ನು #ಎ–14. ರಮಣ ಮಹರ್ಷಿ ರಸ್ತೆ, 'ಜೆ' ಬ್ಲಾಕ್, ಕುವೆಂಪುನಗರ, ಮೈಸೂರು–570023 ರಲ್ಲಿ ವಾಸಿಸುವ ಶ್ರೀಮತಿ ಅಮೃತೂರ್ ನಾರಾಯಣ ಶೆಟ್ಟಿ ರಾಜಲಕ್ಷ್ಮಿ, ಶ್ರೀ ಮೋಹನ್.ಪಿ.ಎಸ್, ಶ್ರೀ ಜಯಂತ್.ಪಿ.ಎಸ್, ಶ್ರೀ ನಾಗೇಶ್ ಪಾರ್ಥಸಾರಥಿ ರವರುಗಳ ಹೆಸರಿಗೆ ನಿವೇಶನ ಪೌತಿ ಆಧಾರದ ಮೇಲೆ ವರ್ಗಾವಣೆ ಮಾಡಿ ಕ್ರಯಪತ್ರ ನೀಡಲು ಯಾರಿಂದಾದರೂ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ 30 ದಿವಸಗಳೊಳಗೆ ಲಿಖಿತವಾಗಿ ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರಿಗೆ ಆಕ್ಷೇಪಣೆ/ತಕರಾರು ಸಲ್ಲಿಸುವುದು. ನಿಗಧಿತ ಅವಧಿಯೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಅರ್ಜಿದಾರರ ಮನವಿ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸಹಿ/– ವಿಶೇಷ ತಹಶಿಲ್ದಾರ್
ವಲಯ ಕಛೇರಿ–1
ಮೈ.ಅ.ಪ್ರಾ. ಮೈಸೂರು
ದಿನಾಂಕ: 03.03.2026

ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಉಪ ಆಯುಕ್ತರು (ಆಡಳಿತ)ರವರ ಕಛೇರಿ ಸಯ್ಯಾಜಿರಾವ್ ರಸ್ತೆ, ಮೈಸೂರು–570002

ಟೆಂಡರ್ ಪ್ರಕಟಣೆ ಸಂಖ್ಯೆ:ಮೈನಪಾ/ಉ.ಆ(ಆಡಳಿತ)/ತೋವಿ/444/2025–26 ದಿನಾಂಕ:02.03.2026

ಬಹಿರಂಗ ಹರಾಜು ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಸೂಕ್ತ ಕೆ/ಎಸ್ ಮೂಲಕ ನಿಯಮದನ್ವಯ ಸೀವೇಜ್ ಫಾರಂನಲ್ಲಿ ಬೆಳೆಯುವ ಹಸಿ ಹುಲ್ಲನ್ನು 2 ವರ್ಷಗಳ ಅವಧಿಗೆ ಮಾರಾಟ ಮತ್ತು ನಿರ್ವಹಣೆಗಾಗಿ ರೂಢಿಸಿಕೊಳ್ಳಲು ಬಹಿರಂಗ ಹರಾಜು ಪ್ರಕಟಣೆಗೆ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಹಾಗೂ ದೂರವಾಣಿ ಸಂಖ್ಯೆ 8747839791 ರಿಂದ ಮಾಹಿತಿ ಪಡೆಯಬಹುದು. ಈ ಕೆಳಕಂಡಂತೆ ನಿಗದಿ ಪಡಿಸಿದ ಇಎಂಡಿಯನ್ನು ಬಹಿರಂಗ ಹರಾಜು ನಡೆಯುವ ಸಮಯದ ಒಂದು ಘಂಟೆ ಮುಂಚಿತವಾಗಿ ಸಲ್ಲಿಸತಕ್ಕದ್ದು, ಇಎಂಡಿಯು ಹರಾಜಿನ ನ್ಯಾಯಸಮ್ಮತ ಮಾನ್ಯತಾ ಅವಧಿಗಿಂತ (ವ್ಯಾಂಡಿಟಿ ಪೀರಿಯಡ್) 45 ದಿನಗಳ ನಂತರದ ವರೆಗೆ ಮಾನ್ಯತೆ ಇರತಕ್ಕದ್ದು.

ಕ್ರ ಸಂ	ಕಾಮಗಾರಿ ಹೆಸರು	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	ಮೈಸೂರು ಮಹಾನಗರ ಪಾಲಿಕೆಯ ಸೀವೇಜ್ ಫಾರಂನಲ್ಲಿ ಬೆಳೆಯುವ ಹಸಿ ಹುಲ್ಲನ್ನು 2 ವರ್ಷಗಳ ಅವಧಿಗೆ ಮಾರಾಟ ಮತ್ತು ನಿರ್ವಹಣೆಗಾಗಿ ರೂಡಿಸಿಕೊಳ್ಳುವುದು	40,000-00

ವಿಶೇಷ ಸೂಚನೆ:

1) **ದಿನಾಂಕ 13.03.2026 ರಂದು ಬೆಳಗ್ಗೆ 11.00 ಘಂಟೆಗೆ** ಸೀವೇಜ್ ಫಾರಂನಲ್ಲಿ ಬಹಿರಂಗ ಹರಾಜು ನಡೆಯಲಿದ್ದು, ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ರೂ.40,000/– ಮುಂಗಡವನ್ನು ಪಾವತಿಸಿ ಭಾಗವಹಿಸಬಹುದಾಗಿರುತ್ತದೆ. ಅತೀ ಹೆಚ್ಚಿನ ಬಿಡ್ ಸಲ್ಲಿಸುವವರ ಬಿಡ್ಡನ್ನು ಆಯ್ಕೆ ಮಾಡಲಾಗುವುದು.
2) ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ, ಮೈಸೂರುರವರು ಹೊಂದಿರುತ್ತಾರೆ.
3) ಹರಾಜಿನ ದಿನ ಯಾವುದೇ ಅನಿರೀಕ್ಷಿತ ಸರ್ಕಾರಿ ರಜೆ ಘೋಷಣೆ ಆದಲ್ಲಿ ಮರುದಿನ ಅದೇ ಸಮಯಕ್ಕೆ ಅದೇ ಸ್ಥಳದಲ್ಲಿ ಸದರಿಹರಾಜನ್ನು ನಡೆಸಲಾಗುವುದು.
4) ಹರಾಜಿನಲ್ಲಿ ಭಾಗವಹಿಸಿದ ಬಿಡ್ಡುದಾರರು 7 ದಿನಗಳ ಒಳಗಾಗಿ ಹರಾಜಿನ ಮೌಲ್ಯದ ಮೊತ್ತವನ್ನು ಪಾವತಿಸಿ ರಶೀದಿ ಪಡೆಯುವುದು. ತಪ್ಪಿದಲ್ಲಿ ಅವರು ಕಟ್ಟದ ಇಎಂಡಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5) ಆಸಕ್ತ ಬಿಡ್ಡುದಾರರು **ಬೆಳಿಗ್ಗೆ 9–00 ಘಂಟೆಯಿಂದ ಸಂಜೆ 5–00 ಘಂಟೆವರೆಗೆ** ಸೀವೇಜ್ ಫಾರಂಗೆ ಭೇಟಿ ನೀಡಿ ಹುಲ್ಲಿನ ಫಸಲನ್ನು ಪರಿಶೀರಿಸಿಕೊಳ್ಳಬಹುದಾಗಿರುತ್ತದೆ.
6) ವಿವರಗಳನ್ನು ಮೇಲೆ ತಿಳಿಸಿರುವ ದೂರವಾಣಿ ಮುಖೇನ ಅಥವಾ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.
7) ಹೆಚ್ಚಿನ ವಿವರಗಳನ್ನು ಈ ಕಚೇರಿಯಲ್ಲಿ ಹಾಕಲಾಗಿರುವ ಸೂಚನಾ ಫಲಕದಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/1773/ಶಿರಡಿಸಾಯಿ/2025–26

PUBLIC CAUTION NOTICE

The general public at large are hereby notified that We SR Book Agency having it's office at #1131/2, Sarvajanika Hostel main Road, 9th cross, Vidyaranyapuram near silk factory circle, Mysuru-570008(Ph. No.7204996319 & Email: srbookagency26@gmail.com) hereby bring to the attention of the General Public that we are running a business in distribution of Text Books, Note Books and Stationaries at the above said address. We are no way related/connected or associated with Mysore Book Agency who was earlier tenant in the said premises.
The general public are hereby cautioned to take note of the same and not to be mislead in any manner.

For S.B. Book Distributors
Sd/- Proprietor / Manager